
# ಚಿತ್ರಕಲಾ ಶಿಕ್ಷಣದ ಪಠ್ಯ ವಸ್ತು
## ಒಂದರಿಂದ ಹತ್ತನೆಯ ತರಗತಿಯವರೆಗೆ

### ಕಲೆ ಮತ್ತು ಅಭಿವ್ಯಕ್ತಿ




ಕೃತಿರಚನಾ ಸಮಯದಲ್ಲಿ ಅಪೇಕ್ಷಿತ ವಿಷಯ, ರಚನಾ ವಿಧಾನ, ಬಳಸಿದ ತಂತ್ರಗಾರಿಕೆ, ಅಚ್ಚುಕಟ್ಟುತನ, ಬಣ್ಣಲೇಪನ, ಸಂಯೋಜನೆ, ಆಕಾರಗಳ ಸಮೂಹ ತಿದ್ದಿಬರೆಯುವಿಕೆ, ಆಯ್ಕೆ, ನೀಡುವ ಒಟ್ಟು ಅಭಿಪ್ರಾಯ, ಅಭಿವ್ಯಕ್ತಿ, ಗ್ರಹಿಕೆ ಸ್ಥಳಾವಕಾಶದ ಬಳಕೆ, ಮೆಚ್ಚುವಿಕೆ, ಪ್ರದರ್ಶನದ / ಪ್ರಾತ್ಯಕ್ಷಿಕೆಯ ಮೂಲಕ ಚಿತ್ರಕಲಾ ಶಿಕ್ಷಣವನ್ನು ಚಿತ್ರಕಲಾ ಶಿಕ್ಷಕರ ವೈಯ್ಯಕ್ತಿಕ ಸಾಮರ್ಥ್ಯದೊಂದಿಗೆ ಸೂಕ್ತ ಮಾರ್ಗದರ್ಶನ ತಿಳಿಸುವುದು.

- ಕಲಾ ಇತಿಹಾಸ ಮತ್ತು ರಸಗ್ರಹಣ
  History of Art and Art Appreciation
- ಚಿತ್ರಕಲಾ ರಚನೆ
  Picture Drawing
  - ಚಿತ್ರಕಲೆಯ ಮೂಲಭೂತ ಅವಶ್ಯಕಗಳು ಮತ್ತು ಚಿತ್ರಕಲಾ ಶಾಸ್ತ್ರ
    Fundamentals of Drawing and Theory Drawing
  - ಪ್ರಾತ್ಯಕ್ಷಿಕೆ
    Practical
    - ಹಂತಗಳು Stages
      Steps
      - ಅನುಕರಣ ಚಿತ್ರ
        Imitation
        1. ಅನುಕರಣ ಚಿತ್ರ ಎಂದರೇನು?
        2. ಅನುಕರಣ ಚಿತ್ರ ಅಭ್ಯಾಸದ ಉದ್ದೇಶಗಳು
        3. ಅನುಕರಣ ಚಿತ್ರಗಳನ್ನು ಹೇಗೆ ಬರೆಯುವುದು
        4. ಅನುಕರಣ ಚಿತ್ರದಲ್ಲಿ ಅಭ್ಯಾಸ ಭಾಗಗಳು

        ↓ 1
      - ವೀಕ್ಷಣಾ ಚಿತ್ರ
        Observation
        1. ವೀಕ್ಷಣಾ ಚಿತ್ರ ಎಂದರೇನು?
        2. ವೀಕ್ಷಣಾ ಚಿತ್ರ ಅಭ್ಯಾಸದ ಉದ್ದೇಶಗಳು
        3. ವೀಕ್ಷಣಾ ಚಿತ್ರಗಳನ್ನು ಹೇಗೆ ಬರೆಯುವುದು
           ವೀಕ್ಷಣಾ ಚಿತ್ರಗಳಲ್ಲಿ ವಿಧಗಳು
        4. ವೀಕ್ಷಣಾ ಚಿತ್ರಗಳಲ್ಲಿ ಅಭ್ಯಾಸ ಭಾಗಗಳು

        ↓ 2
      - ಚಿಂತನ ಚಿತ್ರ
        Imagination
        1. ಚಿಂತನ ಚಿತ್ರ ಎಂದರೇನು
        2. ಚಿಂತನ ಚಿತ್ರಗಳ ಅಭ್ಯಾಸದ ಉದ್ದೇಶಗಳು
        3. ಚಿಂತನ ಚಿತ್ರಗಳನ್ನು ಹೇಗೆ ಬರೆಯುವುದು
        4. ಚಿಂತನ ಚಿತ್ರಗಳಲ್ಲಿ ಮುಖ್ಯ ಭಾಗಗಳು

        ↓ 3
    - ಮಾಧ್ಯಮಗಳು
      Mediums
      - ರೇಖೆಗಳು
        Lines
      - ಛಾಯಾಗ್ರಹಣ
        Shades
      - ವರ್ಣಗಳು
        Colour
      - ಅನುಪಯೋಗಿ ವಸ್ತುಗಳು
        Wastes-Scraps

ಮುಂದುವರಿಯುವುದು

### 1

1. ವಿವಿಧ ವಿನ್ಯಾಸಗಳನ್ನು ನೋಡಿ ಬರೆಯುವುದು
2. ಹೂಗಳ ಚಿತ್ರಗಳು
3. ಪ್ರಾಣಿ ಪಕ್ಷಿಗಳ ಅಂಗಗಳ ಚಿತ್ರಗಳು
4. ಪ್ರಾಣಿ ಪಕ್ಷಿಗಳ ಚಿತ್ರಗಳು
5. ಮನುಷ್ಯ ಶರೀರದ ಭಾಗಗಳ ಚಿತ್ರಗಳು
6. ಮರಗಿಡಗಳ ಚಿತ್ರಗಳು
7. ಕ್ರಿಮಿಕೀಟಗಳ ಮಿಡಿತೆಗಳ ಚಿತ್ರಗಳು
8. ಜೀವಶಾಸ್ತ್ರದ ನಕ್ಷೆಗಳು
9. ಭೌತಶಾಸ್ತ್ರದ ನಕ್ಷೆಗಳು
10. ಸಮಾಜ ಪಾಠಗಳ ನಕ್ಷೆಗಳು
11. ಭೂಮಿತಿಯ ಆಕಾರಗಳು
12. ಅಕ್ಷರಗಳನ್ನು ನೋಡಿ ಬರೆಯುವುದು
13. ಇತರ ಯಾವುದೇ ಚಿತ್ರಗಳು

### 2

#### ನೈಸರ್ಗಿಕ ವಸ್ತುಗಳು
#### Objects from Nature

1. ಎಲೆಗಳು
2. ಹೂಗಳು
3. ಪ್ರಾಣಿಗಳು
4. ಪಕ್ಷಿಗಳು
5. ಶರೀರದ ಭಾಗಗಳು
6. ಕ್ರಿಮಿಕಿಟಗಳು
7. ಮಿಡಿತೆಗಳು
8. ಮರಗಿಡಗಳು
9. ನದಿ, ತೊರೆ
10. ಬೆಟ್ಟ, ಗುಡ್ಡ, ಮೋಡ
11. ಜೀವಶಾಸ್ತ್ರ ಪಾಠದ ನಿಜ ವಸ್ತುಗಳನ್ನು ನೋಡಿ ಬರೆಯುವುದು.

#### ನಿತ್ಯೋಪಯೋಗಿ ವಸ್ತುಗಳು
#### Objects from daily use

1. ವಿವಿಧ ಬಹು ಭುಜ ಘನಾಕೃತಿ
2. ಘನಮೂಲ ವಸ್ತುಗಳು
3. ಸ್ತಂಭಮೂಲ ವಸ್ತುಗಳು
4. ಶಂಕು ಆಕೃತಿಮೂಲ ವಸ್ತುಗಳು
5. ಗೋಳಾಕೃತಿಮೂಲ ವಸ್ತುಗಳು
6. ಇತರ ಘನಾಕೃತಿಮೂಲ ವಸ್ತುಗಳು
7. ಕಛೇರಿ ವಸ್ತುಗಳು
8. ವಿವಿಧ ವಸ್ತುಗಳು
9. ಕ್ರೀಡಾ ಸಾಮಗ್ರಿಗಳು
10. ಮರಮಟ್ಟಿನ ವಸ್ತುಗಳು
11. ಕೃಷಿ ಉಪಕರಣಗಳು
12. ವಾಹನಗಳು
13. ಭೌತಶಾಸ್ತ್ರ ಪಾಠದ ಪ್ರಯೋಗ ಶಾಲಾ ವಿವಿಧ ವಸ್ತುಗಳು.

### 3

#### ಅಲಂಕಾರಿಕ ವಿನ್ಯಾಸ (ನಕ್ಷೆ) ರಚನೆ ಮತ್ತು ವಸ್ತುಗಳಿಗೆ ಜೋಡಣೆ
#### Decorative Design Drawing and Application

##### ನಕ್ಷೆಯ ಮೂಲ ಆಕಾರಗಳು
##### Basic Forms of Design

1. ಭೂಮಿತಿಯ ಆಕಾರಗಳು
2. ನೈಸರ್ಗಿಕ ಆಕಾರಗಳು
3. ಅಲಂಕಾರಿಕ ಆಕಾರಗಳು
4. ಅಮೂರ್ತ ಆಕಾರಗಳು

##### ನಕ್ಷೆಯ (ವಿನ್ಯಾಸ) ನಿಯಮಗಳು
##### Principles of Design

1. ಪುನರಾವರ್ತನೆ Repetive
2. ಅದಲು ಬದಲು Alteration
3. ಸಮ ಆಕಾರ Symmetry
4. ಸಮ (ಭಾರ) ತೋಲ Balance
5. ಕಿರಣಿ ವಿಸ್ತಾರ Radiation
6. ಚಾಲನೆ Movement

##### ನಕ್ಷೆಯಲ್ಲಿ ವಿಧಗಳು
##### Types of Design

1. ಅಂಚು
2. ಸಂಪೂರ್ಣ ವ್ಯಾಪಕ
3. ವಿಶಿಷ್ಟ ಸ್ಥಳ ವ್ಯಾಪಕ (ಕೇಂದ್ರ) ಮೂಲೆ, ಎಡಬಲ ಮೇಲ್ಭಾಗ ತಳ

#### ಸ್ಮರಣ ಚಿತ್ರ
#### Memory Drawing

1. ನೋಡಿದ ಚಿತ್ರಗಳನ್ನು ಸ್ಮರಿಸಿಕೊಂಡು ಚಿತ್ರಿಸುವುದು
2. ನೋಡಿದ ವಸ್ತುಗಳನ್ನು ಸ್ಮರಿಸಿಕೊಂಡು ಬರೆಯುವುದು
3. ಪ್ರಕೃತಿಯ ಸಮಾಜದಲ್ಲಿನ ಘಟನೆ, ದೃಶ್ಯಗಳನ್ನು ಸ್ಮರಿಸಿಕೊಂಡು ಚಿತ್ರಿಸುವುದು
4. ಕಥಾ ಚಿತ್ರಗಳನ್ನು ಬರೆಯುವುದು.

#### ಭೂಮಿತಿ ಮತ್ತು ಅಕ್ಷರ ಲೇಖನ
#### Geometery and Lettering

1. ಸಮತಲ ರೇಖಾಗಣಿತ ಭೂಮಿತಿ
2. ಘನ ಭೂಮಿತಿ Plan/Solid Geometry
3. ಯಥಾ ಮಾನದರ್ಶನ ಚಿತ್ರ Isometric Geometery
4. ಕನ್ನಡ ಆಂಗ್ಲ ಭಾಷಾ ಅಕ್ಷರಗಳು

| ಮೌಲ್ಯಮಾಪನ | | ಪ್ರಾಥಮಿಕ ಅಂಕಗಳು | ಮಾಧ್ಯಮಿಕ ಅಂಕಗಳು | ಪ್ರೌಢಶಾಲೆ ಅಂಕಗಳು |
|---|---|---|---|---|
| **ಮೌಖಿಕ:** | ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ಪೂರ್ವಜ್ಞಾನ, ಗಳಿಸಿದ ಜ್ಞಾನಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವ ಮೂಲಕ (1 ರಿಂದ 4ನೇ ತರಗತಿಗೆ ಅನ್ವಯಿಸುವುದು) | 20 | – | - |
| **ಲಿಖಿತ (ತಾತ್ವಿಕ):** | ವಿಷಯವಾರು ಪ್ರಶ್ನೆಗಳನ್ನು ನೀಡಿ ಸಾಮರ್ಥ್ಯಾಧಾರಿತ ಉತ್ತರಗಳನ್ನು ಲಿಖಿತ ರೂಪದಲ್ಲಿ ಪಡೆಯುವ ಮೂಲಕ (5 ರಿಂದ 9ನೇ ತರಗತಿವರೆಗೆ) | – | 20 | 20 |
| **ಪ್ರಾಯೋಗಿಕ:** | ಅಪೇಕ್ಷಿತ ವಿಷಯವಾರು ನೀಡಿದ ವಿಷಯವನ್ನು ಪ್ರಾಯೋಗಿಕವಾಗಿ (ಕೃತಿರಚನೆಯ ಮೂಲಕ) ರಚಿಸಲು ಹೇಳುವುದು. ನೀಡಲಾದ ಅವಧಿಯೊಳಗೆ ರಚಿಸಲ್ಪಟ್ಟ ಕೃತಿಯ ಅಚ್ಚುಕಟ್ಟುತನ, ವಿಷಯ ಸಂಬಂಧಿಕೃತಿ, ಬಣ್ಣಲೇಪನ, ಸಂಯೋಜನೆ, ಆಕಾರಗಳ ಸಮೂಹ, ಆಯ್ಕೆ, ತಂತ್ರಗಾರಿಕೆ, ಅಭಿವ್ಯಕ್ತಿ ಮುಂತಾದವುಗಳನ್ನು ಗಮನಿಸಿ ಅಂಕ ನೀಡಬೇಕು. | 80 | 80 | 80 |
| | **ಒಟ್ಟು ಅಂಕಗಳು** | 100 | 100 | 100 |

# 1ನೆಯ ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು

- ☆ ವಿದ್ಯಾರ್ಥಿಗಳ ಮನಸ್ಸಿನ ಅನಿಸಿಕೆಗಳಿಗೆ ಹೊಂದುವಂತೆ ಚಿತ್ರವನ್ನು ರಚಿಸಲು ಮುಕ್ತ ಅವಕಾಶ ಕಲ್ಪಿಸುವುದು.
- ☆ ಬಣ್ಣಗಳು, ಪೆನ್ಸಿಲ್, ಪೇಸ್ಟಲ್ (ಬಳಪ) ಇತ್ಯಾದಿ ಪರಿಕರಗಳ ಪರಿಚಯ.
- ☆ ಬಣ್ಣಗಳ ಬಗ್ಗೆ ತಿಳಿಸುವುದು.
- ☆ ಬೆರಳುಗಳನ್ನು ಬಣ್ಣದಲ್ಲಿ ಅದ್ದಿ ಪೇಪರ್‌ನಲ್ಲಿ ಅಚ್ಚೊತ್ತುವುದು. (ಮುದ್ರಣ ಕಲೆ.)
- ☆ ಕೈಗಳು, ಬೆರಗಳುಗಳು, ಇನ್ನಿತರ ಆಕೃತಿಯ ವಸ್ತುಗಳನ್ನು ಪೇಪರ್‌ನ ಮೇಲೆ ಇಟ್ಟು ಪೆನ್ಸಿಲ್‌ನಿಂದ ಹೊರರೇಖೆಗಳನ್ನು ರಚಿಸುವುದು.
- ☆ ಅಚ್ಚು (ಮುದ್ರಣ) ಕಲೆ: ತರಕಾರಿ, ಎಲೆಗಳನ್ನು ಬಳಸಿ ಬಣ್ಣದಲ್ಲಿ ಅದ್ದಿ ಮುದ್ರಿಸುವುದು. ಪೇಪರ್‌ಗಳನ್ನು ಮುದ್ದೆ ಮಾಡಿ ಬಣ್ಣದಲ್ಲಿ ಅದ್ದಿ ಗುರುತು ಮೂಡಿಸುವುದು.
- ☆ ವೃತ್ತಗಳಿಂದ ಹಾಗೂ ವಿವಿಧ ಆಕಾರಗಳಿಂದ ಸುಲಭವಾಗಿ ಪ್ರಾಣಿ, ಪಕ್ಷಿಗಳ ಚಿತ್ರ ರಚನೆ.
- ☆ ಚುಕ್ಕೆಗಳ ಮುಖಾಂತರ ಚಿತ್ರರಚನೆ.
- ☆ ವಿವಿಧ ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ಕತ್ತರಿಸಿ, ಪುನಃ ಅವುಗಳನ್ನು ಜೋಡಿಸುವ ವಿಧಾನ.
- ☆ ವಿವಿಧ ಪಕ್ಷಿಗಳ ಅಂಗಾಂಗದ ಬಗ್ಗೆ ಪರಿಚಯ/ರಚನೆ.
- ☆ ಅಂಕಿಗಳನ್ನು ಬಳಸಿ ಚಿತ್ರರಚನೆ.
- ☆ ಜೇಡಿ ಮಣ್ಣಿನಿಂದ ಪ್ರಯೋಗಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆ.
- ☆ ಆಕರ್ಷಕ ಚಿತ್ರಗಳನ್ನು ಸಂಗ್ರಹಿಸುವುದು, ಅಂಟಿಸುವುದು.
- ☆ ಅನುಕರಣ. (ತದ್ರೂಪ ಚಿತ್ರರಚನೆ) ಚಿತ್ರಕ್ಕೆ ಅನುವು ಮಾಡುವುದು.
- ☆ ಅಚ್ಚುಕಟ್ಟುತನದಿಂದ, ಚಿತ್ರಕಲಾ ಪರಿಕರಣಗಳ ಜೋಪಾನವಾಗಿಡುವ ಗುಣವನ್ನು ಬೆಳೆಸಲು ಅಭ್ಯಾಸ ಮಾಡುವುದು.
- ☆ ಬಣ್ಣ ಬಣ್ಣದ ಗರಿಗಳ ಸಂಗ್ರಹ ಅವುಗಳನ್ನು ಅಂಟಿಸಿ ಹಕ್ಕಿಗಳ ಚಿತ್ರರಚನೆ.
- ☆ ವಿದ್ಯಾರ್ಥಿಗಳಿಗೆ ಚುಕ್ಕೆ, ಅಡ್ಡಗೆರೆ, ನೇರ, ಸುರಳಿ ಆಕಾರದ ಗೆರೆ (ರೇಖೆ)ಗಳನ್ನು ಹಾಕುವ ವಿಧಾನ.
- ☆ ಮಗು ಎಳೆದ (ಬರೆದ) ರೇಖೆಯಲ್ಲಿ ಚಿಹ್ನೆ, ವಿನ್ಯಾಸ, ಆಕಾರಗಳ ಪರಿಚಯ ಹಾಗೂ ಅವರ ಆಲೋಚನೆ, ಭಾವನೆ ಹಾಗೂ ಅಭಿಪ್ರಯಗಳಿಗೆ ಒಂದು ರೂಪ ಅಥವಾ ದೃಷ್ಠಿಯ ರೂಪ/ಗೋಚರಿಸುವ ರೂಪವನ್ನು ಬರುವ ವಿಧಾನ

# ಪಠ್ಯವಸ್ತು – 1ನೇ ತರಗತಿ

**ದೊರಕುವ ಒಟ್ಟು ಅವಧಿಗಳು : ವಾರಕ್ಕೆ 5 ಅವಧಿಗಳಂತೆ ವರ್ಷಕ್ಕೆ 175 ಅವಧಿಗಳು**

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ |
|---|---|---|---|
| 1 | 2 | 3 | 4 |
| **ಕಲ್ಪನಾ ಚಿತ್ರ (Imagination Drawing)** | 35 | • ಮಕ್ಕಳ ಇಚ್ಛೆಗೆ ಅನುಗುಣವಾಗಿ ವಿವಿಧ ಆಕೃತಿಗಳನ್ನು ಚಿತ್ರಿಸಿ ಹೆಸರಿಸುವುದು. ಮಣ್ಣು/ಮರಳನ್ನು ಸಮತಟ್ಟಾಗಿ ಹರಡಿಕೊಂಡು ಬೆರಳುಗಳಿಂದ ರೇಖೆಗಳನ್ನು ಮೂಡಿಸುವುದರ ಮೂಲಕ ಚಿತ್ರಿಸುವುದು.<br>• (ಆತ್ಮವಿಶ್ವಾಸ, ರಚನೆಯಲ್ಲಿ ತೊಡಗಿಸಿಕೊಳ್ಳುವಿಕೆ, ಆಕಾರ, ಗುಣಧರ್ಮ, ಕೌಶಲ ಮುಂತಾದವುಗಳ ಗುರಿಸಾಧನೆಗೆ ಅವಕಾಶ ಕಲ್ಪಿಸುವುದು)<br>• ಶಿಕ್ಷಕರ ಅಪೇಕ್ಷಿತ ವಿಷಯವನ್ನು ಚಿತ್ರಿಸಲು ಅವಕಾಶ ಕಲ್ಪಿಸುವುದು (ನನ್ನಮನೆ, ಮೆಚ್ಚಿನ ಪ್ರಾಣಿ, ಪಕ್ಷಿ ಮುಂತಾದವುಗಳು) | ಹಸ್ತಕ್ಕೂ ದೇಹಕ್ಕೂ ಸಂಯೋಜನೆಗೊಂಡು ಬರವಣಿಗೆಯ ವಿಚಾರದಲ್ಲಿ ಪೂರಕವಾಗಿದೆ.<br>ಕನ್ನಡ, ಪರಿಸರ ವಿಜ್ಞಾನ ಅಂಶಗಳನ್ನು ಅಳವಡಿಸಿಕೊಳ್ಳುವುದು. |
| **ಅನುಕರಣಾ ಚಿತ್ರರಚನೆ: (Copy & Draw)**<br>**ಮುದ್ರಣಕಲೆ (Printing Art)** | 30 | • ತಮಗೆ ಮೆಚ್ಚುಗೆ ಪಡೆದ ಚಿತ್ರಗಳನ್ನು ಅನುಕರಿಸಿ, ಅದೇರೀತಿಯಲ್ಲಿ ಬರೆಯಲು ಪ್ರಯತ್ನಿಸುವುದು. ಹಸ್ತಕೌಶಲ ವೃದ್ಧಿಗೆ ಸಹಕರಿಸುವುದು.<br>• ಕೈಬೆರಳು, ಹಸ್ತ, ಎಲೆ ಮತ್ತು ಬೀಜಗಳು ಮುಂತಾದವುಗಳನ್ನು ಉಪಯೋಗಿಸಿ ಮುದ್ರಿಸುವುದು. (ಸೌಂದರ್ಯ, ಸ್ವ ಅನುಭವ, ಆಲೋಚನೆ, ಕಲ್ಪನೆ, ಅಭಿವ್ಯಕ್ತಿಯ ಸ್ವಾತಂತ್ರ್ಯ) | ಬರವಣಿಗೆಗಳನ್ನು ಅನುಕರಿಸಲು ಕಲಿಯುವುದರೊಂದಿಗೆ ಇತರೆ ಪಾಠಗಳಿಗೆ ಅನುಕೂಲ<br>ಪರಿಸರ ಅಧ್ಯಯನದಲ್ಲಿರುವ ವಿವಿಧ ಬೀಜಗಳು ಕಲ್ಲುಗಳು, ಎಲೆಗಳು, ಹಸ್ತ, ಕೈ ಬೆರಳುಗಳನ್ನು ಬಳಸುವುದು. ಮಕ್ಕಳ ಮಾಂಸಖಂಡ, ನರಗಳ ಹತೋಟಿ ಪಡೆಯಲು ಪೂರಕ |
| ಕೊಲ್ಯಾಜ್ (ಅಂಟಿಸುವುದು) | 16 | • ಮುದ್ರಿತ ಅನುಪಯುಕ್ತ ಕಾಗದಗಳನ್ನು ಹರಿದು ಅಂಟಿಸುವುದರ ಮೂಲಕ ವಿವಿಧ ಆಕಾರಗಳನ್ನು ರಚಿಸುವುದು. | |

| 1 | 2 | 3 | 4 |
|---|---|---|---|
| | | (ಮಕ್ಕಳು ಸ್ವತಂತ್ರವಾಗಿ ಕಲಿಯುವಂತೆ ಮಾಡುವುದು ವಿಶೇಷತೆ, ಸೌಂದರ್ಯಾನುಭವ, ಕೌಶಲ ಮುಂತಾದ ಗುರಿಗಳನ್ನು ಸಾಧಿಸಲು ಪ್ರಯತ್ನಿಸುವುದು.) | |
| **ವಸ್ತು ಸಂಗ್ರಹಣೆ (ಉತ್ತಮ ಚಿತ್ರಗಳ ಸಂಗ್ರಹಣೆ)** | 10 | • ಪ್ರಾಕೃತಿಕ ವಿವಿಧ ವಸ್ತುಗಳು ಮತ್ತು ಮಾನವ ನಿರ್ಮಿತ ವಸ್ತುಗಳ ಸಂಗ್ರಹ ಮತ್ತು ವರ್ಗೀಕರಣ ಮಾಡಿ ಚಿತ್ರ ರಚನೆ (ಸಂಗ್ರಹ, ಕೌಶಲ, ಅನ್ವೇಷಣೆ, ಅಭಿರುಚಿ, ಆಸಕ್ತಿ, ಸೌಂದರ್ಯ ಮುಂತಾದವುಗಳ ಗುರಿಸಾಧನೆ | |
| **ಬಣ್ಣಗಳ ಪರಿಚಯ** | 05 | • ಬಣ್ಣಗಳ ಪರಿಚಯ, ಬಣ್ಣಲೇಪನ ವಿಧಾನ ತಿಳಿಸುವುದು. ಹಕ್ಕಿಗಳು, ಪ್ರಾಣಿಗಳು, ಹಣ್ಣುತರಕಾರಿಗಳ ಚಿತ್ರಕ್ಕೆ ಸೂಕ್ತಬಣ್ಣಗಳ ಆಯ್ಕೆ ಮಾಡಿ ಲೇಪಿಸುವುದನ್ನು ತಿಳಿಸುವುದು. | ಬಣ್ಣಗಳ ಜ್ಞಾನ (ಅರಿವು) ಬರುವುದು |
| **ಕಾಗದದ ಕೆಲಸ** | 30 | • ಬಣ್ಣದ ಕಾಗದಗಳನ್ನು ಉಪಯೋಗಿಸಿ ಮನೆ, ದೋಣಿ, ಅಂಗಿ, ಪೆಟ್ಟಿಗೆಗಳನ್ನು ತಯಾರಿಸುವುದು (ಸ್ಪರ್ಶಜ್ಞಾನ, ಸೌಂದರ್ಯಪ್ರಜ್ಞೆ, ಆಲೋಚನೆ, ಅಭಿವ್ಯಕ್ತಿ, ಆನಂದ, ಕೌಶಲ, ಬಳಕೆ ಮುಂತಾದ ಗುರಿಸಾಧನೆಗೆ ಅವಕಾಶ ಕಲ್ಪಿಸುವುದು.) | ಗಣಿತ ಪಾಠಕ್ಕೆ ಬಳಸುವುದು |
| **ಚುಕ್ಕಿ ಚಿತ್ರಗಳು** | 15 | • ಚುಕ್ಕಿಗಳಿಂದ ಮಕ್ಕಳ ಕಲ್ಪನಾ ಶಕ್ತಿಗೆ ಅವಕಾಶ ಕಲ್ಪಿಸಿ ಚಿತ್ರರಚನೆಗೆ ಉತ್ತೇಜನ ನೀಡುವುದು. ಚುಕ್ಕೆಗಳ ಸಮತೋಲನ, ವಿಸ್ತರಣೆ, ರೇಖೆಗಳ ಹೊಂದಾಣಿಕೆಯಿಂದ ಆಕಾರ, ಆಕೃತಿಗಳ ರಚನೆ ಮಾಡಿಸುವುದು. | |
| **ಜೇಡಿ ಮಣ್ಣಿನ ಕೆಲಸ (ಮಾದರಿ ತಯಾರಿ)** | 10 | • ಹದಮಾಡಿದ ಜೇಡಿ ಮಣ್ಣು, ಬಳಪ, ಕಟಕ, ಪೇಪರಿನ ಗೊಜ್ಜು(ಪಲ್ಪ್) ಮರಳು ಮುಂತಾದವುಗಳನ್ನು ಬಳಸಿ ಮಾದರಿ ತಯಾರಿಸುವುದು.<br>(ಪ್ರಾದೇಶಿಕ ಮಣ್ಣುಗಳ ಮತ್ತು ಮರಳುಗಳ ಸಂಗ್ರಹ, ಬಣ್ಣಗಳ ಗುರುತಿಸುವಿಕೆ, ಆಕೃತಿಗಳ ಕಲ್ಪನೆ, ಕೌಶಲ್ಯ, ಸೌಂದರ್ಯ ಜ್ಞಾನಾಭಿವೃದ್ಧಿ, ಆತ್ಮಸ್ಥೈರ್ಯ, ಕ್ರಿಯಾಶೀಲತೆ ಮುಂತಾದವುಗಳ ಗುರಿಸಾಧನೆ) | ಪರಿಸರ ವಿಜ್ಞಾನ ಪಾಠಕ್ಕೆ ಸಮನ್ವಯಗೊಳಿಸುವುದು. |

| 1 | 2 | 3 | 4 |
|---|---|---|---|
| **ಅಕ್ಷರ ಲೇಖನ** | 12 | • ಅಕ್ಷರಗಳ ರಚನೆ, ಪ್ರಮಾಣಬದ್ಧ ರಚನೆ:<br>ರೇಖೆಗಳು ಬಾಗುವಿಕೆ, ಲಾಲಿತ್ಯವನ್ನು ಅನುಸರಿಸಲು ತಿಳಿಸುವುದು | ಭಾಷಾ ಪಾಠಕ್ಕೆ ಸಮನ್ವಯ ಗೊಳಿಸುವುದು ಬರವಣಿಗೆಗೆ ಪೂರಕವಾಗಿದೆ. |
| **ಮುದ್ರಣ ಕಲೆ:** | 10 | • ಕೈಬೆರಳು, ಅಂಗೈಮುಷ್ಠಿ, ತೋರುಬೆರಳನ್ನು ಉಪಯೋಗಿಸಿ ವೈವಿಧ್ಯಮಯ ಆಕೃತಿಗಳ ರಚನೆ. (ಸೌಂದರ್ಯ ಪ್ರಜ್ಞೆ, ಕೌಶಲ್ಯ, ಬೆಳವಣಿಗೆ, ಅಭಿವ್ಯಕ್ತಿ, ಬೌದ್ಧಿಕ ವಿಕಾಸ, ಗ್ರಹಣ ಶಕ್ತಿ, ಆಲೋಚನಾ ಶಕ್ತಿ, ಸ್ವಚ್ಛತೆ ಮುಂತಾದ ಗುರಿಗಳ ಸಾಧನೆ)<br>• ದಾರವನ್ನು ಬಣ್ಣದಲ್ಲಿ ಅದ್ದಿ ಕಾಗದದ ಮಧ್ಯಭಾಗದಲ್ಲಿ ಮಡಿಚಿ ಮತ್ತೊಂದು ಭಾಗದಿಂದ ದಾರವನ್ನು ಎಳೆದು ಆಕೃತಿ ಮೂಡಿಸುವುದು.<br>• (ಆಲೋಚನಾ ಶಕ್ತಿ ಕೃತಿಯಲ್ಲಿ ಆಗಿದ ಅನ್ವೇಷಣೆ, ಸೌಂದರ್ಯಪ್ರಜ್ಞೆ ಇತರರ ಕೃತಿಯನ್ನು ನೋಡಿ ಆನಂದಿಸುವುದು, ಮೆಚ್ಚುವುದು, ಸಂಗ್ರಹಿಸುವುದು ಮುಂತಾದ ಗುರಿ ಸಾಧನೆ.) | ಪರಿಸರ ವಿಜ್ಞಾನಕ್ಕೆ ಅಳವಡಿಸಿಕೊಳ್ಳುವುದು. |
| **ಸಮೂಹ ಚಟುವಟಿಕೆ ಅಪೇಕ್ಷಿತ ಚಿತ್ರಗಳನ್ನು ಸಮೂಹ, ಗುಂಪು ಚಟುವಟಿಕೆಯೊಂದಿಗೆ ಕೃತಿ ರಚನೆ** | 02 | • ತೋರಣ, ಗಾಳಿಪಟ, ಸರಪಳಿ ಮುಂತಾದವುಗಳ ತಯಾರಿಕೆ ಮತ್ತು ಇವುಗಳ ಬಳಕೆಯ ಸನ್ನಿವೇಶಗಳನ್ನು ಕಲ್ಪಿಸುವುದು.<br>• (ಸಂಗ್ರಹ, ಸೌಂದರ್ಯಪ್ರಜ್ಞೆ, ಪ್ರದರ್ಶನ, ಮೆಚ್ಚುಗೆ, ರಚನೆಯಲ್ಲಿ ವಿಶ್ವಾಸ, ಕೌಶಲ, ಬೆಳವಣಿಗೆ ಮುಂತಾದ ಗುರಿಸಾಧನೆ)<br>• ಗುಂಪು ಚಟುವಟಿಕೆ, ಪ್ರದರ್ಶನ ಮೆಚ್ಚುಗೆ ಪಡಿಸುವ ಗುಣ ಬೆಳೆಸುವುದು. | ಪರಿಸರವಿಜ್ಞಾನಕ್ಕೆ ಪೂರಕ |
| **ಒಟ್ಟು ಅವಧಿ** | **175** | | |

ಅಧ್ಯಯನ ಮಾಡುತ್ತಾ ಅಧ್ಯಾಪನ ಮಾಡುವವರೇ ಅಧ್ಯಾಪಕರು.

## 2ನೆಯ ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು

- ☆ ಬಣ್ಣಗಳ ಪರಿಚಯ: ವಿವಿಧ ಬಣ್ಣಗಳ ಅರ್ಥ ಗುಣಗಳ ಪರಿಚಯ
- ☆ ಬಣ್ಣಗಳ ಲೇಪನದ ಬಗ್ಗೆ (ಬ್ರಶ್‌ಗಳ) ಕುಂಚಗಳ ಬಳಕೆಯ ಕ್ರಮ ತಿಳಿಸುವುದು.
- ☆ ವಿವಿಧ ಆಕೃತಿಗಳಿಗೆ ಸರಿಹೊಂದುವಂತೆ ಬಣ್ಣಗಳ ಲೇಪನ.
- ☆ ಪೇಪರ್‌ಗಳನ್ನು ಮುದ್ರೆಮಾಡಿ (ಸ್ಟೆನ್ಸಿಲ್ ಕತ್ತರಿಸಿ) ಬಣ್ಣದಲ್ಲಿ ಅದ್ದಿ ಮುದ್ರಿಸುವುದು, ತರಕಾರಿಗಳನ್ನು ಬಳಸಿ, ಕತ್ತರಿಸಿ, ಬಣ್ಣದಲ್ಲಿ ಅದ್ದಿ ಮುದ್ರಿಸಿ ನಿರ್ಧಿಷ್ಟ ಆಕೃತಿಗಳನ್ನು ರಚಿಸುವುದು.
- ☆ ತರಕಾರಿಗಳನ್ನು, ಹಣ್ಣು, ಹೂಗಳನ್ನು ನೋಡಿ (ವೀಕ್ಷಿಸಿ) ಚಿತ್ರಿಸುವುದು, ನೈಜ ಬಣ್ಣಗಳನ್ನು ಲೇಪಿಸುವುದು.
- ☆ ವೃತ್ತ, ಚೌಕ, ತ್ರಿಕೋನ ಹಾಗೂ ವಕ್ರರೇಖೆಗಳ ಕೃತಿ ಸಮೂಹಕ್ಕೆ ವಿವಿಧ ಬಣ್ಣಗಳ ಸಂಯೋಜನೆ.
- ☆ ಮಕ್ಕಳ ಅನಿಸಿಕೆಗೆ ಸಂಬಂಧಿಸಿದಂತೆ ಸ್ವಂತ ಚಿತ್ರರಚನೆಗೆ ಅವಕಾಶ ನೀಡುವುದು. (ಸ್ವತಂತ್ರ ಚಿತ್ರರಚನೆ)
- ☆ ಜೇಡಿಮಣ್ಣು, ಕ್ಲೇ ವ್ಯಾಕ್ಸ್‌ಗಳನ್ನು ಬಳಸಿ, ಸ್ವತಂತ್ರ ಆಕೃತಿಗಳ ರಚನೆ, ತದ್ರೂಪ ಆಕೃತಿಗಳ ರಚನೆ (ಉದಾ: ತರಕಾರಿ ಮಾದರಿ ಇತ್ಯಾದಿ)
- ☆ ಮುದ್ರಿತ ಬಣ್ಣದ ಪೇಪರ್‌ಗಳನ್ನು ಕತ್ತರಿಸಿ. ವಿನ್ಯಾಸದೊಂದಿಗೆ ಅಂಟಿಸುವುದು. ವಿವಿಧ ರೀತಿಯ ಬೀಜಗಳು, ಬಳೆ ಚೂರುಗಳು, ಬಣ್ಣದ ಗುಂಡಿಗಳನ್ನು ಅಂಟಿಸುವುದು.
- ☆ ಪರಿಸರದಲ್ಲಿ ತಾನು ಕಂಡ ಸನ್ನಿವೇಶ ಪ್ರಕೃತಿ ಚಿತ್ರ ರಚನೆ ಮಾಡುವುದು.
- ☆ ಕಾಗದವನ್ನು ಮಧ್ಯಭಾಗಕ್ಕೆ ಮಡಚಿ, ಒಂದು ಬದಿಗೆ ಬಣ್ಣಗಳನ್ನು ಹಾಕಿ, ಪುನಹ ಮಡಚಿ ಒತ್ತುವುದು. ಕಾಗದ ಬಿಡಿಸಿದಾಗ ಬರುವ ಆಕೃತಿಗಳನ್ನು ಮೆಚ್ಚುವುದು ಪ್ರದರ್ಶಿಸುವುದು.
- ☆ ಸರಳ ವಿನ್ಯಾಸ ರಚನೆ ರೇಖೆಗಳಿಂದ ಸಂಯೋಜನೆ.

ಶಿಕ್ಷಕರಿಗಾಗಿ:

ಈ ತರಗತಿಯ ಮಕ್ಕಳು ತಮ್ಮ ಕಲ್ಪನಾ ಶಕ್ತಿಯಿಂದ ಚಿತ್ರ ಬರೆಯಲು ಸಮರ್ಥರಿರುತ್ತಾರೆ. ಸ್ಥಳೀಯ ಪರಿಸರದಲ್ಲಿ ಅವರು ಗಮನಿಸುವ ಸಂದರ್ಭದಲ್ಲಿ ಇಚ್ಛಿಸುವ ಪ್ರಕ್ರಿಯೆ ಬೆಳೆದಿರುತ್ತದೆ. ಆದ್ದರಿಂದ ಅವರು ಇಷ್ಟಪಟ್ಟು ಚಿತ್ರ ಬರೆಯಲು ಪ್ರೋತ್ಸಾಹಿಸಬೇಕು.

# ಪಠ್ಯವಸ್ತು – 2ನೆಯ ತರಗತಿ

## ದೊರಕುವ ಒಟ್ಟು ಅವಧಿಗಳು: ವಾರಕ್ಕೆ 4 ಅವಧಿಗಳಂತೆ ವರ್ಷಕ್ಕೆ 140 ಅವಧಿಗಳು

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ |
|---|---|---|---|
| ಬಣ್ಣಗಳ ಬಗ್ಗೆ ಪರಿಚಯ | 05 | • ಬಣ್ಣಗಳನ್ನು ತೋರಿಸಿ ಅವುಗಳ ಬಗ್ಗೆ ವಿವರಿಸುವುದು. ಒಂದೇ ಬಣ್ಣದ ಬೇರೆ ಬೇರೆ ರೀತಿಯ ತರಕಾರಿ, ಹೂಗಳು, ಪಕ್ಷಿಗಳು ಇವುಗಳನ್ನು ಚಿತ್ರಿಸಿ ಬಣ್ಣ ಹಾಕಲು ತಿಳಿಸುವುದು.<br>• ಬಣ್ಣದ ಸೀಮೆಸುಣ್ಣ, ಪೇಸ್ಟಲ್‌ಬಣ್ಣ, ನೀರುಬಣ್ಣ, ಬಣ್ಣದ ಪುಟಿಗಳು, ಸ್ಕೆಚ್‌ಪೆನ್‌ಗಳು, ಇವುಗಳನ್ನು ಪರಿಚಯಿಸುವುದು.<br>• ಮೂಲ ಬಣ್ಣ, ಮಿಶ್ರ ಬಣ್ಣಗಳ ಬಗ್ಗೆ ವಿವರಣೆ. (ಕೆಂಪು, ನೀಲಿ, ಹಳದಿ) ಹಸಿರು, ಕೇಸರಿ, ನೇರಳೆ ಇತ್ಯಾದಿ, (ಮಗುವು ಬಣ್ಣಗಳ ಬಗ್ಗೆ ಆಸಕ್ತಿ ಹೊಂದಿದೆಯೇ? ಪ್ರಯೋಗಿಸಿ ನೋಡುವ ಗುಣ ಬೆಳೆಸಿಕೊಂಡಿದೆಯೆ? ಇವುಗಳಿಗೆ ಅವಕಾಶ ಕಲ್ಪಿಸುವುದು.) | ಪರಿಸರ ವಿಜ್ಞಾನ ಪಾಠಕ್ಕೆ ಸಮನ್ವಯಗೊಳಿಸುವುದು.<br>ಕನ್ನಡಪಾಠ ಪರಿಸರ ವಿಜ್ಞಾನಕ್ಕೆ ಸಹಕಾರಿಯಾಗಿದೆ ರಸ್ತೆ ಸುರಕ್ಷತೆ ಬಗ್ಗೆ ತಿಳಿಸುವುದು. |
| ಸ್ಮರಣ ಚಿತ್ರ | 35 | • ಅಪೇಕ್ಷಿತ ವಿಷಯವನ್ನು ಚಿತ್ರಿಸಲು ಅವಕಾಶ ಕಲ್ಪಿಸುವುದು. (ತನ್ನ ಮನೆ, ಹೂಗಳು, ಪ್ರಾಣಿಗಳು, ಪಕ್ಷಿಗಳು, ಕಾರು, ಬಸ್ಸು, ದಿನನಿತ್ಯ ಉಪಯೋಗಿಸುವ ವಸ್ತುಗಳ ಚಿತ್ರವನ್ನು ರಚಿಸಲು ಮತ್ತು ಬಣ್ಣಗಳಿಂದ ಪೂರ್ತಿಗೊಳಿಸಲು ಅವಕಾಶ ಕಲ್ಪಿಸುವುದು)<br>(ಸ್ಮರಣಾ ಸಾಮರ್ಥ್ಯವನ್ನು ವೃದ್ಧಿಸಲು ಸಹಕಾರಿ)<br>(ಕೈ ಸಮರ್ಥವಾಗಿ ಬಳಕೆಯಾಗುವುದು) | ಪರಿಸರ ವಿಜ್ಞಾನಕ್ಕೆ ಹತ್ತಿರವಾಗಿದೆ. |

| 1 | 2 | 3 | 4 |
|---|---|---|---|
| **ಕಲ್ಪನಾ (ಅಭಿವ್ಯಕ್ತಿ) ಆಯಾಮಗಳ ಕೃತಿ ರಚನೆ** | **20** | • ಜೇಡಿಮಣ್ಣು, ಕ್ಲೇವ್ಯಾಕ್ಸ್, ಬೆಂಡು, ಮುಂತಾದ ವಸ್ತುಗಳಿಂದ ಪ್ರಾಣಿ, ಪಕ್ಷಿ, ತರಕಾರಿ, ಪಾತ್ರೆಗಳು ಮುಂತಾದವುಗಳನ್ನು ರಚಿಸಲು ಅವಕಾಶ ನೀಡುವುದು. ಕೈಗಳಿಂದ ಕೃತಿಗಳ ರಚನೆಯಲ್ಲಿ ವಿಶೇಷ ಸ್ಪರ್ಶ ಅನುಭವ ಹೊಂದುವುದಕ್ಕೆ ಅವಕಾಶ, ಕರಕುಶಲತೆ ಅನುಭವ ಆತ್ಮಸ್ಥೈರ್ಯ ಹೆಚ್ಚಿಸುವುದು. | ಘನಾಕೃತಿಗಳ ಬಗ್ಗೆ ಅನುಭವ ಗಣಿತ ಪಾಠಕ್ಕೆ ಸಮನ್ವಯಗೊಳಿಸುವುದು. |
| **ಮುದ್ರಣ ಕಲೆ** | **10** | • ತರಕಾರಿಗಳನ್ನು ಕತ್ತರಿಸಿ, ಬಣ್ಣಗಳಲ್ಲಿ ಅದ್ದಿ ಅಪೇಕ್ಷಿತ ಜಾಗಗಳಿಗೆ ವಿನ್ಯಾಸದೊಂದಿಗೆ ಮುದ್ರಿಸುವುದು. ಪೇಪರ್‌ಗಳನ್ನು ಮುದ್ದೆ ಮಾಡಿ ಬಣ್ಣದಲ್ಲಿ ಅದ್ದಿ ಮುದ್ರಿಸುವುದು. ಬೆರಳುಗಳನ್ನು ಬಣ್ಣಗಳಲ್ಲಿ ಅದ್ದಿ ವಿನ್ಯಾಸ ಬರುವಂತೆ ಅಚ್ಚು ಒತ್ತುವುದು.<br>• ಶುಭಾಶಯ ಪತ್ರಗಳ ಮಾದರಿ ರಚಿಸುವುದು. (ವಿವಿಧ ವಿನ್ಯಾಸಗಳ ಪರಿಚಯದೊಂದಿಗೆ ಹೊಸ ಅನುಭವ ಪಡೆಯುತ್ತಾರೆ.) | ಪರಿಸರ ವಿಜ್ಞಾನದ ಪಾಠಕ್ಕೆ ಸಹಕಾರಿ ವಿಷಯಗಳ ಗ್ರಹಿಕೆಗೆ ಸಹಕಾರಿ. |
| **ಕೊಲ್ಯಾಜ್ ಕಲೆ (ಕತ್ತರಿಸುವುದು – ಅಂಟಿಸುವುದು)** | **10** | • ಮುದ್ರಿತ ಬಣ್ಣದ ಕಾಗದಗಳನ್ನು ಹರಿದು, ಕತ್ತರಿಸುವ, ಮಡಚುವ, ಅಂಟಿಸುವ ವಿಧಾನದಿಂದ ಅಪೇಕ್ಷಿತ ಕೃತಿ ರಚನೆ.<br>• ಪೆನ್ಸಿಲ್, ಕ್ರೆಯಾನ್, ಮಣ್ಣು, ಬಣ್ಣಗಳೊಂದಿಗೆ ಅನ್ವೇಷಣೆ ಮತ್ತು ಪ್ರಯೋಗಕ್ಕೆ ಸಾಕಷ್ಟು ಸಮಯ ಮತ್ತು ಅವಕಾಶಗಳನ್ನು ನೀಡುವುದು.<br>• ಪಂಚೇಂದ್ರಿಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಅವಕಾಶ ನೀಡುವುದು.<br>• ನೈಸರ್ಗಿಕ ವಸ್ತುಗಳು: ವಿವಿಧ ಗಾತ್ರ, ಬಣ್ಣದ ಬೀಜಗಳು, ಗರಿಗಳು, ಮರಳು, ಇದ್ದಿಲು, ಜೇಡಿಮಣ್ಣು, ಕಪ್ಪೆಚಿಪ್ಪು, ಎಲೆ, ಒಣಗಿದಕಡ್ಡಿ, ಹುಲ್ಲು ಇತ್ಯಾದಿಗಳನ್ನು ಬಳಸಿ, ಕೃತಿ ರಚನೆ | ಕನ್ನಡ, ಪರಿಸರ ವಿಜ್ಞಾನ, ಪಾಠಗಳಿಗೆ ಪೂರಕವಾಗಿದ್ದು, ವಿವಿಧ ವಸ್ತುಗಳ ಪರಿಚಯ ಅನ್ವೇಷಣೆ, ಗುಣಗಳು ಇತರ ಪಾಠಗಳಿಗೂ ಸಹಕಾರಿಯಾಗುತ್ತದೆ. |

ವ್ಯಕ್ತಿಯ ವಿಕಾಸವು, ಸೃಜನಶೀಲತೆಯೊಂದಿಗೆ ಬೆಳವಣಿಗೆಯಾಗಲು ಪ್ರತಿ ವ್ಯಕ್ತಿಯಲ್ಲೂ ಹುದುಗಿರುವ ಸುಪ್ತಭಾವನೆಯನ್ನು ಹೊರಹೊಮ್ಮಿಸಲು ಸೂಕ್ತ ಕ್ರಮಬದ್ಧ ಮಾರ್ಗದರ್ಶನಗಳನ್ನು ನೀಡುವ ಶಿಕ್ಷಣವೆಂದರೆ ಅದು ಕಲಾಶಿಕ್ಷಣ ಮಾತ್ರ.

| 1 | 2 | 3 | 4 |
|---|---|---|---|
| | | • ತ್ಯಾಜ್ಯವಸ್ತುಗಳು, ಬಳೆಚೂರು, ಗೋಣಿಚೀಲ, ದರ್ಜಿಯಿಂದ ಸಂಗ್ರಹಿಸಿದ ಬಟ್ಟೆಯ ಚೂರುಗಳು ಇತ್ಯಾದಿಗಳನ್ನು ಸಂಗ್ರಹಿಸಿ ಅಪೇಕ್ಷಿತ ಜಾಗಗಳಿಗೆ ಅಂಟಿಸುವುದು, ವಿನ್ಯಾಸ ರಚಿಸುವುದು.<br>(ವೈಯಕ್ತಿಕ ಮತ್ತು ಕಾಲ್ಪನಿಕ ವಿಧಾನದಲ್ಲಿ ಕೃತಿರಚಿಸಲು ತೊಡಗುವುದು ಪ್ರಯೋಗಾತ್ಮಕ ಕ್ರಿಯೆ ಬರುವುದು ಅಭಿವ್ಯಕ್ತತೆ, ಸ್ಪರ್ಧಾತ್ಮಕತೆಗೆ ವಿದ್ಯಾರ್ಥಿಯನ್ನು ತಯಾರಿಸುವುದು. ಕಲಿಕೆಗೆ ಹೆಚ್ಚಿನ ಅವಕಾಶ ನೀಡುವದು. | |
| **ಅನುಕರಣಾ ಚಿತ್ರರಚನೆ. ತ್ರೂಪ ಚಿತ್ರ ರಚನೆ (Copy and Draw)** | **20** | • ದಿನನಿತ್ಯ ಉಪಯೋಗಿಸುವ ವಸ್ತುಗಳನ್ನು, ತರಕಾರಿ, ಹೂಗಳು ಇತ್ಯಾದಿಗಳನ್ನು ನೋಡಿ ಅದರಂತೆ ಚಿತ್ರಿಸಲು ಪ್ರಯತ್ನಿಸುವುದು. ಇಷ್ಟಪಟ್ಟ ಚಿತ್ರಗಳನ್ನು ರಚಿಸಲು ತಿಳಿಸುವುದು.<br>• ಯಾವುದೇ ವಸ್ತುಗಳನ್ನು ವೀಕ್ಷಿಸಿ, ಅವಲೋಕಿಸಿ, ಸಾಮ್ಯತೆ ಬರುವಂತೆ ಚಿತ್ರಿಸಲು ತಿಳಿಸುವುದು. (ಆಯಾಮಗಳ ಕಲ್ಪನೆ, ಪ್ರಮಾಣಗಳ ಬಗ್ಗೆ ಅರಿವು ಆಕಾರಗಳ ಬಗ್ಗೆ ಜ್ಞಾನ ಸಿಗುವುದಕ್ಕೆ ಸಹಕಾರಿ.) | ಗಣಿತಪಾಠಕ್ಕೆ ಸಹಾಯಕ, ವಿವಿಧ ಆಕಾರಗಳ ರಚನೆ, ಸಂಯೋಜನೆ, ಘನಾಕೃತಿಗಳ ಪರಿಚಯದೊಂದಿಗೆ ಗಣಿತ, ಪರಿಸರ ವಿಜ್ಞಾನಪಾಠಕ್ಕೆ ಸಹಕಾರಿ. |
| **ಸಮೂಹ ಚಟುವಟಿಕೆ (Group activity)** | **05** | • ಹಲವಾರು ವಿದ್ಯಾರ್ಥಿಗಳು ಸೇರಿ ಒಂದೇ ಸ್ಥಳ, ಕಾಗದ, ಗೋಡೆ ಮುಂತಾದ ಸ್ಥಳಗಳಲ್ಲಿ ಚಿತ್ರರಚನೆ.<br>• ಜೇಡಿಮಣ್ಣಿನ ಕೃತಿ, ಅಂಟಿಸುವುದು, ಪತಾಕೆ ತಯಾರಿಕೆ, ಮಾಲೆಗಳ ತಯಾರಿಕೆ ಮುಂತಾದವುಗಳು ಸ್ನೇಹಿತರಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ಸಹಬಾಳ್ವೆ, ಸಹಕಾರ, ಆತ್ಮವಿಶ್ವಾಸ, ಸಹಾಯತನ, ನಾಯಕತ್ವ ಮುಂತಾದ ಗುಣಗಳ ಬೆಳವಣಿಗೆ. ರಚನೆಯ ಸಮಯದಲ್ಲಿ ಸಮೂಹ ಚಟುವಟಿಕೆ ಮಾಡಿಸುವುದು.<br>(ಪರಸ್ಪರ ವಿಚಾರ ವಿನಿಮಯ, ಆಲೋಚನೆಗಳ **ವಿನಿಮಯ**, ಸಂತಸದಕ್ಷಣ ತನ್ನವರೊಂದಿಗೆ ಸ್ನೇಹದ ಬಾಂಧವ್ಯ, ಉತ್ತಮ ಕೃತಿ ರಚನೆ ದೊಡ್ಡ ಪ್ರಮಾಣದ ಕೃತಿ ರಚನೆಗೆ ಸಹಕಾರಿ) | |

| 1 | 2 | 3 | 4 |
|---|---|---|---|
| **ಚಿಂತನಾರಚನೆ: ಚುಕ್ಕಿಚಿತ್ರಗಳು** | **10** | • ಅಂಕಿಗಳನ್ನು ಚುಕ್ಕಿಗಳನ್ನು ಹಾಕಿ ಸೇರಿಸಿ ಚಿತ್ರ ರಚನೆ (ಸಂಯೋಜನೆ, ಜೋಡಣಾ ವಿಧಾನಗಳನ್ನು ಅರಿಯುವುದು) | ಗಣಿತದ ಪಾಠದ ಸಂಕಲನ, ವ್ಯವಕಲನದ ಬಗ್ಗೆ ಸಹಕಾರಿ |
| **ಕಾಗದಕಲೆ** | **10** | • ಗಾಳಿಪಟ ತಯಾರಿಕೆ, ಮಾಲೆಗಳ ತಯಾರಿಕೆ, ಮುಖವಾಡ ರಚನೆ, ಘನಾಕೃತಿ, ಸಿಲಿಂಡರ್, ಪಟ್ಟಕ, ಪಿರಿಮಿಡ್‌ಗಳ ರಚನೆ. (ಹೆಚ್ಚಿನ ಅವಧಿಯನ್ನು ಉಪಯೋಗಿಸಿ ಸಮೂಹ ಚಟುವಟಿಕೆಯೊಂದಿಗೆ ಕೃತಿ ರಚನೆಗೆ ಅವಕಾಶ) ಪ್ರದರ್ಶನ ಮಾಡುವುದು.<br>• ಬಣ್ಣಗಳ ಬಗ್ಗೆ ಅರಿವು.<br>• ಕಾಗದವನ್ನು ಕತ್ತರಿಸದೇ ಮಡಚುವ ಮೂಲಕ ದೋಣಿ, ಬೀಸಣಿಗೆ, ಪಕ್ಷಿಗಳು ಮುಂತಾದ ಆಕಾರಗಳ ರಚನೆ. | ಗಣಿತ ಪಾಠಕ್ಕೆ ಅನುಕೂಲ (ರೇಖಾ ಗಣಿತ)<br><br>ಪರಿಸರ ವಿಜ್ಞಾನ ಪಾಠಕ್ಕೆ ಅನುಕೂಲ |
| **ಜೇಡಿಮಣ್ಣಿನಿಂದ ಕೃತಿ ರಚನೆ** | **10** | • ಜೇಡಿಮಣ್ಣು/ವ್ಯಾಕ್ಸ್‌ನಿಂದ ಪ್ರಾಣಿ, ಪಕ್ಷಿ, ದಿನನಿತ್ಯದ ವಸ್ತುಗಳ ರಚನೆಗೆ ಅವಕಾಶ ನೀಡುವುದು, ಸೂಕ್ತ ಬಣ್ಣ ಲೇಪನ | |
| **ಅಕ್ಷರ ಲೇಖನ** | **05** | • ಪ್ರಮಾಣಬದ್ಧವಾದ ಅಕ್ಷರಗಳನ್ನು ರಚಿಸುವ ವಿಧಾನವನ್ನು ತಿಳಿಸುವುದು. ಸುಂದರ ರೂಪದ ಕೈಬರವಣಿಗೆಯನ್ನು ತಿಳಿಸುವುದು. | ಕೈಬರಹದೊಂದಿಗೆ ಇತರ ವಿಷಯಗಳಿಗೆ ಅನುಕೂಲ |

**ಈ ವಯಸ್ಸಿನ ಮಕ್ಕಳು ಸಂವೇದನಶೀಲ ಪರಿಸರಕ್ಕೆ ತೀರ ನಿಕಟವರ್ತಿಗಳಾಗಿರುವುದರಿಂದ ಹೆಚ್ಚಿನ ಲಾಭ ಪಡೆಯುತ್ತಾರೆ. ವಿಶೇಷವಾಗಿ ಸ್ವಾಭಾವಿಕ ವಸ್ತುಗಳ ಸ್ಪರ್ಶಿಸುವಿಕೆ, ಆಲಿಸುವಿಕೆ, ವಸ್ತುಗಳೊಂದಿಗೆ ಕಾರ್ಯ ನಿರ್ವಹಿಸುವಿಕೆ ಇತ್ಯಾದಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಮಕ್ಕಳಿಗೆ ಅವಕಾಶಗಳನ್ನು ಒದಗಿಸುವ ಶಿಕ್ಷಕರು ಎಲ್ಲಾ ಬಗೆಯಲ್ಲೂ ಮಾರ್ಗದರ್ಶಿಗಳಾಗ ಬಹುದು.**

ಚಿತ್ತಾರ ರೂಪದ ಬೆಳವಣಿಗೆಗೆ ಕಲಾಶಿಕ್ಷಣ ಅವಶ್ಯಕ

## 3ನೆಯ ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು

### ಚಿತ್ರಕಲಾ ಶಿಕ್ಷಕರ ಪಾತ್ರ

☆ ಅಕ್ಷರ ಮತ್ತು ಅಂಕಿಗಳನ್ನು ಬಳಸಿಕೊಂಡು ಚಿತ್ರ ರಚಿಸುವುದು.

☆ ಅಕ್ಷರಗಳನ್ನು ಅಂಕಿಗಳನ್ನು ದುಂಡಗೆ ಲೇಖನ ಚಿತ್ರ ಬರೆಯಲು ತಿಳಿಸುವುದು.

☆ ಬಣ್ಣ ಸಿಂಪಡಿಸುವುದು (Spray)

☆ ಸಾಕುಪ್ರಾಣಿಗಳು, ಕಾಡುಪ್ರಾಣಿ, ಪಕ್ಷಿಗಳು ಇವುಗಳ ಚಿತ್ರರಚನೆ.

☆ ಬಣ್ಣಗಳು ಬಗ್ಗೆ, ಲೇಪನ, ಬ್ರೆಶ್‌ಬಳಕೆ ಇತ್ಯಾದಿ.

☆ ತದ್ರೂಪ ಚಿತ್ರರಚನೆ: ಪ್ರಾಣಿ, ಪಕ್ಷಿ, ತರಕಾರಿ, ಹಣ್ಣುಗಳ ಚಿತ್ರವನ್ನು ಸಂಗ್ರಹಿಸಿ ಅದರಂತೆ ನೊಡಿ ಚಿತ್ರಿಸಿ ಬಣ್ಣ ಹಾಕುವುದು.

☆ ಮುದ್ರಣ ತಂತ್ರ.

☆ ಸುಂದರವಾದ ಭೂದೃಶ್ಯ ರಚನೆ.

☆ ಕೊಲ್ಯಾಜ್ ರಚನಾ ವಿಧಾನ.

☆ ಚುಕ್ಕೆಗಳನ್ನು ಸೇರಿಸಿ ಚಿತ್ರರಚನೆ. ಸೂಕ್ತ ಬಣ್ಣಲೇಪನ.

☆ ಕಾಗದ ಕಲೆ.

☆ ರಾಷ್ಟ್ರೀಯ ಮುಖಂಡರು, ಕವಿಗಳು, ಕಲಾವಿದರು, ವಿಜ್ಞಾನಿಗಳು, ಗಣ್ಯವ್ಯಕ್ತಿಗಳ ಭಾವಚಿತ್ರವನ್ನು ಸಂಗ್ರಹಣೆ ಮಾಡುವುದು ಮತ್ತು ಕ್ರಮಬದ್ಧವಾಗಿ ಅಂಟಿಸುವುದು. (ಪ್ರದರ್ಶನ)

☆ ಕುತೂಹಲ, ಅಚ್ಚರಿ ಮೂಡಿಸುವಂತೆ ಚಿತ್ರಕಲಾ ಕೌಶಲ ಬಳಕೆ.

☆ ಚಿತ್ರಗಳಿಗೆ ಪೂರಕ ಕಥೆ ಪೋಣಿಸುವುದು.

☆ ಮಕ್ಕಳಲ್ಲಿ ಅಪೇಕ್ಷಿತ ಮೌಲ್ಯಗಳನ್ನು ಬೆಳೆಸುವುದು.

# ಪಠ್ಯವಸ್ತು – 3ನೆಯ ತರಗತಿ

## ದೊರಕುವ ಒಟ್ಟು ಅವಧಿಗಳು: ವಾರಕ್ಕೆ 4 ಅವಧಿಗಳಂತೆ ವರ್ಷಕ್ಕೆ 140 ಅವಧಿಗಳು

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ |
|---|---|---|---|
| **ಅಕ್ಷರ, ಅಂಕಿಗಳಿಂದ ಚಿತ್ರ ರಚನೆ** | 10 | • ಅಂಕಿಗಳನ್ನು ಉಪಯೋಗಿಸಿ, ಅದರ ಭಾಗಗಳನ್ನು ಉಪಯೋಗಿಸಿಕೊಂಡು ಪ್ರಾಣಿ, ಪಕ್ಷಿಗಳ ಚಿತ್ರ ರಚನೆ ಮಾಡಿಸುವುದು.<br>• ಅಕ್ಷರಗಳನ್ನು ಬಳಸಿ ಪ್ರಾಣಿ, ಪಕ್ಷಿಗಳ ರೇಖಾಚಿತ್ರ ರಚನೆ. | ಗಣಿತದ ಪಾಠಕ್ಕೆ ಸಹಕಾರಿ. |
| **ಅಕ್ಷರ ಲೇಖನ: Caligraphy** | 10 | • ಅಕ್ಷರ ಜ್ಞಾನ ಹೆಚ್ಚುವುದು.<br>• ಕಲಿತಿರುವ ಅಕ್ಷರಗಳನ್ನು ದುಂಡಗೆ ಅಂದವಾಗಿ ಬರೆಯಲು ತಿಳಿಸುವುದು.<br>• ರೇಖೆಗಳನ್ನು ಹಾಕಿ ಅಕ್ಷರ ಲೇಖನ, ಕೈ ಬೆರಳು, ದೇಹ, ಮೆದುಳು ಗಳೊಂದಿಗೆ ತಾದ್ಯಾತ್ಮಕ ಸಂಯೋಜನೆಯೊಂದಿಗೆ ಉತ್ತಮ ಕೈ ಬರಹ ಕಲಿಕೆಗೆ ಅವಕಾಶ ನೀಡುವುದು. | ಎಲ್ಲ ಭಾಷೆಗಳಿಗೂ ಸಹಕಾರಿ. |
| **ಬಣ್ಣ ಸಿಂಪಡಿಸುವ ಕಲೆ**<br><br>**ಕಾಗದ ಮಡಚಿ ಬಣ್ಣ, ದಾರದಿಂದ ಕೃತಿ ರಚನೆ:** | 10 | • ವಿವಿಧ ಆಕೃತಿಯ ಕಾಗದ ತುಂಡು, ವಸ್ತುಗಳು, ಎಲೆಗಳು, ಮುಂತಾದವುಗಳನ್ನು ಕಾಗದದ ಮೇಲೆ ಇಟ್ಟು ಹಲ್ಲುಜ್ಜುವ ಬ್ರೆಶ್‌ನಿಂದ ನೀರು ಬಣ್ಣವನ್ನು ಸಿಂಪಡಿಸುವುದು. (ಶುಭಾಶಯ ಪತ್ರ ರಚನೆ, ನುಡಿ ಮುತ್ತುಗಳು, ಪುಸ್ತಕ ಆವ್ಹಾದನೆ, ಸಂಗ್ರಹಣಾ ಗುಣ ಬೆಳಸುವುದು, ವಸ್ತುಗಳ ಮೆಚ್ಚುಗೆ ಇತ್ಯಾದಿ. ಕಾಗದವನ್ನು ½ ಭಾಗ, ¼ ಭಾಗ ಮಡಚಿ ಅದರ ಒಳಗಡೆ ಸ್ವಲ್ಪ ಬೇರೆ ಬೇರೆ ಬಣ್ಣಗಳನ್ನು ಹಾಕಿ. ಮಡಚಿ ತೀಡುವುದು. ಚಿತ್ರ ವಿಚಿತ್ರವಾದ ಆಕಾರಗಳು ಕಾಗದ ಮಡಚುವುದರೊಂದಿಗೆ ಬಣ್ಣದಿಂದ ಅದ್ದಿದ ದಾರವನ್ನು ಬಳಸಿ ಕೃತಿ ರಚನೆ | ಕನ್ನಡ ಪಾಠಕ್ಕೆ ಸಮನ್ವಯ ಗೊಳಿಸುವುದು. |
| **ತದ್ರೂಪ ಚಿತ್ರ ರಚನೆ: (ಪ್ರಾಣಿ, ಪಕ್ಷಿಗಳ ಚಿತ್ರ ರಚನೆ)** | 10 | • (ಮೆಚ್ಚುವ ಗುಣ, ಸಂಶೋಧನೆ, ಮುಂತಾದ ಗುಣಗಳನ್ನು ಬೆಳೆಸುವುದು)<br>• ವಿವಿಧ ರೀತಿಯ ಸಾಕುಪ್ರಾಣಿಗಳು, ಕಾಡು ಪ್ರಾಣಿಗಳು, ಹಕ್ಕಿಗಳ ಚಿತ್ರವನ್ನು ಸಂಗ್ರಹಿಸಿ ಅದನ್ನು ನೋಡಿ ಚಿತ್ರಿಸಲು ತಿಳಿಸುವುದು.<br>• ಸೂಕ್ತ ಬಣ್ಣಗಳನ್ನು ಲೇಪಿಸಲು ತಿಳಿಸುವುದು. | ಪರಿಸರ ವಿಜ್ಞಾನ ಪಾಠಕ್ಕೆ ಸಂಬಂಧ. |

| | | | |
|---|---|---|---|
| **ಸ್ಮರಣ ಚಿತ್ರ:**<br><br>**ಬಣ್ಣಗಳ ಬಗ್ಗೆ ವಿವರ ಲೇಪನ ಕ್ರಮ:**<br><br><br><br><br>**ಮುದ್ರಣ ಕಲೆ:**<br><br><br><br>**ಭೂದೃಶ್ಯ, (ಪ್ರಕೃತಿ ಚಿತ್ರಣ)** | **30**<br><br><br><br><br><br><br><br>**10**<br><br><br><br>**10** | • ತಾವು ಹಿಂದೆ ನೋಡಿದ, ಪ್ರಾಣಿ ಪಕ್ಷಿಗಳನ್ನು ಮನಸ್ಸಿನಲ್ಲಿ ಸ್ಮರಿಸಿ ಚಿತ್ರಿಸಲು ತಿಳಿಸುವುದು.<br>• (ಸ್ಮರಣಾ ಶಕ್ತಿ ಹೆಚ್ಚುವುದು.)<br>• ವಿವಿಧ ಬಣ್ಣಗಳ ಪರಿಚಯ, ಮೂಲಬಣ್ಣ, ಮಿಶ್ರ ಬಣ್ಣಗಳ ಪರಿಚಯ ಮಿಶ್ರಣದ ಬಗ್ಗೆ ತಿಳಿಸುವುದು. ಬ್ರೆಶ್‌ಗಳ ಬಗ್ಗೆ ವಿವರಣೆ, ಲೇಪನ ಕ್ರಮ, ಉಪಯೋಗಿಸುವ ಕ್ರಮವನ್ನು ತಿಳಿಸುವುದು.<br>• ಬಣ್ಣಗಳ ಅರ್ಥವಿವರಣೆ ನೀಡುವುದು.<br>• (ಸೌಂದರ್ಯ ಪ್ರಜ್ಞೆ, ವೀಕ್ಷಣಾ ಸಾಮರ್ಥ್ಯ ಹೆಚ್ಚಿಸುವುದು.)<br>• ಸ್ಪಂಜು, ಪೇಪರ್, ಬಟ್ಟೆಗಳನ್ನು ಮುದ್ದೆ ಮಾಡಿ ಬಣ್ಣದಲ್ಲಿ ಅದ್ದಿ ಅಪೇಕ್ಷಿತ ಸ್ಥಳಗಳಿಗೆ ಒತ್ತಿ ಮುದ್ರಿಸಿ ವಿನ್ಯಾಸಗೊಳಿಸುವುದು.<br>• ಪ್ರಕೃತಿಯಲ್ಲಿರುವ ಸುಂದರವಾದ ಭೂದೃಶ್ಯ, ನದಿ ಬೆಟ್ಟ ಗುಡ್ಡಗಳ ಚಿತ್ರರಚನೆಯನ್ನು ತಿಳಿಸುವುದು. ತಮ್ಮ ಕಲ್ಪನೆಗೆ ಬಂದಿರುವ ಸುಂದರ ದೃಶ್ಯಗಳನ್ನು ಬಣ್ಣಗಳ ಮಿಶ್ರಣ, ಲೇಪನದ ಬಗ್ಗೆ ಅರಿವು ಮೂಡಿಸುವುದು.<br>• ಪ್ರದರ್ಶನಕ್ಕಾಗಿ ವ್ಯವಸ್ಥೆ ಮಾಡಿಸುವುದು.<br>• (ಮೆಚ್ಚುಗೆ, ಪ್ರದರ್ಶನ ಗುಣ, ವಸ್ತುಗಳನ್ನು, ಕಾಯ್ದಿಡುವ ಗುಣಗಳನ್ನು ಬೆಳೆಸುವುದು) | <br><br><br><br><br><br><br><br><br><br><br><br>ಪರಿಸರ ವಿಜ್ಞಾನ, ಕನ್ನಡ ಪಾಠಕ್ಕೆ ಸಮನ್ವಯ ಗೊಳಿಸುವುದು |
| **ಕೊಲ್ಯಾಜ್ (ಅಂಟಿಸುವ ಕಲೆ):** | **10** | • ಪ್ರಾಕೃತಿಕ ವಸ್ತುಗಳು, ತ್ಯಾಜ್ಯ ವಸ್ತುಗಳು, ಬಳೆ ಚೂರು, ಬಟ್ಟೆಯ ಚೂರು, ಮುದ್ರಿತ ಬಣ್ಣದ ಕಾಗದಗಳು, ಗೋಣಿತಾಟು, ದಾರ, ಮಣಿ, ಗುಂಡಿ ಇತ್ಯಾದಿ ವಸ್ತುಗಳನ್ನು ಅಂಟಿಸುವುದು.<br>• ಸಂಯೋಜನೆಗೊಳಿಸಿ ಅಂದವಾದ ಕೃತಿ ರಚನೆ ಪಕ್ಷಿಗಳ ಅಂದವಾದ ಗರಿಗಳ ಸಂಗ್ರಹಣೆಯೊಂದಿಗೆ ವಿಶಾಲವಾದ ಕಾಗದದಲ್ಲಿ ಗುಂಪು ಚಿತ್ರ ರಚನೆ. | ಪರಿಸರ ಪಾಠಕ್ಕೆ ಸಮನ್ವಯ ಮಾಡುವುದು. |

| | | | |
|---|---|---|---|
| **ಚುಕ್ಕೆ ಚಿತ್ರ ರಚನೆ:** | **05** | • ಅನ್ವೇಷಣಾ ಗುಣ ಬೆಳೆಯುವುದು. ಜೋಡಿಸುವ ಜಾಣ್ಮೆಯನ್ನು ಬೆಳೆಸುವುದು. (ಚುಕ್ಕೆ ಚಿತ್ರಗಳ ಸಂಗ್ರಹ)<br>• ಚುಕ್ಕಿಗಳನ್ನು ಹಾಕಿ ಅಂಕಿಗಳನ್ನು ಬಳಸಿ ಚಿತ್ರ ರಚನೆ. ಸೂಕ್ತ ಬಣ್ಣಗಳನ್ನು ಲೇಪಿಸುವುದು | ಗಣಿತ ಪಾಠಕ್ಕೆ ಸಮನ್ವಯಗೊಳಿಸುವುದು |
| **ಜೇಡಿಮಣ್ಣಿನ ಕಲೆ:**<br><br>**ಕಾಗದ ಕಲೆ:** | **10**<br><br>**15** | • ಜೇಡಿ ಮಣ್ಣು, ಬಣ್ಣದ ವ್ಯಾಕ್ಸ್ ಮುಂತಾದವುಗಳನ್ನು ಬಳಸಿ ವಿದ್ಯಾರ್ಥಿಗಳು ಘನಾಕೃತಿಯ ವಸ್ತುಗಳ ರಚನೆ, ಪ್ರಾಣಿ, ಪಕ್ಷಿಗಳು, ತರಕಾರಿಗಳ ರಚನೆ ಮಾಡುವುದು<br>– ಘನಾಕೃತಿಗಳ ಬಗ್ಗೆ ಪರಿಚಯ<br>– ಆಯಾಮಗಳ ಬಗ್ಗೆ ಕಲ್ಪನೆ ಬರುವುದು.<br>– ವಿಶೇಷ ಸ್ಪರ್ಶಾನುಭವವನ್ನು ಸಂಯೋಜನಾ ಜ್ಞಾನವನ್ನು ಪಡೆಯುವರು<br>– ಒಣಗಿದ ಮೇಲೆ ಸೂಕ್ತ ಬಣ್ಣ ಲೇಪಿಸುವುದು.<br>• ಬಣ್ಣ ಬಣ್ಣದ ಕಾಗದಗಳಿಂದ ಪತಾಕೆ, ಮಾಲೆ, ಗಾಳಿಪಟ, ದೀಪದ ಬುಡ್ಡಿ ಇತ್ಯಾದಿಗಳ ರಚನೆಯನ್ನು ತಿಳಿಸುವುದು. | |
| **ಚಿತ್ರ ಸಂಗ್ರಹಣೆ:**<br><br>**ಒಟ್ಟು ಅವಧಿಗಳು** | **05**<br><br>**140** | • ರಾಷ್ಟ್ರೀಯ ಮುಖಂಡರು, ಕವಿಗಳು, ಕಲಾವಿದರು, ವಿಜ್ಞಾನಿಗಳು, ಗಣ್ಯವ್ಯಕ್ತಿಗಳು ಮುಂತಾದವರ ಭಾವ ಚಿತ್ರವನ್ನು ಸಂಗ್ರಹಿಸಿ, ಅಂಟಿಸಿ ಪುಸ್ತಕ ಮಾಡುವುದು. (ವಾರ್ಷಿಕ ಸಂಚಿಕೆ)<br>– ಉತ್ತಮಚಿತ್ರಗಳ ಸಂಗ್ರಹಣೆ, ವ್ಯಂಗ್ಯ ಚಿತ್ರ ಸಂಗ್ರಹಣೆ,<br>– ಸಂಗ್ರಹಣಾ ಸಾಮರ್ಥ್ಯ ಬೆಳೆಯುವುದು.<br>– ರಾಷ್ಟ್ರೀಯ ನಾಯಕರು, ಕವಿಗಳು, ಲಾಂಛನಗಳು ಇತ್ಯಾದಿ. | ಭಾಷಾಪಾಠ, ಸಮಾಜವಿಜ್ಞಾನಪಾಠ ಗಳಿಗೆ ಸಮನ್ವಯಗೊಳಿಸುವುದು. |

## 4ನೇ ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು

☆ ಮಗುವಿಗೆ ಇಷ್ಟವಾದ ಚಿತ್ರ ರಚನೆಗೆ ಅವಕಾಶ ಕಲ್ಪಿಸಿಕೊಡುವುದರ ಜೊತೆಯಲ್ಲಿ ಆ ಚಿತ್ರಗಳ ಬಗ್ಗೆ ವಿವರಿಸುವಂತೆ ತಿಳಿಸುವುದು.

☆ ದಾರವನ್ನು ಬಣ್ಣದಲ್ಲಿ ಅದ್ದಿ ಹಾಳೆಯ ಮೇಲೆ ಇಟ್ಟು ಮಡಚಿ ಎಳೆಯುವುದು ವಿವಿಧ ಆಕಾರಗಳನ್ನು ಗುರುತಿಸುವುದು.

☆ ಮೇಣದ ಚಿತ್ರ: ಖಾಲಿ ಕಾಗದದಲ್ಲಿ ಮೇಣದ ಬತ್ತಿಯಿಂದ ವಿವಿಧ ಆಕಾರ, ಚಿತ್ರಗಳನ್ನು ರಚಿಸಿ, ನೀರುಬಣ್ಣವನ್ನು ಇಡೀ ಕಾಗದಕ್ಕೆ ಲೇಪಿಸಿದಾಗ ಮೇಣದ ಗೀರುಗಳಲ್ಲಿ ವಿಶೇಷ ಚಿತ್ರ ಕಂಡುಬರುವುದು.

☆ ಭೂಮಿತಿಯ ಆಕಾರ ರಚನೆಯ ಆಕೃತಿಗಳಿಗೆ ಬಣ್ಣ ತುಂಬುವುದು. ವಿನ್ಯಾಸ ಸಂಯೋಜನೆ, ಪಟ್ಟಿಗಳ ರಚನೆ.

☆ ಮುದ್ರಣ ಕಲೆ (ಶುಭಾಶಯ ಪತ್ರ ರಚನೆ)

☆ ಕೊಲ್ಯಾಜ್ (ಅಂಟಿಸುವ ಕಲೆ)

☆ ಜೇಡಿಮಣ್ಣಿನ ಕಲೆ

☆ ಕಥಾ ಚಿತ್ರರಚನೆ, ಪಂಚತಂತ್ರ ಕಥೆಗಳಿಗೆ ಚಿತ್ರರಚನೆ.

☆ ಮುಖವಾಡ ರಚನೆ.

☆ ಪ್ರದರ್ಶನ, ಸಂಗ್ರಹಣೆ. (ಈ ಮೇಲಿನ ವಿಷಯಗಳನ್ನು ಮಾಡುವಾಗ (ಬಿಡಿಸುವಾಗ) ಮಕ್ಕಳಿಗೆ ಅಡೆತಡೆ ಬರದಹಾಗೆ ನೋಡಿಕೊಳ್ಳುವುದು)

☆ ಸ್ಥಳೀಯ ವಿಷಯ ತಜ್ಞರಿಂದ ಮಕ್ಕಳಿಗೆ ಮಾರ್ಗದರ್ಶನ.

☆ ಕುತೂಹಲ, ಅಚ್ಚರಿ ಮೂಡಿಸುವಂತೆ ಚಿತ್ರರಚನಾ ಕೌಶಲ ಬಳಕೆ ಮತ್ತು ಪ್ರದರ್ಶನ.

☆ ಮಕ್ಕಳಲ್ಲಿ ಅಪೇಕ್ಷಿತ ಮೌಲ್ಯಗಳನ್ನು ಬೆಳೆಸುವುದು.

☆ ಮೆಚ್ಚಿ ಸ್ವೀಕರಿಸಬೇಕಾದ ಅಂಶಗಳನ್ನು ಗಮನಿಸಿ ಗುರುತಿಸುವುದು.

☆ ಕೊಟ್ಟ ವಿಷಯ ಅವಧಿಯಲ್ಲಿ ಮಕ್ಕಳು ಬಿಡಿಸಬಲ್ಲರೇ ಎಂಬುದು ಗಮನಾರ್ಹ ವಿಷಯ

# ಪಠ್ಯವಸ್ತು – 4ನೆಯ ತರಗತಿ

## ವಾರಕ್ಕೆ 4 ಅವಧಿಗಳಂತೆ ವರ್ಷಕ್ಕೆ 140 ಅವಧಿಗಳು

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ |
|---|---|---|---|
| **ಸ್ವತಂತ್ರ ಅಭಿವ್ಯಕ್ತಿ ಚಿತ್ರರಚನೆಗೆ ಅವಕಾಶ** | 05 | • ವಿಷಯಾಧಾರಿತ ಚಿತ್ರಗಳ ರಚನೆಗೆ ಅವಕಾಶ: ಮುಕ್ತ ಅಭಿವ್ಯಕ್ತಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ರಚನೆಗೆ ಅವಕಾಶ ನೀಡುವುದು.<br>• ಸೂಕ್ತ ಬಣ್ಣಗಳ ಆಯ್ಕೆ – ದಿನನಿತ್ಯದ ತಾವು ನೋಡಿದ ಸಾಮಾನ್ಯ ವಿಷಯಗಳ ಆಯ್ಕೆ ಮಾಡಿ ಚಿತ್ರಿಸುವುದು.<br>• ಬಣ್ಣಗಳ ಸಂಯೋಜನೆಯನ್ನು ತಿಳಿಸುವುದು.<br>• ಕಟ್ಟುಹಾಕಲು ಸರಿಯಾಗುವಂತೆ ಕೃತಿ ರಚನೆ ಮಾಡಲು ತಿಳಿಸುವುದು. ಪ್ರದರ್ಶನ, ಮೆಚ್ಚುಗೆ, ವಿಮರ್ಶೆಗೆ ಮುಕ್ತ ಅವಕಾಶ ನೀಡುವುದು. | ಪರಿಸರ ವಿಜ್ಞಾನ ಪಾಠದಲ್ಲಿ ವಿಷಯ ಗ್ರಹಿಕೆಗೆ ಸಾಧ್ಯ. |
| **ದಾರದಿಂದ ಚಿತ್ರ ರಚನೆ** | 05 | • ಬಿಳಿ ಕಾಗದವನ್ನು ಬಣ್ಣದ ದಾರದೊಂದಿಗೆ ಮಡಚಿ ನಿಧಾನವಾಗಿ ಎಳೆಯುವುದು. ವಿವಿಧ ಆಕೃತಿಗಳ ಸುಂದರ ರಚನೆಗೆ ಅವಕಾಶ.<br>• ಮಡಚುವ ರೀತಿಯಿಂದ ವಿವಿಧ ಬಣ್ಣಗಳನ್ನು ಸೇರಿಸಿ ಒತ್ತಿ ಚಿತ್ರರಚನೆ. ವಿವಿಧ ವಿಚಿತ್ರ ಆಕೃತಿಗಳ ಸುಂದರ ರಚನೆಗೆ ಅವಕಾಶ.<br>• ಇಂತಹ ಚಿತ್ರಗಳ ವಿಮರ್ಶೆ, ಪ್ರಶಂಸೆ, ಅನ್ವೇಷಣೆಗೆ ಅವಕಾಶ ಮಾಡುವುದು. ಅಮೂರ್ತ ರೂಪಗಳ ಕಲ್ಪನೆಗೆ ಅವಕಾಶ. | |
| **ಮೇಣದ ಚಿತ್ರ ರಚನೆ** | 05 | • ಖಾಲಿ ಕಾಗದದ ಮೇಲೆ ಮೇಣದ ಬತ್ತಿಯಿಂದ ವಿನ್ಯಾಸ ಅಪೇಕ್ಷಿತ ಚಿತ್ರ ಗಳನ್ನು ಬರೆದು, ಗಾಢ ಬಣ್ಣವನ್ನು ಇಡೀ ಕಾಗದಕ್ಕೆ ಲೇಪಿಸಿದಾಗ, ಮೇಣ ಇರುವ ಜಾಗವು ಬಣ್ಣರಹಿತವಾಗಿ ಕಾಣುವುದು. | ಪರಿಸರ ವಿಜ್ಞಾನ, ಕನ್ನಡಪಾಠಕ್ಕೆ ಸಮನ್ವಯಗೊಳಿಸುವುದು. |

| 1 | 2 | 3 | 4 |
|---|---|---|---|
| **ವಿನ್ಯಾಸ ರಚನೆ:** | 10 | • ಭೂಮಿತಿ ಆಕೃತಿಗಳನ್ನು ರಚಿಸಿ ವಿನ್ಯಾಸಗೊಳಿಸಿ ಅದಕ್ಕೆ ಬಣ್ಣ ತುಂಬುವುದು.<br>• ಸಾಲುಪಟ್ಟಿಗಳ ರಚನೆ, ರಂಗೋಲಿಗಳ ರಚನೆ, ಇತ್ಯಾದಿ.<br>• ವಿವಿಧ ಬೀಜಗಳನ್ನು, ಎಲೆಗಳನ್ನು ಹೂಗಳನ್ನು ಬಳಸಿ ವಿನ್ಯಾಸ (ನಕ್ಷೆ) ರಚನೆ ಇತ್ಯಾದಿ. | ಗಣಿತಪಾಠದ ಭೂಮಿತಿಯ ಬಗ್ಗೆ ಪರಿಚಯದೊಂದಿಗೆ ಸಹಕಾರಿ. |
| **ಮುದ್ರಣ ಕಲೆ:** | 10 | • ತರಕಾರಿಗಳನ್ನು ವಿವಿಧ ರೀತಿಯಲ್ಲಿ ಕತ್ತರಿಸಿ, ಅಪೇಕ್ಷಿತ ವಿನ್ಯಾಸಗಳನ್ನು ಕೆತ್ತಿ ಬಣ್ಣದಲ್ಲಿ ಅದ್ದಿ ಮುದ್ರಿಸುವುದು. ಸಾಬೂನು, ರಬ್ಬರ್ ಮುಂತಾದ ಮೆದು ಸಾಮಗ್ರಿಗಳ ಮೇಲೆ ಅಪೇಕ್ಷಿತ ಚಿತ್ರಗಳನ್ನು ಕೆತ್ತಿ ಬಣ್ಣದಲ್ಲಿ ಅದ್ದಿ ಮುದ್ರಿಸುವುದು.<br>• (ಸ್ಪಂಜು, ಪೇಪರ್, ಬಟ್ಟೆಗಳನ್ನು ಉಪಯೋಗಿಸಿ ಚಿತ್ರಿಸುವುದು.) | ಕನ್ನಡ ಪಾಠದಲ್ಲಿನ ಕಥಾಚಿತ್ರಗಳಿಗೆ ಅನುಕೂಲ. |
| **ಕೊಲ್ಯಾಜ್ ರಚನೆ:** | 10 | • ವಿವಿಧ ತ್ಯಾಜ್ಯವಸ್ತುಗಳು, ಬೀಜಗಳು, ತೊಗಟೆ, ಎಲೆಗಳು, ಬಣ್ಣದ ಬಟ್ಟೆಗಳ ಚೂರುಗಳು, ಮುದ್ರಿತ ಬಣ್ಣದ ಕಾಗದಗಳು ಮುಂತಾದವುಗಳಿಂದ ಹೊಸತನದ ಕೃತಿಗಳ ರಚನೆ<br>• ಅಭಿವ್ಯಕ್ತಿಗೆ ಮುಕ್ತ ಸ್ವಾತಂತ್ರ್ಯ ನೀಡುವುದು, ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸುವುದು | ವಿಜ್ಞಾನ ಪಾಠಕ್ಕೆ ಪೂರಕ. |
| **ಜೇಡಿಮಣ್ಣಿನ ಕಲೆ:**<br>**1. ಉಬ್ಬುಶಿಲ್ಪ ರಚನೆ:**<br>**2. ಘನಾಕಾರದ ಶಿಲ್ಪ ರಚನೆ:** | 10 | • ಜೇಡಿಮಣ್ಣು/ಕ್ಲೇ ವ್ಯಾಕ್ಸ್‌ಗಳನ್ನು ಬಳಸಿ, ಪ್ರಾಣಿಗಳು, ಪಕ್ಷಿಗಳು, ಹಣ್ಣುಗಳು, ತರಕಾರಿಗಳು ರಚನೆ, ಪಾತ್ರೆ, ಹಣತೆ ಬಂಡಿಗಳು, ಬೀಸುವಕಲ್ಲು ಇತ್ಯಾದಿಗಳ ರಚನೆ.<br>• ಹಲಗೆಯ ಮೇಲೆ ಜೇಡಿಮಣ್ಣನ್ನು ಅಂಟಿಸಿ ಅರ್ಧ ಉಬ್ಬಿದ ಚಿತ್ರರಚನೆ. ಖಾಲಿ ಕಾಗದದ ಮೇಲೆ ಜೇಡಿ ಮಣ್ಣು ಅಥವಾ ಕ್ಲೇವ್ಯಾಕ್ಸ್‌ಗಳಿಂದ ವಿವಿಧ ಎಲೆಗಳು, ಹೂಗಳ ಆಕೃತಿ ರಚಿಸಿ ಅಂಟಿಸುವುದು. | ಪರಿಸರ ವಿಜ್ಞಾನ ಪಠ್ಯಕ್ಕೆ ಸಂಬಂಧಿಸಿದ ವಿಷಯಗಳ ಪರಿಚಯ |
| **ಕಥಾಚಿತ್ರ ರಚನೆ:** | 20 | • ಮಕ್ಕಳಿಗೆ ಪಂಚತಂತ್ರ, ಮುಂತಾದ ಕತೆಗಳನ್ನು ಹೇಳಿ ಅದಕ್ಕೆ ಸಂಬಂದಿಸಿದ ಚಿತ್ರವನ್ನು ರಚಿಸಲು ತಿಳಿಸುವುದು.<br>(ಕಲ್ಪನಾ ಸಾಮರ್ಥ್ಯಕ್ಕೆ ಹೆಚ್ಚಿನ ಅವಕಾಶ ನೀಡುವುದು.) | ಕನ್ನಡಪಾಠದ ಚಿತ್ರಗಳನ್ನು ಮಾಡಲು ತಿಳಿಸುವುದು. |

| 1 | 2 | 3 | 4 |
|---|---|---|---|
| **ಮುಖವಾಡ ರಚನೆ** | 10 | ದಪ್ಪವಾದ ಬಣ್ಣದ ಹಾಳೆಗಳನ್ನು ಮಡಚಿ ಸಾಮಾನ್ಯ ಮುಖವಾಡಗಳನ್ನು ರಚಿಸಲು ತಿಳಿಸುವುದು.<br>ಕೊರಳ ಹಾರಗಳು, ಕಿರೀಟ, ಆಭರಣಗಳನ್ನು ತಯಾರಿಸುವುದನ್ನು ತಿಳಿಸುವುದು. | ಕನ್ನಡ ಪಠ್ಯದಲ್ಲಿಯ ವಿಷಯಗಳನ್ನು ಪಾತ್ರದಾರಿಯಾಗಿ ವಿಂಗಡಿಸಿ ಪ್ರದರ್ಶನ ಕಲೆಯಾಗಿ ಬಳಸಿಕೊಳ್ಳುವುದು. |
| **ಪ್ರದರ್ಶನ, ಸಂಗ್ರಹಣೆ:** | 05 | ತಾವು ರಚಿಸಿದ ಕೃತಿಗಳನ್ನು ಪ್ರದರ್ಶನ ಕ್ರಮವನ್ನು ತಿಳಿಸುವುದು. ತೂಗು ಹಾಕುವ ಕ್ರಮ, ಒಪ್ಪಓರಣವಾಗಿ ಪ್ರದರ್ಶಿಸುವ ಕಲೆಯನ್ನು ತಿಳಿಸುವುದು.<br>(ಉತ್ತಮ ಚಿತ್ರಗಳು, ಬೀಜಗಳು, ಮಣಿಗಳು, ಬಣ್ಣ ಬಣ್ಣದ ಕಲ್ಲುಗಳು, ಎಲೆಗಳು ಇತ್ಯಾದಿಗಳನ್ನು ಸಂಗ್ರಹಿಸುವುದು.)<br>ಸಂಗ್ರಹಣಾ ಗುಣ ವೃದ್ಧಿಸುವುದು. | ಪರಿಸರ ವಿಜ್ಞಾನ ಪಾಠಕ್ಕೆ ಸಮನ್ವಯ ಗೊಳಿಸುವುದು. |
| **ಕಾಗದಕಲೆ:** | 15 | ಕಾಗದಗಳನ್ನು ವಿವಿಧ ರೀತಿಯಲ್ಲಿ ಮಡಚುವುದರಿಂದ ಪ್ರಾಣಿ, ಪಕ್ಷಿಗಳು ಮುಂತಾದ ಆಕೃತಿಗಳ ರಚನೆ.<br>ಕತ್ತರಿಸುವುದು, ಅಂಟಿಸುವುದರೊಂದಿಗೆ ಹೂಗಳ ನಿರ್ಮಾಣ, ಹಾರಗಳ ರಚನೆ, ಪತಾಕೆಗಳ ರಚನೆ ಇತ್ಯಾದಿಗಳು | ಪರಿಸರ ವಿಜ್ಞಾನ |
| **ಸ್ಮರಣಚಿತ್ರ:** | 25 | ಗಳಿಸಿದ ಅನುಭವಗಳನ್ನು/ಘಟನೆಗಳನ್ನು ಪುನರ್ಮನನ ಮಾಡಿ ಅಪೇಕ್ಷಿತ ಚಿತ್ರಗಳನ್ನು ರಚಿಸಲು ಅವಕಾಶ ನೀಡುವುದು. | ಬೌದ್ಧಿಕ ಮಟ್ಟ ಹೆಚ್ಚಲು ಸಹಕಾರಿ. |
| **ಅಕ್ಷರ ಲೇಖನ:** | 10 | ಆಂಗ್ಲಭಾಷೆ, ಕನ್ನಡ, ಹಿಂದಿ ಉಳಿದ ಎಲ್ಲ ಭಾಷೆಗಳ ಅಕ್ಷರಗಳನ್ನು ಕ್ರಮಬದ್ಧವಾಗಿ ದುಂಡಗೆ ಬರೆಯಲು ತಿಳಿಸುವುದು. ಶುಭಾಶಯ ಪತ್ರ ರಚನೆ, ಮುಖಪುಟ ರಚನೆ ಮುಂತಾದವುಗಳ ರಚನೆ. | ಚಾರ್ಟ್‌ಗಳ ರಚನೆ, ಪ್ರಾಜೆಕ್ಟ್‌ಗಳ ರಚನೆ ಮಾಡುವ ಸಮಯದಲ್ಲಿ ಸಹಕರಿಸುವುದು. |
| **ಒಟ್ಟು** | 140 | ಅವಧಿಗಳು | |

**ಮಕ್ಕಳು ಅವರದೇ ಆದ ರೂಪವನ್ನು ಕಲ್ಪಿಸುತ್ತಾರೆ. ಇಲ್ಲಿ ನೈಜಕ್ಕಿಂತ ಸಂಕೇತಗಳೇ ಪ್ರಧಾನ. ನಿಯಮಗಳೂ ಸಹ ಅವರದೇ ಆಗಿರುತ್ತದೆ. ಪರಸ್ಪರ ಸಂಬಂಧವಿರುವ ಹಲವಾರು ವಿಷಯಗಳನ್ನು ಒಳಗೊಂಡ ವಿನ್ಯಾಸಗಳ ಜೋಡಣೆಯಾಗಿರುತ್ತದೆ.**

## 5ನೆಯ ತರಗತಿಯ ಶಿಕ್ಷಕರು ಬೋಧನಾ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು

☆ ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯ ಹಿನ್ನೆಲೆಯಲ್ಲಿ ಚಿತ್ರರಚನೆಗೆ ಅವಕಾಶ ಕಲ್ಪಿಸುವುದು.

☆ ಕೃತಿ ರಚನಾ ಚಟುವಟಿಕೆಯಲ್ಲಿ ವಿವಿಧ ಮಾಧ್ಯಮಗಳ ಬಗ್ಗೆ ಪರಿಚಯ ಮಾಡುವುದು.

☆ ವಿವಿಧ ಮಾಧ್ಯಮಗಳ ಮೂಲಕ ಸಕ್ರಿಯ ಅಭಿವ್ಯಕ್ತಿಗೆ ಸಹಕಾರಿಯಾಗುವುದು.

☆ ಬಣ್ಣಗಳ ಕಲ್ಪನೆಯನ್ನು ವಿಸ್ತರಿಸುವುದು ಹಾಗೂ ಬಳಸುವುದು.

☆ ಅನ್ವೇಷಣಾ ಸಾಮರ್ಥ್ಯ ಹೆಚ್ಚಿಸುವಿಕೆ. ಸೃಜನಾತ್ಮಕಕ್ರಿಯೆಗೆ ಅವಕಾಶ ಕಲ್ಪಿಸುವುದು.

☆ ಪರಿಸರದಲ್ಲಿ ಕಾಣುವ ದೃಶ್ಯ, ವಸ್ತು, ಪ್ರಾಣಿ, ಪಕ್ಷಿಗಳನ್ನು ಚಿತ್ರಿಸಿ ಬಣ್ಣ ಲೇಪಿಸುವುದು.

☆ ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸುವುದು ಅವುಗಳ ಬಗ್ಗೆ ತಿಳಿಯುವುದು.

☆ ಸಂರಕ್ಷಣೆ ಹಾಗೂ ರಸಗ್ರಹಣಕ್ಕೆ ಅವಕಾಶ ಕಲ್ಪಿಸುವುದು.

☆ ಜ್ಯಾಮಿತಿಯ ಆಕೃತಿಗಳನ್ನು ಬಳಸಿ ಕ್ರಿಯಾತ್ಮಕವಾಗಿ ಚಿತ್ರ ರಚಿಸುವ ವಿಧಾನ ತಿಳಿಸುವುದು.

☆ ಸ್ಪರ್ಧಾಮನೋಭಾವ ಬೆಳೆಸುವುದು.

☆ ಕಂಪ್ಯೂಟರ್ ತಂತ್ರಜ್ಞಾನದೊಂದಿಗೆ ಚಿತ್ರರಚನೆಗೆ ಅವಕಾಶ ಕಲ್ಪಿಸುವುದು.

☆ ವೀಕ್ಷಣಾ ಸಾಮರ್ಥ್ಯ ಹೆಚ್ಚಿಸಲು ಅನುವು ಮಾಡುವುದು.

☆ ಉಪಕರಣಗಳ ಬಗ್ಗೆ ಉಪಯೋಗಿಸುವ ವಿಧಾನ ತಿಳಿಸುವುದು.

☆ ಸ್ಮರಣ ಚಿತ್ರ, ಅಕ್ಷರ ಲೇಖನ, ವಸ್ತುಚಿತ್ರ, ಪ್ರಕೃತಿಚಿತ್ರ, ಅಲಂಕಾರಿಕ(ನಕ್ಷಾ) ಚಿತ್ರ, ಸರಳಗೈ ಚಿತ್ರ ಇವುಗಳ ಬಗ್ಗೆ ಪರಿಚಯ ಮಾಡುವುದು.

**ತಾತ್ವಿಕ (ಲಿಖಿತ) (ಮಾದರಿ)**

ತರಗತಿಯ ಪ್ರಾರಂಭದಲ್ಲಿ ತಾತ್ವಿಕ ವಿಷಯಗಳನ್ನು ವಿವರಿಸಿ ತಿಳಿಯಪಡಿಸುವುದು. ಪ್ರಶ್ನೋತ್ತರ ಮಾದರಿಯಲ್ಲಿ ವಿಷಯ ಸಂವಹನಗೊಳಿಸುವುದು

☆ ಚಿತ್ರಕಲೆ ಎಂದರೇನು?

☆ ಮೂಲ ಬಣ್ಣಗಳನ್ನು ಮತ್ತು ಮಿಶ್ರಬಣ್ಣಗಳನ್ನು ಹೆಸರಿಸಿ?

☆ ಘನಾಕೃತಿಯ ಆಯಾಮಗಳು ಎಷ್ಟು?

☆ ಸ್ಮರಣ ಚಿತ್ರ ಎಂದರೇನು?

☆ ಅಲಂಕಾರಿಕ ವಿನ್ಯಾಸಗಳು ಎಲ್ಲೆಲ್ಲಿ ನೋಡಿದಿರಿ.

☆ **ತದ್ರೂಪ ಚಿತ್ರರಚನೆ:–** ಹಣ್ಣುಗಳು, ತರಕಾರಿ, ದಿನನಿತ್ಯ ಉಪಯೋಗಿಸುವ ವಸ್ತುಗಳು, ಸಹಪಾಠದಲ್ಲಿ ಬರುವ ಚಿತ್ರಗಳು ಅನುಕರಣೆ ಮಾಡುವುದಕ್ಕೆ ಅವಕಾಶ ನೀಡುವುದು.

☆ **ವೀಕ್ಷಣಾಚಿತ್ರ:–** ವಿದ್ಯಾರ್ಥಿಗಳಿಗೆ ತಮ್ಮ ಮುಂದೆ ಇಟ್ಟಿರುವ ದಿನನಿತ್ಯ ಉಪಯೋಗಿಸುವ ವಸ್ತುಗಳ ಪ್ರಮಾಣಬದ್ಧವಾಗಿ ಚಿತ್ರಿಸಲು ತಿಳಿಸುವುದು.

☆ ಸ್ವಕಲ್ಪನೆಯ ಚಿತ್ರಗಳನ್ನು ರಚಿಸಿ ಬಣ್ಣ ತುಂಬಲು ಹೇಳುವುದು.

☆ **ರಂಗೋಲಿ:–** ವಿನ್ಯಾಸ ಬಣ್ಣ ಸಂಯೋಜನೆಗೆ ಅವಕಾಶ

☆ **ಬಣ್ಣಗಳ ಬಗ್ಗೆ ಪರಿಚಯ:–** ಲೇಪನ ವಿಧಾನ, ತಂತ್ರಗಾರಿಕೆ, ಸ್ಪ್ರೇ ಮಾಡುವುದು ಇತ್ಯಾದಿ.

☆ **ಕಾಗದಕಲೆ ಮತ್ತು ಕೊಲ್ಯಾಜ್:–** (ಅಂಟಿಸುವ) ಕಲೆ

☆ ಮುದ್ರಣ ಕಲೆ, ಜೇಡಿಮಣ್ಣಿನ ಕಲೆ, ಭೂಮಿತಿಯ ಆಕೃತಿಗಳನ್ನು ಬಳಸಿ ಚಿತ್ರ/ವಿನ್ಯಾಸ ರಚನೆಗೆ ಅವಕಾಶ ನೀಡುವುದು.

☆ ಅಕ್ಷರ ಲೇಖನ

☆ ಚಿತ್ರಕಲಾ ಇತಿಹಾಸ

☆ ಚಿತ್ರ ಸಂಗ್ರಹ

☆ ಚಿತ್ರಗಳಿಗೆ ಪೂರಕ ಕಥೆ ಪೋಣಿಸುವುದು, ಕಥೆಗೆ ಚಿತ್ರಸರಣಿ ಮಾಡಲು ಹೇಳುವುದು/ಪ್ರೋತ್ಸಾಹಿಸುವುದು.

☆ ಕುತೂಹಲ, ಅಚ್ಚರಿ ಮೂಡಿಸುವಂತೆ ಚಿತ್ರ ರಚನಾ ಕೌಶಲ ಬಳಕೆ ಮತ್ತು ಚಿತ್ರಕಲಾ ಪ್ರದರ್ಶನ.

# ಪಠ್ಯವಸ್ತು – 5ನೆಯ ತರಗತಿ

## ವಾರಕ್ಕೆ 6 ಅವಧಿಗಳಂತೆ ವರ್ಷಕ್ಕೆ 210 ಅವಧಿಗಳು

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ. |
|---|---|---|---|
| **ತದ್ರೂಪ ಚಿತ್ರರಚನೆ:** | **25** | • ದಿನನಿತ್ಯ ಉಪಯೋಗಿಸುವ ಸಾಮಾನ್ಯ ವಸ್ತುಗಳನ್ನು ನೋಡಿ ಅದೇ ರೀತಿಯಲ್ಲಿ ಚಿತ್ರಿಸಲು ತಿಳಿಸುವುದು. ಸಹಪಾಠದಲ್ಲಿ ಇರುವ ಚಿತ್ರಗಳನ್ನು ನೋಡಿ ಅದೇ ರೀತಿ ಬರೆಯಲು ತಿಳಿಸುವುದು. | ಪರಿಸರವಿಜ್ಞಾನ ಪಾಠಕ್ಕೆ ಸಮನ್ವಯ ಗೊಳಿಸುವುದು. |
| **ವೀಕ್ಷಣಾ ಚಿತ್ರ:** | **20** | • ವಿವಿಧ ಆಕಾರದ ವಸ್ತುಗಳ ಪರಿಚಯ ವಿವಿಧ ಘನಾಕೃತಿಯ ವಸ್ತುಗಳು, ಮಾದರಿಗಳು, ಎಲೆಗಳು, ಟೊಂಗೆ, ಹೂಗಳು, ಪರಿಸರ, ವಿದ್ಯಾರ್ಥಿಗಳ ಮನೆ, ಶಾಲೆ, ತಾವು ನೋಡುವ ಇನ್ನಿತರ ವಿಷಯಗಳನ್ನು ವೀಕ್ಷಿಸಿ ಚಿತ್ರಬರೆಯಲು ತಿಳಿಸುವುದು. ದೂರ, ಹತ್ತಿರ, ಮೇಲೆ ಕೆಳಗೆ, ಮುಂದೆ ಹಿಂದೆ, ಆಯಾಮಗಳ ಪರಿಚಯ ಮಾಡಿವುದು. | ಕೂಲಂಕುಶ ಅಧ್ಯಯನಕ್ಕೆ ಸಹಕಾರಿ. |
| **ಕಲ್ಪನಾ ಚಿತ್ರ:** | **30** | • (ಜ್ಞಾನೇಂದ್ರಿಯಗಳಿಗೆ ವ್ಯಾಯಾಮ, ವೀಕ್ಷಣಾ ಸಾಮರ್ಥ್ಯ ಹೆಚ್ಚುವುದು.)<br>• ವಿಷಯಾಧಾರಿತ, ಅಪೇಕ್ಷಿತ ಚಿತ್ರ ರಚನೆಗೆ ಮುಕ್ತ ಅವಕಾಶ ನಿಡುವುದು, ಸಂಯೋಜನೆ, ಬಣ್ಣ, ವಿನ್ಯಾಸ, ಅರ್ಥಗರ್ಭಿತ, ಸಂದೇಶ ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದು. | |
| **ರಂಗೋಲಿ ಕಲೆ:** | **15** | • ಕೆಲಸದಲ್ಲಿ ತನ್ಮಯತೆ, ಶ್ರದ್ಧೆ, ಮುಂತಾದ ಗುಣಗಳನ್ನು ಬೆಳೆಸುವುದು. ಪ್ರಮಾಣಬದ್ಧ ಚುಕ್ಕೆಗಳ ರಚನೆ, ಚಲನೆ, ವಿನ್ಯಾಸ, ತಳುಕುಗಳು, ಇತ್ಯಾದಿಗಳಿಂದ ವಿನ್ಯಾಸ ರಚನೆ.<br>• ಪುಡಿಗಳನ್ನು ಉದುರಿಸುವ ವಿಧಾನ ಹೇಳಿಕೊಡುವುದು.<br>• ಸಮತಟ್ಟಾಗಿ ಬಣ್ಣದ ಪುಡಿಗಳನ್ನು ತುಂಬಲು ಹೇಳುವುದು. | ಕನ್ನಡ ಪಾಠ ರಾಷ್ಟ್ರೀಯ ಹಬ್ಬಗಳ ಆಚರಣೆ ಏಕಾಗ್ರತೆ ಅಚ್ಚುಕಟ್ಟುತನ, ವಿನ್ಯಾಸಗಳ ಕಲ್ಪನೆಯಿಂದ ಇತರ ಪಾಠಗಳಿಗೆ ಉಪಯುಕ್ತವಾಗಿದೆ. |

| 1 | 2 | 3 | 4 |
|---|---|---|---|
| ಬಣ್ಣಗಳ ಬಗ್ಗೆ ಪರಿಚಯ ಲೇಪನ ಇತ್ಯಾದಿ | 10 | • ತಲೆ, ಹೃದಯ ಮತ್ತು ಕೈ ಈ ಮೂರು ಅಂಗಾಂಗಗಳು (Head, Heart, Hand) 3H ಸೇರಿ ಕ್ರಿಯೆ ನಡೆಯುವುದು.<br>• ಮೂಲಬಣ್ಣಗಳು, ಮಿಶ್ರಬಣ್ಣಗಳ ಪರಿಚಯ. ಮಿಶ್ರಬಣ್ಣದಲ್ಲಿ ಏರಿಳಿತ, ಒಂದೇ ಬಣ್ಣದ ವಿವಿಧ ಸ್ತರಗಳು ಇವುಗಳ ಬಗ್ಗೆ ವಿಷಯಾರ್ಥಕ್ಕೆ ಹೊಂದುವಂತೆ ಬಣ್ಣಗಳ ಲೇಪನವನ್ನು ತಿಳಿಸಿಕೊಡುವುದು.<br>• ಕ್ರೆಯಾನ್ ಬಣ್ಣಗಳನ್ನು ದಪ್ಪವಾಗಿ ತೀಡಿ ಹಚ್ಚುವುದು, ಬ್ಲೇಡ್, ಅಥವಾ ನಾಣ್ಯ ಇನ್ನಿತರ ಗಟ್ಟಿ ಪದಾರ್ಥಗಳಿಂದ ಕೆತ್ತಿ ತೆಗೆಯುವುದು.<br>• ಹಲ್ಲುಜ್ಜುವ ಬ್ರೆಶ್‌ನಿಂದ ಸ್ಪ್ರೇ ಮಾಡಿ ಬಣ್ಣ ಲೇಪನ ತಿಳಿಸುವುದು.<br>(Dry Brush) ಒಣಗಿದ ಬ್ರೆಶ್‌ಗಳನ್ನು ಉಪಯೋಗಿಸುವ ಕ್ರಮ ತಿಳಿಸುವುದು.<br>• ಕಾಗದದ ಮಧ್ಯೆ ಬಣ್ಣಗಳನ್ನು ಹಾಕಿ ಮಡಚುವ ಮತ್ತು ತೀಡುವುದರ ಮೂಲಕ ವಿವಿಧ ವಿನ್ಯಾಸಗಳ ರಚನೆ ತಿಳಿಸುವುದು.<br>• ನೂಲುಗಳನ್ನು ಬಣ್ಣದಲ್ಲಿ ಅದ್ದಿ ಕಾಗದದ ಮೇಲೆ ವಿನ್ಯಾಸ ರಚನೆಗಳನ್ನು ತಿಳಿಸುವುದು. | ಪರಿಸರ ಜ್ಞಾನ ಬಣ್ಣಗಳ ಅರ್ಥ ವ್ಯಾಪ್ತಿ ಬಗ್ಗೆ ಅರಿವು ಬರುವುದು. |
| ಕೊಲ್ಯಾಜ್ ರಚನೆ: | 15 | • ವಿವಿಧ ಮುದ್ರಿತ ಬಣ್ಣದ ಹಾಳೆಗಳನ್ನು ಬಣ್ಣದ ಕಾಗದಗಳನ್ನು ಅನುಪಯುಕ್ತ ತ್ಯಾಜ್ಯ ವಸ್ತುಗಳನ್ನು ಅಪೇಕ್ಷಿತ ಚಿತ್ರ ಅಥವಾ ಜಾಗಗಳಿಗೆ ಬೇಕಾದಂತೆ ಹರಿದು, ಅಥವಾ ಅಂಟಿಸಿ, ಕೃತಿರಚನೆಗೆ ಅವಕಾಶ ನೀಡುವುದು.<br>(ವಿದ್ಯಾರ್ಥಿಗಳ ಚಿಂತನೆಗೆ ಮುಕ್ತ ಅವಕಾಶ ನಿಡುವುದು. ಸೌಂದರ್ಯ ಪ್ರಜ್ಞೆ, ಜೋಡಿಸುವ ಜಾಣ್ಮೆ ಮುಂತಾದವುಗಳನ್ನು ಮೈಗೂಡಿಸಿಕೊಳ್ಳುವರು.) | |
| ಮುದ್ರಣಕಲೆ: | 15 | • ಯಾವುದೇ ಮೆದುವಾಗಿರುವ (ರಬ್ಬರ್ ತರಹದ) ವಸ್ತುಗಳನ್ನು ಬಣ್ಣದಲ್ಲಿ ಅದ್ದಿ ಅಪೇಕ್ಷಿತ ಸ್ಥಳಗಳಿಗೆ ಮುದ್ರಿಸುವುದು. (ಮುದ್ರಿಸುವಾಗ ವಿನ್ಯಾಸ, ಸಂಯೋಜನೆಯನ್ನು ತಿಳಿಸುವುದು.) | |

| 1 | 2 | 3 | 4 |
|---|---|---|---|
| **ಜೇಡಿಮಣ್ಣಿನ ಕೃತಿ ರಚನೆ:** | 15 | • ಅಭಿವ್ಯಕ್ತಿಗೆ ಪೂರ್ಣ ಅವಕಾಶ ನಿಡುವುದು.<br>–ಮೆದು ಮಣ್ಣು, ವ್ಯಾಕ್ಸ್‌ಗಳನ್ನು ಮತ್ತು ಇನ್ನಿತರ ಕಡ್ಡಿ, ಗರಿಗಳು ಮುಂತಾದವುಗಳನ್ನು ಮಿಶ್ರಮಾಧ್ಯಮವನ್ನು ಉಪಯೋಗಿಸಿ ಕೃತಿಗಳ ರಚನೆಗೆ ಅವಕಾಶ ನೀಡುವುದು. | |
| **ಭೂಮಿತಿ ಆಕೃತಿಗಳಲ್ಲಿ ವಿನ್ಯಾಸ ರಚನೆ:** | 10 | • ಸ್ಪರ್ಶ ಅನುಭವ ಕ್ರಿಯಾತ್ಮಕ ಚಿಂತನೆ ಅನ್ವೇಷಣೆಗೆ ಅವಕಾಶ. ಭೂಮಿತಿಯ ಆಕೃತಿಗಳನ್ನು ಉಪಯೋಗಿಸಿ ಚಿತ್ರ/ವಿನ್ಯಾಸ ರಚನೆಗೆ ಅವಕಾಶ ನೀಡುವುದು.<br>ಸಂಯೋಜನೆ, ತಳುಕುಗಳನ್ನು ತಿಳಿಸುವುದು.<br>• ಅಪೇಕ್ಷಿತ ಸ್ಥಳಗಳಿಗೆ ಮಾತ್ರ ಬಣ್ಣ ತುಂಬುವುದನ್ನು ತಿಳಿಸುವುದು. | ಭೂಮಿತಿ ನಕ್ಷೆ ರೇಖಾಗಣಿತಕ್ಕೆ ಸಹಕಾರಿ |
| **ಕಾಗದಕಲೆ:** | 30 | • ಕಾಗದಗಳನ್ನು ಮಡಚುವುದು, ಕತ್ತರಿಸುವುದರ ಮೂಲಕ ಹಾರಗಳು, ಹೂ ಗುಚ್ಛ ಎಲೆಗಳು, ಮುಖವಾಡಗಳು ಮುಂತಾದವುಗಳನ್ನು ರಚಿಸಲು ತಿಳಿಸುವುದು. | |
| **ಅಕ್ಷರ ಲೇಖನ:** | 15 | • ಆಂಗ್ಲಭಾಷೆ, ಕನ್ನಡ ಭಾಷೆಗಳ ಅಕ್ಷರಗಳನ್ನು ಕ್ರಮಬದ್ಧವಾಗಿ ದುಂಡಗೆ ಬರೆಯಲು ತಿಳಿಸುವುದು. ಶುಭಾಶಯ ಪತ್ರ ರಚನೆ ಬಣ್ಣಗಳಿಂದ ಅಕ್ಷರಗಳನ್ನು ಅಂದಗೊಳಿಸುವುದು, ಮುಖಪುಟ ರಚನೆಯನ್ನು ತಿಳಿಸುವುದು.<br>ವಿವಿಧರೀತಿಯ ಫಲಕಗಳ ರಚನೆಗೆ ಅವಕಾಶ ನೀಡುವುದು. | ಭಾಷಾ ಪಾಠಗಳ ಕಲಿಕೆಗೆ ಉತ್ತಮ ಕೊಡುಗೆ |
| **ಕಲಾಇತಿಹಾಸ/ ಕಲಾ ರಸಗ್ರಹಣ** | 05 | • ಚಿತ್ರಕಲೆ ಬೆಳೆದು ಬಂದ ವಿಷಯವನ್ನು ತಿಳಿಸುವುದು. ಪ್ರಸಿದ್ಧ ಕಲಾವಿದರ ಬಗ್ಗೆ ಅವರ ಕೃತಿಗಳ ಬಗ್ಗೆ ತಿಳಿಸುವುದು.<br>• ಗುಹಾಂತರ ಚಿತ್ರಗಳ ಬಗ್ಗೆ ತಿಳಿಸುವುದು.<br>• ಶಿಲ್ಪ ವೈಭವವಿರುವ ಪ್ರದೇಶಗಳ ಬಗ್ಗೆ ತಿಳಿಸುವುದು. ಪ್ರಾದೇಶಿಕ, ಐತಿಹಾಸಿಕ ಸ್ಥಳಗಳ ಬಗ್ಗೆ ತಿಳಿಸುವುದು. | ಸಮಾಜ ವಿಜ್ಞಾನ ಪಠ್ಯಕ್ಕೆ ಪೂರಕ. |
| **ಚಿತ್ರ ಸಂಗ್ರಹ:** | 05 | • ರಚಿಸಿದ ಕೃತಿಗಳನ್ನು ಉತ್ತಮ ಚಿತ್ರಗಳನ್ನು ಹಾಳಾಗದಂತೆ ರಕ್ಷಣೆ ಮಾಡಿ ಸಂಗ್ರಹಿಸುವ ಗುಣವನ್ನು ಬೆಳೆಸುವುದು.<br>• ಅಚ್ಚುಕಟ್ಟುತನ, ಶಿಸ್ತು ಬೆಳೆಯುವುದು. | |
| **ಒಟ್ಟು ಅವಧಿಗಳು** | **210** | | |

## 6ನೆಯ ತರಗತಿಯ ಬೋಧನಾ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು

☆ ವಿದ್ಯಾರ್ಥಿಗಳಿಗೆ ಇಷ್ಟವಾದ ವಸ್ತು, ಪ್ರಾಣಿಗಳ ಚಿತ್ರ ರಚನೆಗೆ ಮುಕ್ತ ಅವಕಾಶ ಕಲ್ಪಿಸುವುದು.

☆ ನಿರ್ಧಿಷ್ಟ ಅಪೇಕ್ಷಿತ ಚಿತ್ರರಚನೆ.

☆ ಕಲ್ಪನಾ ಚಿತ್ರ, ಅಮೂರ್ತ ಚಿತ್ರರಚನೆ

☆ ಜ್ಯಾಮಿತಿ ನಕ್ಷಾ ಚಿತ್ರರಚನೆ. ಕಂಪಾಸ್ ಪೆಟ್ಟಿಗೆ ಪರಿಚಯ.

☆ ಜೇಡಿಮಣ್ಣಿನ ಕೃತಿರಚನೆ, ಮಾದರಿ ತಯಾರಿಕೆ.

☆ ಸಹಪಠ್ಯದಲ್ಲಿರುವ ಚಿತ್ರಗಳ ತದ್ರೂಪ ರಚನೆ.

☆ ಪ್ರಾಣಿ, ಪಕ್ಷಿಗಳ ಚಿತ್ರ ರಚನೆಯೊಂದಿಗೆ ಅವುಗಳ ದೇಹ ರಚನಾಭ್ಯಾಸ. ಅವುಗಳ ಗುಣ, ಬಣ್ಣ, ಬಗ್ಗೆ ವಿವರಿಸುವುದು.

☆ ಮಿಶ್ರಮಾಧ್ಯಮದಲ್ಲಿ ಕೃತಿರಚನೆ.

☆ ಅಕ್ಷರಲೇಖನ. ಅಳತೆ ಪ್ರಮಾಣ.

☆ ಕಥಾಚಿತ್ರ ಹೆಚ್ಚು ಉದಾಹರಣೆಯೊಂದಿಗೆ.

☆ ಮುಖವಾಡ ರಚನೆಸಕಲ ಸಾಮಗ್ರಿ ಜೋಡಣೆ. ತಯಾರಿ.

☆ ಮುದ್ರಣ ಕಲೆಯ ಮಾದರಿ ಚಿತ್ರಗಳು.

☆ ಕಂಪ್ಯೂಟರ್ ಮಾಧ್ಯಮದಲ್ಲಿ ಚಿತ್ರರಚನೆ (Paint).

☆ ಹಲವಾರು ಸರಳ ಮೌಖಿಕ ಪ್ರಶ್ನೆಗಳನ್ನು ಕೇಳುವುದು.

☆ ಕ್ರಿಯಾತ್ಮಕ ಚಿತ್ರಗಳನ್ನು ಬಿಡಿಸಲು ಮುಕ್ತ ಅವಕಾಶ.

☆ ನೆನಪಿನ ಆಟ.

☆ ವಸ್ತುಗಳ ಒಂದಕ್ಕೊಂದು ಆಕಾರ ಹೋಲಿಕೆ ಆಟದ ಪ್ರಶ್ನೆಗಳು.

☆ ವಿಷಯ, ಸಾಮಗ್ರಿ ಮತ್ತು ಸಿದ್ದತೆ ಅತಿ ಅವಶ್ಯಕ.

# ಪಠ್ಯವಸ್ತು – 6ನೆಯ ತರಗತಿ

## ದೊರಕುವ ಒಟ್ಟು ಅವಧಿಗಳು: ವಾರಕ್ಕೆ 5 ಅವಧಿಗಳಂತೆ ವರ್ಷಕ್ಕೆ 175 ಅವಧಿಗಳು

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ |
|---|---|---|---|
| **ಕಲ್ಪನಾಚಿತ್ರ:** | 20 | • ವಿದ್ಯಾರ್ಥಿಗಳಿಗೆ ಇಷ್ಟವೆನಿಸುವ ಆಕಾರ, ವಸ್ತುಗಳು, ಪ್ರಾಣಿ, ಪಕ್ಷಿಗಳು, ವಿಷಯಾಧಾರಿತ ಚಿತ್ರರಚನೆಗೆ ಮುಕ್ತ ಅವಕಾಶ ಕಲ್ಪಿಸುವುದು. ಬಣ್ಣದಿಂದ ಪೂರ್ತಿಗೊಳಿಸುವುದು. | ಹಸ್ತಕೌಶಲ್ಯ ಬೆಳೆಸುವುದು. ಏಕಾಗ್ರತೆಯಿಂದ ಮನಸ್ಸಿನ ಹತೋಟಿ ಸಾಧ್ಯ. |
| **ಚಿಂತನಾ ಚಿತ್ರ ರಚನೆ:** | 20 | • ವಿಷಯಗಳನ್ನು ವಿವರಿಸಿರಿ, ಅದಕ್ಕೆ ಸರಿ ಹೊಂದುವಂತಹ ಚಿತ್ರಗಳ ರಚನೆಗೆ ಅವಕಾಶ. | ಕನ್ನಡ ಪಾಠದಲ್ಲಿರುವ ಕಥೆಗೆ ಚಿತ್ರ ರಚಿಸಬಹುದು. |
| **(ವಿನ್ಯಾಸ ಚಿತ್ರರಚನೆ)** | 20 | • ಅಪೇಕ್ಷಿತ ಖಾಲಿ ಜಾಗಗಳಿಗೆ ಪ್ರಕೃತಿಯಲ್ಲಿರುವ ಹೂ, ಹಣ್ಣು ಎಲೆ, ಬಳ್ಳಿ, ಪ್ರಾಣಿ, ಪಕ್ಷಿಗಳನ್ನು ಅಲಂಕಾರಿಕವಾಗಿ ರಚಿಸಿ, ಸಂಯೋಜನೆಗೊಳಿಸಿ ಬಣ್ಣ ಲೇಪಿಸುವುದು. | ಅಲಂಕಾರಿಕ ಪ್ರಜ್ಞೆ ಬರುವುದು. ಪರಿಸರ. |
| **ಜ್ಯಾಮಿತಿ ನಕ್ಷಾ ಚಿತ್ರ ರಚನೆ:** | 10 | • ಕಲ್ಪನೆಗೆ ಅನ್ವೇಷಣೆಗೆ ಸಹಕಾರಿ.<br>• ಜ್ಯಾಮಿತಿ ಉಪಕರಣಗಳನ್ನು ಬಳಸುವ ಕ್ರಮ ತಿಳಿಸುವುದು.<br>• ವಿನ್ಯಾಸರಚನೆ, ನಿರ್ದಿಷ್ಟ ಆಕಾರಗಳ ಸಂಯೋಜನೆಯೊಂದಿಗೆ ಪ್ರಾಣಿ, ಪಕ್ಷಿಗಳ ರಚನೆ, ಡಿಸೈನ್‌ಗಳ ರಚನೆ, ತಂತ್ರಗಾರಿಕೆಯನ್ನು ತಿಳಿಸುವುದು. ಸಂಯೋಜನಾತ್ಮಕವಾಗಿ ಬಣ್ಣಲೇಪನ ಕ್ರಮವನ್ನು ತಿಳಿಸುವುದು. | ರೇಖಾಗಣಿತ ಪಾಠಕ್ಕೆ ಪೂರಕವಾಗಿದೆ |
| **ಜೇಡಿಮಣ್ಣಿನ ಕೃತಿ:** | 05 | • ಕ್ಲೇವ್ಯಾಕ್ಸ್, ಪ್ಲಾಸ್ಟರ್ ಆಫ್ ಪ್ಯಾರೀಸ್, ಜೇಡಿಮಣ್ಣು ಅನ್ವೇಷಣಾ ಗುಣ ಹೆಚ್ಚುವುದು. ಇತ್ಯಾದಿಗಳಿಂದ ಅಪೇಕ್ಷಿತ ಕೃತಿಗಳ ರಚನೆ. ಅರ್ಧ ಉಬ್ಬು ಶಿಲ್ಪಗಳ ರಚನೆ, ವಸ್ತುಗಳ ರಚನೆ. ಮಾದರಿಗಳ ತಯಾರಿಕೆ ಮಿಶ್ರವಸ್ತುಗಳನ್ನು ಉಪಯೋಗಿಸುವ ತಂತ್ರಗಾರಿಕೆಯನ್ನು ತಿಳಿಸುವುದು. | ಪರಿಸರ ವಿಜ್ಞಾನ ಪಠ್ಯಕ್ಕೆ ಸಂಬಂಧಿಸಿದ ಮಾದರಿಗಳು. |

ವಿಜ್ಞಾನ–ತಂತ್ರಜ್ಞಾನ ಚಿಂತನೆ (ಕಲೆ)ಗಳ ಸಮಾಗಮ ಚಿತ್ತಾರದ ಕಲಾಶಿಕ್ಷಣ

| 1 | 2 | 3 | 4 |
|---|---|---|---|
| **ಅನುಕರಣಾ ಚಿತ್ರರಚನೆ** | 20 | • ಸಹಪಠ್ಯದಲ್ಲಿ ಬರುವ ವಿಜ್ಞಾನ, ಜೀವಶಾಸ್ತ್ರ, ಭೂಗೋಳ, ಇತಿಹಾಸ ಕವಿಗಳು ಮುಂತಾದ ಚಿತ್ರಗಳನ್ನು ತದ್ರೂಪ ಮಾಡುವ ರೀತಿಯನ್ನು ತಿಳಿಸುವುದು. ಪ್ರಾಣಿ, ಪಕ್ಷಿ, ಮನುಷ್ಯ ಇನ್ನಿತರ ಅಪೇಕ್ಷಿತ ವಿಷಯಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ ಚಿತ್ರಿಸಲು ಹೇಳುವುದು, ಪ್ರಾಣಿಗಳೂ ತಮ್ಮ ಆಹಾರಕ್ಕಾಗಿ ದೇಹದ ಬದಲಾವಣೆಯನ್ನು ಹೇಗೆ ಬದಲಾಯಿಸಿಕೊಂಡಿವೆ ಎಂಬುದನ್ನು ಅಂಗರಚನಾ ಶಾಸ್ತ್ರದ ಮೂಲಕ ತಿಳಿಸುವುದು. ಭಿನ್ನತೆಯನ್ನು ವಿವರಿಸುವುದು. | ಪರಿಸರ ವಿಜ್ಞಾನ ಪಠ್ಯದ ಚಿತ್ರಗಳನ್ನು ಬಿಡಿಸಲು ಸಹಕಾರಿ. |
| **ಮಿಶ್ರಮಾಧ್ಯಮದಲ್ಲಿ ಕೃತಿರಚನೆ :** | 05 | • ಜೇಡಿಮಣ್ಣು ಇನ್ನಿತರ ತ್ಯಾಜ್ಯವಸ್ತುಗಳು, ಗರಿಗಳು, ಕಡ್ಡಿಗಳು, ಸರಿಗೆ, ಬಣ್ಣದ ವಸ್ತುಗಳು ಮುಂತಾದವುಗಳನ್ನು ಬಳಸಿ ಮಿಶ್ರಮಾಧ್ಯಮದ ಮೂಲಕ ಕೃತಿರಚನೆ. | ಮಿಶ್ರಮಾಧ್ಯಮದ ಪರಿಚಯ ವಿಜ್ಞಾನದ ಮಾದರಿ ತಯಾರಿಕೆಗೆ ಅನುಕೂಲ. |
| **ಅಕ್ಷರ ಲೇಖನ:** | 05 | • ಪ್ರಮಾಣಬದ್ಧ ಅಕ್ಷರಗಳನ್ನು ರಚಿಸುವ ವಿಧಾನವನ್ನು ತಿಳಿಸಬೇಕು.<br>• ಅಕ್ಷರಗಳ ವಿನ್ಯಾಸ, ಫಲಕಗಳ ತಯಾರಿ, ನುಡಿಮುತ್ತುಗಳ ರಚನೆ, ಮುಖಪುಟ ರಚನೆ, ಯೋಜನಾಕಾರ್ಯ ಕೆಲಸಗಳನ್ನು ಮಾಡಲು ಸುಲಭವಾಗುವಂತೆ ಚಾರ್ಟ್‌ಗಳ ತಯಾರಿಕೆಯನ್ನು ತಿಳಿಸುವುದು. | ಕನ್ನಡ ಪಾಠಕ್ಕೆ ಸಮನ್ವಯಗೊಳಿಸುವುದು. |
| **ವೀಕ್ಷಣಾ ಚಿತ್ರ** | 15 | • ಸರಳ ಘನಾಕಾರದ ವಸ್ತುಗಳನ್ನು ನೋಡಿ ಚಿತ್ರಿಸುವುದು | |
| **ಚಿಂತನಾ ಚಿತ್ರರಚನೆ: (ಕಥಾಚಿತ್ರ ರಚನೆ)** | 20 | • ಪಾಠದಲ್ಲಿ ಬರುವ ಕಥೆಗಳು, ಇತಿಹಾಸದ ನೆನಪುಗಳು, ಕವನಗಳಿಗೆ, ಪದ್ಯಗಳಿಗೆ ಸರಿಹೊಂದುವಂತಹ ಚಿತ್ರಗಳ ರಚನೆ ಅಮೂರ್ತರೂಪ, ಅಪೇಕ್ಷಿತ ರೂಪಗಳನ್ನು ಚಿತ್ರಿಸಲು ತಿಳಿಸುವುದು. | ಕನ್ನಡ ಪಾಠಕ್ಕೆ ಪೂರಕವಾಗಿದೆ |

| 1 | 2 | 3 | 4 |
|---|---|---|---|
| **ಕಂಪ್ಯೂಟರ್ ಮೂಲಕ ಚಿತ್ರರಚನೆ:** | 05 | • ಕಂಪ್ಯೂಟರ್ ಬಳಕೆಯನ್ನು ತಿಳಿಸುವುದು. ಚಿತ್ರ ಬಿಡಿಸುವುದು. ಬಣ್ಣಗಳ ಲೇಪನ, ತಂತ್ರಗಾರಿಕೆಯನ್ನು ಕಲಿಸುವುದು.<br>• ಕ್ಯಾಲಿಗ್ರಫಿ, ಫೋಟೋಶಾಪ್ ಮುಂತಾದವುಗಳ ಪ್ರಾರಂಭಿಕ ಜ್ಞಾನವನ್ನು ನೀಡುವುದು ಕಂಪ್ಯೂಟರ್‌ನಲ್ಲಿ ಅಪೇಕ್ಷಿತ, ಮೂರು ಆಯಾಮಗಳ ಚಿತ್ರರಚನೆಯ ಪ್ರಾರಂಭಿಕ ಅಭ್ಯಾಸವನ್ನು ಮಾಡಿಸುವುದು. ಹೊಸ ವಿಜ್ಞಾನ ಯುಗದಲ್ಲಿ ಗಣಕಯಂತ್ರದ ಬಗ್ಗೆ ಅರಿವು ಬರುವುದು. | ವಿಜ್ಞಾನ ಪಾಠಕ್ಕೆ ಸಮನ್ವಯ ಗೊಳಿಸುವುದು |
| **ರಂಗೋಲಿಚಿತ್ರ:** | 10 | • ಚುಕ್ಕಿಗಳಿಂದ, ರೇಖೆಗಳಿಂದ ವಿನ್ಯಾಸ ರಚನೆ ಸೂಕ್ತ ಆಕರ್ಷಕ ಬಣ್ಣಗಳ ಆಯ್ಕೆ ಲೇಪನಗಳನ್ನು ತಿಳಿಸುವುದು. | ಕನ್ನಡ ಪಾಠ ಹಬ್ಬಗಳು. ಅಲಂಕಾರಿಗ ಗುಣ / ಹಸ್ತ ಕೌಶಲ್ಯ ವೃದ್ಧಿಯಾಗುವುದು. |
| **ಕೊಲ್ಯಾಜ್ ಕೃತಿ:** | 10 | • ಮುದ್ರಿತ ಅನುಪಯುಕ್ತ ಬಣ್ಣದ ಕಾಗದಗಳಿಂದ ಹಾಗೂ ವಿವಿಧ ಮಿಶ್ರ ಮಾಧ್ಯಮಗಳಿಂದ ಕೃತಿ ರಚನೆ. | ಅಭಿವ್ಯಕ್ತಿಗೆ ಪೂರಕ |
| **ಕಾಗದ ಕಲೆ:** | 10 | • ಕಾಗದವನ್ನು ಮಡಚುವುದು, ಕತ್ತರಿಸುವುದರ ಮೂಲಕ ಪ್ರಾಣಿ, ಪಕ್ಷಿಗಳ ರಚನೆ, ಮುಖವಾಡ ರಚನೆ, ಪತಾಕೆ, ಹೂಗುಚ್ಛ ಮುಂತಾದ ಕೃತಿಗಳ ರಚನೆ. | ಹಸ್ತ ಕೌಶಲ್ಯದ ವೃದ್ಧಿಗೆ ಸಹಕಾರಿ |
| **ಒಟ್ಟು ಅವಧಿಗಳು** | 175 | | |

ಅನುಭವಗಳ ಪ್ರತ್ಯಕ್ಷೀಕರಣವೇ ಕಲೆ ಎಂದೂ, ಬುದ್ಧಿವಂತಿಕೆಯೇ ಕಲೆ ಎಂದೂ ಹೇಳಬಹುದು.

# 7ನೆಯ ತರಗತಿ : ವಿಷಯಗಳ ಆಯ್ಕೆ

☆ ಸ್ಮರಣಚಿತ್ರ ರಚನೆ

☆ ಕಲ್ಪನಾಚಿತ್ರ ರಚನೆ

☆ ವೀಕ್ಷಣಾಚಿತ್ರ ರಚನೆ

☆ ತದ್ರೂಪ ಚಿತ್ರ ರಚನೆ

☆ ನಕ್ಷಾ ಚಿತ್ರ

☆ ಸರಳಗ್ರೈ ಚಿತ್ರ ಲೇಖನ

☆ ಅಕ್ಷರಲೇಖನ

☆ ಜ್ಯಾಮಿತಿ ನಕ್ಷಾಚಿತ್ರ ರಚನೆ

☆ ಕಾಗದ ಕಲೆ (ಮುಖವಾಡ ರಚನೆ)

☆ ಕೊಲ್ಯಾಜ್ ರಚನೆ

☆ ಜೇಡಿಮಣ್ಣಿನ ಕಲೆ (ಮಾದರಿ ರಚನೆ)

☆ ಕಥಾಚಿತ್ರ

☆ ಕಂಪ್ಯೂಟರ್‌ನಲ್ಲಿ ಚಿತ್ರ ರಚನೆ

☆ ಪ್ರದರ್ಶನ, ವಿಮರ್ಶೆ, ಸಂಗ್ರಹಣೆ

☆ ಕಲಾ ಇತಿಹಾಸ.

# ಪಠ್ಯವಸ್ತು – 7ನೆಯ ತರಗತಿ

## ವಾರಕ್ಕೆ 5 ಅವಧಿಗಳಂತೆ ವರ್ಷಕ್ಕೆ 175 ಅವಧಿಗಳು

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ |
|---|---|---|---|
| **ಸ್ಮರಣಚಿತ್ರ:** | 30 | • ಮಕ್ಕಳು ತಮ್ಮ ಪೂರ್ವಜ್ಞಾನಕ್ಕೆ ಸ್ಮರಿಸಿ, ಪ್ರಾಣಿಗಳು, ಪಕ್ಷಿಗಳು, ದಿನನಿತ್ಯ ಕಾಣುವ ವಿವಿಧ ಚಟುವಟಿಕೆಗಳು, ವಿಷಯಗಳು ಮುಂತಾದವುಗಳನ್ನು ಪುನರ್ಮನನ ಮಾಡಿ ಅಪೇಕ್ಷಿತ ಚಿತ್ರಗಳನ್ನು ಮಾಡಿ ಬಣ್ಣದಿಂದ ಪೂರ್ಣಗೊಳಿಸಲು ತಿಳಿಸುವುದು.<br>• ನೆನಪಿಗೆ ಚಿಕಿತ್ಸೆ ಸಿಗುವುದರಿಂದ ಇತರೆ ಪಾಠಗಳು ಸಹ ಪುನರ್ಮನನಕ್ಕೆ ಸುಲಭವಾಗಿ ಸಿಗುತ್ತದೆ.<br>ಪ್ರಾಣಿ, ಪಕ್ಷಿಗಳು, ಮನುಷ್ಯನ ಅಂಗರಚನಾಭ್ಯಾಸವನ್ನು ತಿಳಿಸಿಕೊಡುವುದು. | ಕನ್ನಡ, ವಿಜ್ಞಾನ ಪಾಠಗಳಿಗೆ ಸಮನ್ವಯಗೊಳಿಸುವುದು. |
| **ಕಲ್ಪನಾಚಿತ್ರ:** | 20 | • ವಿವಿಧ ಪ್ರಾಣಿ, ಪಕ್ಷಿಗಳ ಅಂಗಾಂಶಗಳ ಚಿತ್ರಗಳತುಂಡುಗಳನ್ನು ನೀಡಿ ಸೂಕ್ತವಾಗುವಂತೆ ಪುನಃ ಜೋಡಿಸುವುದನ್ನು ತಿಳಿಸುವುದು.<br>• ಅಮೂರ್ತ ಶೈಲಿಯ ಚಿತ್ರರಚನೆ, ವಿಷಯಗಳನ್ನು ನೀಡಿ ಮಿಶ್ರ ಮಾಧ್ಯಮ ದಲ್ಲಿ ಚಿತ್ರ ಕೃತಿ ರಚನೆಗೆ ತಿಳಿಸುವುದು<br>• ಪ್ರಕೃತಿಯಲ್ಲಿ ಮೋಡಗಳಲ್ಲಿ, ತಾದ್ಯಾತ್ಮಕತೆಯ ಅಕಾರಗಳನ್ನು ಅನ್ವೇಷಣೆ ಮಾಡಿ ಹೋಲಿಸಿ ನೋಡುವುದು, ವೀಕ್ಷಣೆ, ಗ್ರಹಣೆ, ಚಿಂತನೆಗೆ ಮುಕ್ತ ಅವಕಾಶ ನೀಡುವುದು.<br>• ಅನ್ವೇಷಣಾ ಸಾಮರ್ಥ್ಯಹೆಚ್ಚುವುದು. | ವಿಜ್ಞಾನಪಾಠಕ್ಕೆ ಸಮನ್ವಯಗೊಳಿಸುವುದು |
| **ವೀಕ್ಷಣಾಚಿತ್ರ:** | 20 | • ಯಾವುದೇ ವಸ್ತುಗಳು, ಹೂ, ಹಣ್ಣು ಇತ್ಯಾದಿಗಳನ್ನು ಮುಂದಿಟ್ಟು ಅವುಗಳ ಆಕಾರ, ಪ್ರಮಾಣ, ಆಯಾಮಗಳು ಬರುವಂತೆ ಚಿತ್ರಿಸುವುದು, ಬೆಳಕು ನೆರಳುಗಳು ಕಾಣುವಂತೆ ಚಿತ್ರಿಸುವುದು.<br>• ಹೂ, ಹಣ್ಣು, ಎಲೆಗಳ ಚಿತ್ರವನ್ನು ವೀಕ್ಷಿಸಿ ಬಣ್ಣಗಳ ಏರಿಳಿತವನ್ನು ಮಾಡಿ ನೈಜತೆ ಕಾಣುವಂತೆ ಚಿತ್ರಿಸಲು ತಿಳಿಸುವುದು. | ವಿಜ್ಞಾನ, ಕನ್ನಡ ಹಾಗೂ ಇತರೆ ಭಾಷಾ ಪಾಠಗಳಿಗೆ ಸಮನ್ವಯಗೊಳಿಸುವುದು. |

| 1 | 2 | 3 | 4 |
|---|---|---|---|
| | | • ಎತ್ತರ, ಮೇಲೆ, ಕೆಳಗೆ, ಮುಂದೆ, ಹಿಂದೆ, ಆಯಾಮಗಳ ಕಲ್ಪನೆ ಅದೇ ರೀತಿ ಚಿತ್ರಗಳ ರಚನೆ, ಸಂಯೋಜನೆ ಯಥಾ ದೃಷ್ಟಿಯ ಪರಿಕಲ್ಪನೆಗೆ ಅವಕಾಶ ನೀಡುವುದು.<br>• ಇವುಗಳನ್ನು ಶಿಕ್ಷಕರು ವಿಶೇಷವಾಗಿ ಒತ್ತುಕೊಟ್ಟು ಚಿತ್ರಿಸುವುದನ್ನು ತಿಳಿಸುವುದು.<br>• ವೀಕ್ಷಣಾ ಸಾಮರ್ಥ್ಯ, ತೀಕ್ಷ್ಣ ದೃಷ್ಠಿ, ಬೆಳವಣಿಗೆ ಮುಂತಾದವುಗಳು. | |
| **ಅನುಕರಣಾಚಿತ್ರ: (ತದ್ರೂಪ ಚಿತ್ರರಚನೆ)** | **30** | • ಪಾಠದಲ್ಲಿ ಬರುವ ಚಿತ್ರಗಳನ್ನು ಅನುಕರಣೆ ಮಾಡಿ ಚಿತ್ರಿಸಲು ಸುಲಭ ಉಪಾಯಗಳನ್ನು ಹೇಳಿಕೊಡುವುದು.<br>• ವಿಜ್ಞಾನದ ಚಿತ್ರಗಳನ್ನು ದೊಡ್ಡದು ಮಾಡಿ ಬಣ್ಣ ಹಾಕುವುದು.<br>• ತದ್ರೂಪ ಚಿತ್ರರಚಿಸುವಾಗ, ಅಂಕಣಗಳನ್ನು (Scale) ಹಾಕಿ. ದೊಡ್ಡಚಿತ್ರವನ್ನು ಸಣ್ಣದು, ಹಾಗೆಯೇ ಸಣ್ಣ ಚಿತ್ರಗಳನ್ನು ದೊಡ್ಡದಾಗಿಯೂ ಮಾಡುವ ವಿಧಾನವನ್ನು ತಿಳಿಸಬೇಕು.<br>• ವಸ್ತುಗಳ ಆಕಾರ, ಪ್ರಮಾಣ, ತೀಕ್ಷ್ಣನೋಟ ಮುಂತಾದ ಗುಣಗಳ ಬೆಳವಣಿಗೆಗೆ ಸಹಕಾರಿ. | ವಿಜ್ಞಾನದ ಮಾದರಿಗಳಿಗೆ ಸಹಕಾರಿ.<br><br>ಭಾಷಾ ಪಾಠಗಳಿಗೆ ಸಮನ್ವಯಗೊಳಿಸುವುದು |
| **ಪ್ರಕೃತಿ ಚಿತ್ರರಚನೆ:** | **10** | ಸುಂದರವಾದ ಪ್ರಕೃತಿಯ ಭಾಗಗಳನ್ನು ದೃಶ್ಯರೂಪವಾಗಿ ಚಿತ್ರಿಸುವುದು. ಮರಳುಗಳು, ನದಿ, ಬೆಟ್ಟ, ಗುಡ್ಡ, ಸೂರ್ಯೋದಯ, ಹಳ್ಳಿಯ ಜೀವನ, ಜಲದೃಶ್ಯ ಮುಂತಾದವುಗಳನ್ನು ಸೂಕ್ತ ಜಾಗದಲ್ಲಿ, ಕಾಗದದಲ್ಲಿ ಚಿತ್ರಿಸಿ ಪೂರ್ಣಪ್ರಮಾಣದ ಬಗ್ಗೆ ಲೇಪಿಸುವ ಕ್ರಮವನ್ನು ತಿಳಿಸುವುದು.<br>ಚೌಕಟ್ಟು ಹಾಕಲು ಅನುಕೂಲವಾಗುವಂತೆ ರಚಿಸುವುದು. ಪ್ರದರ್ಶನ, ವಿಮರ್ಶೆ, ತಂತ್ರಗಾರಿಕೆ, ಸಂಯೋಜನೆ, ವೀಕ್ಷಣೆಗೆ ಅನುಕೂಲ ಮಾಡುವುದು. | ಭಾಷಾ ಪಾಠ, ವಿಜ್ಞಾನ ಪಾಠ ಸಮನ್ವಯಗೊಳಿಸುವುದು. |

| 1 | 2 | 3 | 4 |
|---|---|---|---|
| **ಚಿಂತನಾ ರಚನೆ: (ಸುಳುವಿನ ಚಿತ್ರ)** | 10 | • ಏಕಾಗ್ರತೆಯಿಂದ ಪಾಠ ಕಲಿಕೆಯ ಬೌದ್ಧಿಕ ಬೆಳವಣಿಗೆ, ಸೌಂದರ್ಯ ಪ್ರಜ್ಞೆ ಸಹಕಾರಿ. ವಿನ್ಯಾಸಗಳ ರಚನೆ, ಪ್ರಕೃತಿಯಲ್ಲಿರುವ ಹೂ, ಹಣ್ಣು, ಎಲೆ, ಬಳ್ಳಿ, ಸುಂದರವಾದ ಪ್ರಾಣಿ, ಪಕ್ಷಿಗಳನ್ನು ಅಲಂಕಾರಿಕವಾಗಿ ಪರಿವರ್ತಿಸಿ ಖಾಲಿಜಾಗಗಳಿಗೆ ಅಥವಾ ಯಾವುದೇ ವಸ್ತುಗಳ ಮೇಲೆ ಚಿತ್ರಿಸಿ ಬಣ್ಣ ಹಾಕುವುದನ್ನು ತಿಳಿಸುವುದು.<br>• ಪಟ್ಟಿ, ಸಾಲುರಚನೆ, ಮೂಲೆ ರಚನೆ, ಕೇಂದ್ರ ರಚನೆ ಮುಂತಾದವುಗಳ ಪ್ರಾರಂಭಿಕ ಮೂಲತತ್ವವನ್ನು ನೀಡಿ ಚಿತ್ರಿಸುವುದು. ಸುಲಲಿತ ರೇಖೆ ರಚನೆ, ಅದಲು ಬದಲು. | |
| **ಸರಳ ಗೈ ಚಿತ್ರರಚನೆ:** | 05 | • ಕಿರಣ ವಿಸ್ತಾರ, ಪುನರಾವರ್ತನೆ, ಅಂಶಾಚ್ಛಾದನ (Over lapping) ಮುಂತಾದವುಗಳು.<br>• ಹಸ್ತ ಕೌಶಲ ಸೂಕ್ಷ್ಮತೆ, ವಿನ್ಯಾಸಗಳ ಬಗ್ಗೆ ಅರಿವು ಬರುವುದು. ಸುಲಲಿತವಾಗಿ ರೇಖೆಗಳನ್ನು ವೃತ್ತಗಳನ್ನು ಸುರುಳಿಗಳನ್ನು ರಚಿಸಲು ತಿಳಿಸುವುದು.<br>• ರೇಖೆಗಳನ್ನು ಬಲದಿಂದ ಎಡಕ್ಕೂ, ಎಡದಿಂದ ಬಲಕ್ಕೂ ಮೇಲಿನಿಂದ ಕೆಳಕ್ಕೂ, ಕೆಳಗಿನಿಂದ ಮೇಲಕ್ಕೂ ಸರಳವಾಗಿ ಚಿತ್ರಿಸುವ ಕ್ರಮವನ್ನು ತಿಳಿಸುವುದು.<br>• ಮಧ್ಯೆರೇಖೆಯಿಂದ ಎಡ, ಬಲಭಾಗದಲ್ಲಿ ಒಂದೇ ರೀತಿಯ ವಿನ್ಯಾಸಗಳಿಗೆ ಸೂಕ್ತ ಬಣ್ಣಗಳನ್ನು ಲೇಪಿಸಲು ತಿಳಿಸುವುದು. | |
| **ಅಕ್ಷರ ಲೇಖನ:** | 05 | • ಅಚ್ಚುಕಟ್ಟುತನ, ಸುಂದರ ರೇಖೆಗಳ ಜೋಡಣೆ ಮುಂತಾದವುಗಳು ಉತ್ತಮವಾಗಿ ದುಂಡಗೆ ಅಕ್ಷರಗಳನ್ನು ಬರೆಯಲು ತಿಳಿಸುವುದು.<br>• ಪ್ರಮಾಣಬದ್ಧ ಅಕ್ಷರ ಲೇಖನ, ಬಣ್ಣ ಲೇಪನ, ವಿವಿಧ ಮಾದರಿಯ ಅಕ್ಷರಗಳನ್ನು ರಚಿಸಲು ತಿಳಿಸುವುದು. | ಭಾಷಾ ಪಾಠದ ಅಕ್ಷರಗಳು, ಭಾಷೆಗಳ ಮೇಲೆ ಹಿಡಿತ ಸಾಧನೆ. |

| 1 | 2 | 3 | 4 |
|---|---|---|---|
| | | • ಶುಭಾಶಯ ಪತ್ರ ರಚನೆ, ನುಡಿಮುತ್ತುಗಳನ್ನು ರಚಿಸಿ, ತೂಗು ಹಾಕುವಂತೆ ತಿಳಿಸುವುದು, ಸೂಚನಾ ಫಲಕಗಳ ರಚನೆ.<br>• ಪುಸ್ತಕಗಳ ಮುಖ ಚಿತ್ರರಚನೆ, ಇತ್ಯಾದಿಗಳನ್ನು ರಚಿಸಲು ತಿಳಿಸುವುದು. | |
| **ಜ್ಯಾಮಿತಿ ನಕ್ಷೆ ರಚನೆ:** | 05 | • ಜ್ಯಾಮಿತಿ ಉಪಕರಣಗಳ ಸಹಾಯದಿಂದ ವಿನ್ಯಾಸಗಳ ರಚನೆ. ಸಂಯೋಜನೆಗೊಳಿಸಿದ ಚಿತ್ರಕ್ಕೆ ಬಣ್ಣ ಲೇಪನ ತಿಳಿಸುವುದು. | ರೇಖಾಗಣಿತದ ಪಾಠಕ್ಕೆ ಪೂರಕ |
| **ಕಾಗದ ಕಲೆ:** | 10 | • ದಪ್ಪವಾದ ಕಾಗದಗಳನ್ನು ಮಡಚುವುದು, ಕತ್ತರಿಸುವುದು, ಅಂಟಿಸುವುದು. ಮುಂತಾದ ಕ್ರಿಯೆಗಳಿಂದ ಪ್ರಾಣಿ, ಪಕ್ಷಿ ಮನುಷ್ಯನ ಮುಖವಾಡ ರಚಿಸುವುದುನ್ನು ತಿಳಿಸಬೇಕು. ಕಾಗದದ ಗೊಜ್ಜು (ಪಲ್ಪ್) ಮೆದು ಸೋಪ್, ಮುಂತಾದವುಗಳನ್ನು ಬಳಸಿ, ವಿಜ್ಞಾನ ಪಾಠದಲ್ಲಿಯ ಹೃದಯ, ಕಿಡ್ನಿ, ಎದೆಗೂಡು, ಕಣ್ಣು ಮುಂತಾದ ಮಾದರಿ ರಚನೆ ಮಾಡುವುದು.<br>• ವಿವಿಧ ಮಣಿಗಳಿಂದ ಆಭರಣಗಳನ್ನು ಕಿರೀಟ, ಆಯುಧಗಳು ಮುಂತಾದವುಗಳನ್ನು ರಚಿಸಲು ತಿಳಿಸುವುದು. ಹೂಗುಚ್ಛ, ಆಕಾಶಬುಟ್ಟಿ, ಬೀಸಣಿಗೆ ಮುಂತಾದವುಗಳನ್ನು ರಚಿಸಲು ತಿಳಿಸುವುದು. ಅಪೇಕ್ಷಿತ ಜಾಗಗಳಿಗೆ ಬಣ್ಣಗಳ ಲೇಪನ ಮಾಡಬಹುದು.<br>• ಮಣಿಗಳು, ಗರಿಗಳು ಮುಂತಾದವುಗಳನ್ನು ಬಳಸಬಹುದು.<br>• ಕನ್ನಡ ವಿಷಯದ ಯೋಜನಾ ಕಾರ್ಯಗಳಿಗೆ ಸರಿಹೊಂದುವಂತಹ ಮಾದರಿಗಳ ರಚನೆಯನ್ನು ತಿಳಿಸುವುದು. | ವಿಜ್ಞಾನ ಪಾಠದ ಮಾದರಿಗಳ ತಯಾರಿ–ಕೆಗೆ ಸಹಕಾರಿ.<br>ವಿಜ್ಞಾನ ಪಾಠಕ್ಕೆ ಸಮನ್ವಯ ಗೊಳಿಸುವುದು.<br><br>ಕನ್ನಡ, ಇತರ ಭಾಷಾ ಪಾಠಗಳಿಗೆ ಸಮನ್ವಯಗೊಳಿಸುವುದು. |
| **ಕೊಲ್ಯಾಜ್ ರಚನೆ: (ಕತ್ತರಿಸುವುದು ಅಂಟಿಸುವುದು)** | 05 | • ತ್ಯಾಜ್ಯವಸ್ತುಗಳು, ಮುದ್ರಿತ ಬಣ್ಣದ ಕಾಗದಗಳು, ಜೇಡಿಮಣ್ಣು, ಥರ್ಮೋಕೋಮ್, ಮರದ ತೊಗಟೆ, ಬೀಜ, ಬೀಜಕೋಶ, ಮಣಿಗಳು, ಬಳೆಚೂರು ಮುಂತಾದವುಗಳನ್ನು ಉಪಯೋಗಿಸಿಕೊಂಡು ಕೃತಿ ರಚನೆಗೆ ತಿಳಿಸಿಕೊಡುವುದು. | |

| 1 | 2 | 3 | 4 |
|---|---|---|---|
| **ಜೇಡಿಮಣ್ಣಿನ ಕಲೆ:** | 05 | • ಜೇಡಿಮಣ್ಣು, ವ್ಯಾಕ್ಸ್, ಪ್ಲಾಸ್ಟರ್ ಆಫ್ ಪ್ಯಾರಿಸ್, ಥರ್ಮೋಫೋಮ್ ಮುಂತಾದ ಮಿಶ್ರ ಮಾಧ್ಯಮಗಳನ್ನು ಬಳಸಿ ಅಪೇಕ್ಷಿತ ವಸ್ತುಗಳನ್ನು ರಚಿಸುವುದು, ಮಾದರಿಗಳನ್ನು ರಚಿಸುವುದನ್ನು ತಿಳಿಸುವುದು. | ವಿಜ್ಞಾನದ ಮಾದರಿಗಳ ರಚನೆಗೆ ಸಹಕಾರಿ. |
| **ಕಥಾಚಿತ್ರ: (ಚಿಂತನಾ ಚಿತ್ರ ರಚನೆ)** | | • ಕವನ, ಕಥೆ, ನಾಟಕಗಳ ಸನ್ನಿವೇಶಗಳನ್ನು ಗ್ರಹಿಸಿ ಸೂಕ್ತ ಚಿತ್ರಗಳನ್ನು ರಚಿಸಲು ತಿಳಿಸುವುದು.<br>• ಚಿತ್ರಗಳನ್ನು ತೋರಿಸಿ ಕಥೆಗಳನ್ನು ಹೇಳಲು ತಿಳಿಸುವುದು. | ಭಾಷೆಗಳ ಪಾಠಕ್ಕೆ ಪೂರಕವಾಗಿದೆ.<br>ವಿಜ್ಞಾನ ಪಾಠಕ್ಕೆ ಸಮನ್ವಯಗೊಳಿಸುವುದು |
| **ಕಂಪ್ಯೂಟರ್ ಚಿತ್ರರಚನೆ:** | | • ಕಂಪ್ಯೂಟರ್‌ನೊಂದಿಗೆ ಮಾನಸಿಕ ಹೊಂದಾಣಿಕೆಯೊಂದಿಗೆ ಚಿತ್ರಿಸುವುದನ್ನು ತಿಳಿಸುವುದು ರೇಖಾ ಚಿತ್ರಗಳ ಅಭ್ಯಾಸ ಪೇಂಟ್‌ನಲ್ಲಿ (Paint)<br>• ಕಂಪ್ಯೂಟರ್‌ನಲ್ಲಿ ಚಿತ್ರಕಲೆಗೆ ಇರುವ ಹಲವಾರು ವಿಷಯಗಳನ್ನು ತಿಳಿಯಲು ಹೇಳಿಕೊಡುವುದು. | |
| **ರಸಗ್ರಹಣ, ರಸಸ್ವಾದನ:** | | • ಕಂಪ್ಯೂಟರ್ ತಂತ್ರಜ್ಞಾನ ಅರಿಯುವರು. | |
| **ತಾತ್ವಿಕ ವಿಷಯ:** | | • ಕಲಾಇತಿಹಾಸ, "ಚಿತ್ರಕಲಾ ಶಿಕ್ಷಣ"ದ ಪ್ರತಿವಿಷಯಗಳನ್ನು ಪೀಠಿಕೆ ಕ್ರಮದಲ್ಲಿ ತಿಳಿಸುವುದೇ ಕಲಾ ಇತಿಹಾಸ, ಹಾಗೂ ಅಲ್ಪಸ್ವಲ್ಪ ಸ್ಥಳೀಯ ಕಲಾವಿದರ ಹಾಗೂ ಸ್ಥಳೀಯ ದೇವಾಲಯ, ಶಿಲ್ಪ, ಹಬ್ಬಗಳ ಪರಿಚಯ ಮಾಡುವುದು. ಆದಿಮಾನವಕಲೆ, ಗುಹಾಂತರ ಕಲೆ, ಶಿಲ್ಪವೈಭವ ಸ್ಥಳಗಳು ಮತ್ತು ತಮ್ಮ ಸ್ಥಳದಲ್ಲಿರುವ ವಿಶೇಷ ಪ್ರದೇಶಗಳ ಬಗ್ಗೆ ಐತಿಹಾಸಿಕ ಸ್ಥಳಗಳ ಬಗ್ಗೆ ಭೇಟಿನೀಡುವುದು, ಅಲ್ಲಿರುವ ಶಿಲ್ಪಕಲೆ, ವಾಸ್ತುಕಲೆ, ಚಿತ್ರಕಲೆಗಳ ಬಗ್ಗೆ ಅರಿಯುವುದು. ವಿದ್ಯಾರ್ಥಿಗಳ ಕೃತಿಗಳ ಪ್ರದರ್ಶನ, | ಇತಿಹಾಸ ಪಾಠಕ್ಕೆ ಪೂರಕ |
| **ಪ್ರದರ್ಶನ, ವಿಮರ್ಶೆ, ಸಂಗ್ರಹಣೆ:** | | • ವಿಮರ್ಶೆ ಹಾಗೂ ಸಂಗ್ರಹಣಾ ಗುಣ ಬೆಳೆಸುವುದು. | |

# ಗುರಿಗಳು 8 ರಿಂದ 10ನೇ ತರಗತಿ

## 1. ಪ್ರಾಯೋಗಿಕ ವಿಭಾಗ

- ☆ ಚಿತ್ರಕಲಾ ಉಪಕರಣಗಳ ಬಗ್ಗೆ ವಿವರಣೆ ಹಾಗೂ ಉಪಯೋಗಿಸುವ ವಿಧಾನ, ಚಿತ್ರಕಲಾ ಶಿಕ್ಷಣದ ಬಗ್ಗೆ ಅಭಿರುಚಿ ಹೆಚ್ಚಿಸುವುದು.
- ☆ ಸೃಜನಾತ್ಮಕ ಅಭಿವ್ಯಕ್ತಿ ಚಿಂತನೆಗೆ ಮುಕ್ತ ಅವಕಾಶ ಕಲ್ಪಿಸುವುದು.
- ☆ ಗ್ರಹಿಕೆ ಹಾಗೂ ವೀಕ್ಷಣಾ ಶಕ್ತಿ ಹೆಚ್ಚಿಸಿಕೊಳ್ಳುವುದು ತನ್ಮೂಲಕ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಷ್ಟ್ರೀಯತೆ ಬಿಂಬಿಸುವ ಗುಣಧರ್ಮಗಳನ್ನು ಬೆಳೆಸುವುದು.
- ☆ ಅನುಕರಣಾ (ತದ್ರೂಪ)ಚಿತ್ರರಚನೆ, ವೀಕ್ಷಣಾ ಚಿತ್ರ, ಸ್ಮರಣ ಚಿತ್ರ, ಕಲ್ಪನಾ ಚಿತ್ರದ ಬಗ್ಗೆ ವಿವರಣೆ.
- ☆ ವಿವಿಧ ಮಾಧ್ಯಮಗಳ ಮೂಲಕ ಕ್ರಿಯಾತ್ಮಕ ಅಭಿವ್ಯಕ್ತಿ ಅನುಭವಗಳನ್ನು ಪಡೆಯಲು ಅವಕಾಶ ಕಲ್ಪಿಸುವುದು.
- ☆ ಬಣ್ಣಗಳ ಬಗ್ಗೆ ಭಾವನೆ, ಅರ್ಥವ್ಯಾಪ್ತಿ ಹಾಗೂ ಲೇಪನ, ಸಂಯೋಜನೆಯ ಬಗ್ಗೆ ವಿಶೇಷ ಅಧ್ಯಯನಕ್ಕೆ ಅವಕಾಶ ನೀಡುವುದು.
- ☆ ಪ್ರಾದೇಶಿಕ ಕಲೆಗಳು, ಜಾನಪದ ಕಲೆಗಳ ಬಗ್ಗೆ ಅರಿವು, ಅಧ್ಯಯನ ಮಾಡುವುದು.
- ☆ ಅಭಿರುಚಿ, ಸಂಗ್ರಹಣೆ, ಮೆಚ್ಚುಗೆ, ವಿಮರ್ಶೆಗೆ ಅವಕಾಶ ಕಲ್ಪಿಸುವುದು.
- ☆ ಹಸ್ತಕೌಶಲ್ಯವನ್ನು ಹೆಚ್ಚಿಸಲು ಅವಕಾಶ ನಿಡುವುದು.
- ☆ ಏಕಾಗ್ರತೆ, ತಾಳ್ಮೆ, ಶುಚಿತ್ವ, ಸ್ಪರ್ಧಾತ್ಮಕ ಬೆಳವಣಿಗೆಗೆ ಸಹಕಾರಿಯಾಗುವುದು.
- ☆ ಇತರೆ ಪಠ್ಯ ವಿಷಯಗಳೊಂದಿಗೆ ಚಿತ್ರಕಲೆಯ ಸಂಬಂಧದ ಸಾಮ್ಯತೆ ಗುರುತಿಸುವುದು, ಸುಲಭ ರಚನಾ ವಿಧಾನ ತಿಳಿಸುವುದು.
- ☆ ಕಂಪ್ಯೂಟರ್ ತಂತ್ರಜ್ಞಾನದ ಮುಖಾಂತರ ಚಿತ್ರಕಲೆಯಲ್ಲಿ ಹೊಸತನ ಕಂಡುಕೊಳ್ಳುವುದು. ಛಾಯಾಚಿತ್ರದ ಕಲೆ: ಛಾಯಾಚಿತ್ರದ ಪರಿಕಲ್ಪನೆ ಮೂಡಿಸುವುದು.

## 2. ತಾತ್ವಿಕ ವಿಭಾಗ:

(1) ಕಲಾ ಇತಿಹಾಸ (ಸಂಕ್ಷಿಪ್ತವಾಗಿ) (2) ಕಲಾವಿದರ ಪರಿಚಯ (3) ಕಲಾರಚನೆಯ ಪ್ರಕಾರ, ತಂತ್ರಗಳು. (4) ಸ್ಥಳಿಯ ದೇವಾಲಯ/ ಸ್ಮಾರಕ/ ವಾಸ್ತುಶಿಲ್ಪ, ಶಿಲ್ಪಕಲೆಗಳು ಮುಂತಾದವುಗಳನ್ನು ತಿಳಿಸಿ ಹೇಳುವುದು.

2. ಕಲಾರಸಸ್ವಾದನ ಹಾಗೂ ಕಲಾರಸಗ್ರಹಣದ ಅರಿವು ಮೂಡಿಸುವುದು.

# ವಿಷಯಗಳು

## ತರಗತಿ 8

### 1. ಪ್ರಾಯೋಗಿಕ ವಿಭಾಗ:

☆ ಚಿತ್ರಕಲಾ ಶಿಕ್ಷಣದ ಪೂರ್ವಮಾಹಿತಿ, ಪುನರ್‌ಮನನ ಹಾಗೂ ಸಂಕ್ಷಿಪ್ತ ಪರಿಚಯ
☆ ಸ್ಮರಣ ಚಿತ್ರರಚನೆ (ಚಿಂತನಾ ಚಿತ್ರ)
☆ ವಸ್ತು ಚಿತ್ರರಚನೆ (ವೀಕ್ಷಣಾ ಚಿತ್ರ)
☆ ಪ್ರಕೃತಿ ಚಿತ್ರರಚನೆ (ವೀಕ್ಷಣಾ ಚಿತ್ರ)
☆ ವರ್ಣ ಹಾಗು ವರ್ಣ ಸಂಯೋಜನೆ
☆ ಭೂಮಿತಿ ರಚನೆ (ರೇಖಾ ಗಣಿತ)
☆ ಭೂಮಿತಿ ನಕ್ಷಾ ಚಿತ್ರರಚನೆ (ಚಿಂತನ ಚಿತ್ರ)
☆ ಸರಳ ಗೈ ಚಿತ್ರರಚನೆ (ಚಿಂತನ ಚಿತ್ರ)
☆ ಅಕ್ಷರ ಚಿತ್ರಲೇಖನ (ಚಿಂತನ ಚಿತ್ರ)
☆ ನಕ್ಷಾ ಚಿತ್ರರಚನೆ (ಸ್ವಾಭಾವಿಕ, ಅಲಂಕಾರಿಕ) (ಚಿಂತನ ಚಿತ್ರ)
☆ ಕಲ್ಪನಾ ಚಿತ್ರ ರಚನೆ
☆ ರಂಗೋಲಿ ಚಿತ್ರರಚನೆ
☆ ಚಿತ್ರಕಲಾ ಇತಿಹಾಸ (ತಾತ್ವಿಕ) ಲಿಖಿತ.
☆ ಕಂಪ್ಯೂಟರ್ ಮೂಲಕ ತಾಂತ್ರಿಕವಾಗಿ ಚಿತ್ರ ರಚನೆಗೆ ಅವಕಾಶ ಕಲ್ಪಿಸುವುದು, ಛಾಯಾಚಿತ್ರಕಲೆ.
☆ ಪಠ್ಯವಿಷಯ ಸಂಬಂಧಿತ ಉಪಯೋಗಿ ಚಿತ್ರರಚನೆ
☆ ಕಾಗದ ಕಲೆ (ಕೊಲ್ಯಾಜ್)
☆ ಜೇಡಿಮಣ್ಣಿನ ಆಕೃತಿ ತಯಾರಿ.
☆ ಪ್ರದರ್ಶನ, ವಿಮರ್ಶೆ, ಸ್ಪರ್ಧೆ, ಸಂಗ್ರಹಣೆ.

### 2. ತಾತ್ವಿಕ ವಿಭಾಗ:

(1) ಕಲಾ ಇತಿಹಾಸ (ಸಂಕ್ಷಿಪ್ತವಾಗಿ) (2) ಕಲಾವಿದರ ಪರಿಚಯ (3) ಕಲಾರಚನೆಯ ಪ್ರಕಾರ, ತಂತ್ರಗಳು. (4) ಸ್ಥಳಿಯ ದೇವಾಲಯ, ಶಿಲ್ಪಕಲೆಗಳು ಮುಂತಾದವುಗಳನ್ನು ತಿಳಿಸಿ ಹೇಳುವುದು. (5) ಕಲಾರಸಸ್ವಾದನ ಮತ್ತು ರಸಗ್ರಹಣದ ವಿವರಗಳನ್ನು ನೀಡುವುದು.

# ಪಠ್ಯವಸ್ತು – 8ನೆಯ ತರಗತಿ

## ದೊರಕುವ ಒಟ್ಟು ಅವಧಿಗಳು: ವಾರಕ್ಕೆ 3 ಅವಧಿಗಳಂತೆ ವರ್ಷಕ್ಕೆ 105 ಅವಧಿಗಳು

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ |
|---|---|---|---|
| **ಪೂರ್ವಜ್ಞಾನ: ಚಿತ್ರಕಲಾ ಶಿಕ್ಷಣದಲ್ಲಿ ಗಳಿಸಿರುವ ಪೂರ್ವಮಾಹಿತಿ, ಪುನರ್‌ಮನನ ಹಾಗೂ ಸಂಕ್ಷಿಪ್ತ ಪರಿಚಯ.** | 02 | • ಚಿತ್ರಕಲಾ ವಿಷಯದ ಬಗ್ಗೆ ಇರಬಹುದಾದ ಜ್ಞಾನ, ಆಸಕ್ತಿ ಹಾಗೂ ಕೌಶಲ್ಯಗಳ ಬಗ್ಗೆ ಅವಲೋಕನ ಮತ್ತು ಪುನರ್ ಮನನ.<br>• ಚಿತ್ರಕಲಾ ಶಿಕ್ಷಣದ ವಿವಿಧ ವಿಷಯಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡುವುದು.<br>• ಪ್ರಕೃತಿ ನಿರ್ಮಿತ ಹಾಗೂ ಮಾನವ ನಿರ್ಮಿತ ವಸ್ತುಗಳ ಚಿತ್ರ ರಚನೆ. | |
| **ಸ್ಮರಣ ಚಿತ್ರರಚನೆ: ಚಿಂತನ ಚಿತ್ರ:** | 10 | • ಪ್ರಾಣಿ, ಪಕ್ಷಿಗಳ ಹಾಗೂ ಮಾನವನ ವಿವಿಧ ಭಂಗಿಗಳ ರಚನೆ.<br>• ನಿತ್ಯ ಕಾಣುವ ವಿವಿಧ ಸಂದರ್ಭ, ಘಟನೆಗಳ ಸರಳವಾದ ಚಿತ್ರಣ. | ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಮಾನವ ದೇಹರಚನೆ, ಪ್ರಾಣಿ, ಪಕ್ಷಿಗಳ ದೇಹ ಅಂಗಾಂಗಗಳ ರಚನೆ ಬಗ್ಗೆ ತಿಳಿಯ ಬಹುದಾಗಿದೆ. |
| **ವಸ್ತು ಚಿತ್ರರಚನೆ: (Object Drawing) ವೀಕ್ಷಣಾ ಚಿತ್ರ:** | 10 | • ನಿತ್ಯ ಬಳಸಬಹುದಾದ ವಸ್ತುಗಳ ಚಿತ್ರಣ ಬಾಹ್ಯ ರೇಖೆಯೊಂದಿಗೆ ಪೂರ್ಣಗೊಳಿಸುವುದು. ವಿವಿಧ ಪಾತಳಿಗಳಲ್ಲಿ ಯಥಾದೃಷ್ಟಿಯಲ್ಲಿ ಚಿತ್ರಣ.<br>• ವಸ್ತುಗಳು ನೇರ, ಮೇಲೆ–ಕೆಳಗೆ, ಅಕ್ಕ–ಪಕ್ಕ ಇರುವಂತೆ ವಿವಿಧ ಆಯಾಮಗಳಲ್ಲಿ ಚಿತ್ರಣ. (ಘನ, ಗೋಲ, ಶಂಕು, ಸಿಲಿಂಡರ್ ಇತ್ಯಾದಿ ಆಕಾರದ ವಸ್ತುಗಳು) | ಗಣಿತ ವಿಷಯ ಸಂಬಂಧಿಸಿದ ಘನವಸ್ತುಗಳ ಪರಿಚಯ |
| **ಪ್ರಕೃತಿ ರಚನೆ: ವೀಕ್ಷಣಾ ಚಿತ್ರ:** | 10 | • ಪ್ರಕೃತಿಯಲ್ಲಿರುವ ಹೂ, ಎಲೆ, ಹಣ್ಣು, ಕಾಯಿ, ಟೊಂಗೆ, ಗಿಡ, ಪಕ್ಷಿ, ಮನುಷ್ಯಾಕೃತಿ ಇತ್ಯಾದಿಗಳ ಚಿತ್ರರಚನೆ.<br>• ನಿಸರ್ಗದಲ್ಲಿನ ವಿವಿಧ ಕೀಟ ಹಾಗೂ ಪಕ್ಷಿಗಳ ಚಿತ್ರ ರಚನೆ.<br>• ಭೂದೃಶ್ಯ, ಜಲದೃಶ್ಯಗಳಲ್ಲಿ ಕಾಣಬಹುದಾದವುಗಳ ಚಿತ್ರಣ (ಸೂರ್ಯೋದಯ, ಸೂರ್ಯಾಸ್ತ, ಹೂದೋಟ, ಶಾಲೆ–ಪರಿಸರ ಇತ್ಯಾದಿ) | ಜೀವಶಾಸ್ತ್ರ/ವಿಜ್ಞಾನ ವಿಷಯ ಸಂಬಂಧಿಸಿದಂತೆ ಪರಿಸರದ ಪರಿಚಯ |

| 1 | 2 | 3 | 4 |
| --- | --- | --- | --- |
| | | ಪೆನ್ಸಿಲ್ಲಿನಿಂದ ಛಾಯಾ ವಿಧಾನದ ಚಿತ್ರಣ ವಿಧಾನ ತಿಳಿಸುವುದು. | |
| **ವರ್ಣ ಹಾಗೂ ವರ್ಣ ಸಂಯೋಜನೆ:** | 05 | • ವಿವಿಧ ರೀತಿಯ ಬಣ್ಣಗಳ ಪರಿಚಯ (ಪೆನ್ಸಿಲ್ ಬಣ್ಣ, ವ್ಯಾಕ್ಸ್‌ಬಣ್ಣ, ನೀರುಬಣ್ಣ, ತೈಲ ಬಣ್ಣ, ಪ್ರಕೃತಿಜನ್ಯ ವರ್ಣಗಳು)<br>• ಮೂಲವರ್ಣಗಳು– ಇವುಗಳ ಗುಣಧರ್ಮಗಳ ಬಗ್ಗೆ ತಿಳುವಳಿಕೆ.<br>• ಬಣ್ಣ ಲೇಪನದಲ್ಲಿ ವಿವಿಧ ಕ್ರಮಗಳ ಬಗ್ಗೆ ತಿಳುವಳಿಕೆ<br>• ಸ್ಪ್ರೇ ವಾಷ್ (ಕಾಗದ ಒದ್ದೆ ತಂತ್ರ) ಮೆಥೆಡ್ ಇತ್ಯಾದಿ. | |
| **ಭೂಮಿತಿ ಚಿತ್ರರಚನೆ ಚಿಂತನಾ ಚಿತ್ರ:** | 05 | • ಭೂಮಿತಿ ಉಪಕರಣಗಳ ಸಹಾಯದಿಂದ ವಿವಿಧ ಆಕೃತಿಗಳ ರಚನೆ.<br>• ರೇಖೆ, ಕೋನವೃತ್ತ, ಅರ್ಧವೃತ್ತ, ತ್ರಿಭುಜಾಕೃತಿಗಳ ರಚನೆ ಹಾಗೂ<br>• ಸಂಯೋಜನೆಯೊಂದಿಗೆ ಕೃತಿ ರಚಿಸುವುದು. | ರೇಖಾಗಣಿತ ವಿಷಯ ಸಂಬಂಧಿಸಿದಂತೆ ಆಕೃತಿಗಳ ರಚನೆ–ಬಹುಭುಜಾಕೃತಿ ಪರಿಚಯ |
| **ಭೂಮಿತಿ ನಕ್ಷಾ ಚಿತ್ರ ರಚನೆ ಚಿಂತನಾ ಚಿತ್ರಣ:** | 05 | • ಭೂಮಿತಿ ಉಪಕರಣಗಳ ಸಹಾಯದಿಂದ ಭೂಮಿತಿ ಆಕಾರಗಳ ಚಿತ್ರ ಸಂಯೋಜನೆ.<br>• ರೇಖೆ, ವೃತ್ತ, ತ್ರಿಭುಜ, ಚೌಕ, ಆಯತ ಇತ್ಯಾದಿ ಭುಜಾಕೃತಿಗಳು ಒಂದ–ಕ್ಕೊಂದರ ಪರಸ್ಪರ ಸಂಯೋಜನೆಯೊಂದಿಗೆ–ನಕ್ಷಾ ಮಾದರಿಯಲ್ಲಿ ಚಿತ್ರ ರಚನೆ.<br>• ವಿವಿಧ ನಕ್ಷಾ ಪ್ರಕಾರಗಳ ಬಗ್ಗೆ ತಿಳುವಳಿಕೆ ನೀಡುವುದು ಚಿತ್ರಕ್ಕೆ ಬಣ್ಣಗಳ ಆಯ್ಕೆ–ಬಣ್ಣ ಲೇಪನ ಬಗ್ಗೆ ತಿಳಿಸುವುದು. | |
| **ಸರಳಗೈ ಚಿತ್ರರಚನೆ ಚಿಂತನಾ ಚಿತ್ರಣ:** | 05 | • ಸುಲಲಿತ ರೇಖೆಗಳ ಚಲನೆಯೊಂದಿಗೆ ಚಿತ್ರಿಸುವ ವಿಧಾನ ಬಗ್ಗೆ ತಿಳಿಸುವುದು. ಪ್ರಕೃತಿ ದತ್ತ ಎಲೆ, ಹೂ, ಹಣ್ಣು, ಕಾಯಿ, ಬಳ್ಳಿ, ಪ್ರಾಣಿ, ಪಕ್ಷಿಗಳನ್ನು ಆಧರಿಸಿ ರೇಖಾ ವಿನ್ಯಾಸ ಸಮತ್ವ (symmetrical) ರೂಪದಲ್ಲಿ ರೇಖೆಗಳನ್ನು ಎಳೆದು ಚಿತ್ರಿಸುವುದು. | ವಿಜ್ಞಾನದ ಜೀವಶಾಸ್ತ್ರ, ಸಸ್ಯಶಾಸ್ತ್ರ ಸಂಬಂಧಿಸಿದ ನಿಸರ್ಗ ವಸ್ತುಗಳ ಪರಿಚಯ. |

| 1 | 2 | 3 | 4 |
|---|---|---|---|
| | | • ಯಾವುದೇ ಸಣ್ಣ ಅಥವಾ ದೊಡ್ಡ ಚಿತ್ರವನ್ನು ಅಪೇಕ್ಷಿತ ಸ್ಥಳಕ್ಕೆ ಸರಿಹೊಂದುವಂತೆ ಚಿತ್ರಿಸುವ ಸುಲಭ ವಿಧಾನ ತಿಳಿಸುವುದು. (Scale Drawing) ರಚಿಸಿದ ವಿನ್ಯಾಸಗಳಿಗೆ ಸರಿಹೊಂದುವಂತೆ ಬಣ್ಣ ಸಂಯೋಜನೆ ಹಾಗೂ ಬಣ್ಣ ಲೇಪನಾ ವಿಧಾನವನ್ನು ತಿಳಿಸುವುದು. | |
| **ಅಕ್ಷರ ಚಿತ್ರಲೇಖನ** | **05** | • ವಿವಿಧ ಭಾಷೆಯ ಅಕ್ಷರಗಳನ್ನು ಪ್ರಮಾಣ ಬದ್ಧವಾಗಿ ಚಿತ್ರಿಸುವುದು<br>• ರಚನಾವಿಧಾನ ಹಾಗೂ ಸಂಯೋಜನಾ ವಿಧಾನವನ್ನು ತಿಳಿಸುವುದು.<br>• ಪದ, ನುಡಿಮುತ್ತು, ಗಾದೆಗಳನ್ನು ಬರೆಸುವುದು. ಪುಸ್ತಕಗಳ ಮುಖಚಿತ್ರ ರಚನೆ, ಬಣ್ಣಗಳ ಲೇಪನ, ಅಕ್ಷರಗಳ ರಚನಾ ವಿಧಾನಗಳ ಬಗ್ಗೆ ತಿಳಿಸುವುದು. | ಭಾಷಾ ವಿಷಯ ಸಂಬಂಧಿಸಿದಂತೆ ಉತ್ತಮ ಲಿಪಿ–ಬರವಣಿಗೆಗೆ ಅನುಕೂಲ. ಹಸ್ತಾಕ್ಷರದ ಸ್ಪಷ್ಟತೆ, ನಿಖರತೆಯಿಂದ ಇತರ ಪಾಠಗಳಿಗೆ ನೇರ ಸಂಬಂಧ ಕಲ್ಪಿಸುವುದು |
| **ನಕ್ಷಾಚಿತ್ರ ರಚನೆ ಚಿಂತನಾ ಚಿತ್ರ;** | **05** | • ನಿಸರ್ಗದ ವಿವಿಧ ಆಕಾರಗಳನ್ನು ವಿನ್ಯಾಸ ರೂಪದಲ್ಲಿ ಅಳವಡಿಸಿಕೊಂಡು ಚಿತ್ರಿಸುವುದು. ಯಾವುದೇ ಖಾಲಿ ಸ್ಥಳಾವಕಾಶದಲ್ಲಿ ಬಟ್ಟೆ ಮಡಕೆ, ಬೀಸಣಿಕೆ, ಕಂಬ, ಬಾಗಿಲ ಅಕ್ಕ–ಪಕ್ಕದ ಚೌಕಟ್ಟು ಹೂದಾನಿ, ತಟ್ಟೆ ಇತ್ಯಾದಿಗಳ ಮೇಲೆ ಅಂದ ಕಾಣುವಂತೆ ಪ್ರಕೃತಿಯ ವಸ್ತುಗಳಾದ ಹೂ, ಎಲೆ, ಹಣ್ಣು, ತರಕಾರಿ, ಪ್ರಾಣಿ–ಪಕ್ಷಿ ಇತರೆ ಆಕಾರಗಳನ್ನು ಅಲಂಕಾರಿಕವಾಗಿ ಪರಿವರ್ತಿಸಿ ರಚಿಸಲು ತಿಳಿಸುವುದು. ಪಟ್ಟಿ ಸಾಲು ರಚನೆ, ಮೂಲೆ ರಚನೆ ಕೇಂದ್ರ ರಚನೆ ಹೀಗೆ ನಕ್ಷೆಯ ಮೂಲ ತತ್ವವನ್ನು ವಿವರಿಸಿ ಇದರಂತೆ ಚಿತ್ರಿಸುವ ವಿಧಾನ ತಿಳಿಸುವುದು. | ವಿಜ್ಞಾನ ಪಾಠದಲ್ಲಿಯ ಜೀವ ಹಾಗೂ ಸಸ್ಯಶಾಸ್ತ್ರ ಸಂಬಂಧಿಸಿದ ವಸ್ತುಗಳ ರಚನಾ ವಿಧಾನ ಬಗೆಗಳ ಬಗ್ಗೆ ತಿಳುವಳಿಕೆ. ಅಲಂಕಾರಿಕ ಕಲ್ಪನೆಗೆ ಅವಕಾಶ |
| **ಕಲ್ಪನಾ ಚಿತ್ರರಚನೆ:** | **10** | • ರಾಮಾಯಣ, ಮಹಾಭಾರತ, ಪಂಚತಂತ್ರ ಮತ್ತು ಪುರಾಣ ಕಥೆಗಳಿಗೆ ಸಂಬಂಧಿಸಿದಂತೆ ಪಾತ್ರ–ವ್ಯಕ್ತಿಗಳ ಚಿತ್ರ ರಚಿಸುವುದು.<br>• ಕಥೆಯಲ್ಲಿ ಬರುವ ವಿವಿಧ ಸಂದರ್ಭ ಸನ್ನಿವೇಶಗಳನ್ನು ಚಿತ್ರಿಸುವುದು.<br>• (ವೀಕ್ಷಣೆ, ಗ್ರಹಣೆ, ಚಿಂತನೆ, ಅಭಿವ್ಯಕ್ತಿಗೆ ಮುಕ್ತ ಅವಕಾಶ ಹಾಗೂ ಸ್ವಾತಂತ್ರ್ಯ ನೀಡುವುದು.) | ಭಾಷಾ ಪಾಠ ಚಟುವಟಿಕೆಗಳನ್ನು ಬರುವ ಕಥಾ ವಸ್ತುವಿಗೆ ಉಪಯೋಗವಾಗುವುದು. |
| **ರಂಗೋಲಿ– ಚಿತ್ರರಚನೆ:** | **02** | • ಚುಕ್ಕಿಗಳ ಸಹಾಯದಿಂದ ವಿವಿಧ ರೀತಿಯ ನಕ್ಷಾ ಮಾದರಿ ಚಿತ್ರ ರಚನೆ. ಕಿರಣ ವಿಸ್ತಾರ, ಪಟ್ಟಿ ಸಾಲು, ಮೂಲೆ ಚಿತ್ರ ಮುಂತಾದವುಗಳ ರಚನೆಗೆ ಅವಕಾಶ. ಸಮತ್ವ ಕಾಣಿಸುವ ಬಗೆ–ಬಗೆಯ ನಕ್ಷಾ ಮಾದರಿ ಸಂಯೋಜನಾ ಚಿತ್ರ ರಚನೆ. | |

| 1 | 2 | 3 | 4 |
|---|---|---|---|
| **ಚಿತ್ರಕಲಾ ಇತಿಹಾಸ ಮತ್ತು ಕಲಾ ರಸಸ್ವಾದ, ರಸಗ್ರಹಣ:** | 04 | • ಚಿತ್ರಕಲೆ ಬೆಳೆದು ಬಂದ ದಾರಿ ಬಗ್ಗೆ ವಿವರಣೆ, ಸ್ಥಳೀಯ ಐತಿಹಾಸಿಕ ಸ್ಥಳಗಳ ಬಗ್ಗೆ ಅಲ್ಲಿನ ಕಲೆಗಳ ಬಗ್ಗೆ ತಿಳಿಸುವುದು. ಇತಿಹಾಸ ಗುರುತಿಸುವಿಕೆಯಲ್ಲಿ ಚಿತ್ರಕಲೆ, ಶಿಲ್ಪಕಲೆ, ವಾಸ್ತುಕಲೆ, ಮುಂತಾದವುಗಳ ಮಹತ್ವದ ಬಗ್ಗೆ ತಿಳಿಸಿ ಹೇಳುವುದು.<br>• ನಾಡಿನ ಖ್ಯಾತ ಕಲಾವಿದರುಗಳ ಬಗ್ಗೆ ತಿಳಿಸಿ ಹೇಳುವುದು. ಕಲೆಗಳಲ್ಲಿಯ ವಿಶೇಷ ಗುಣಗಳನ್ನು ಮೆಚ್ಚುವುದು, ಹೊಗಳುವುದು, ವಿದ್ಯಾರ್ಥಿಗಳಲ್ಲಿ ರಸಗ್ರಹಣವನ್ನು ಹೆಚ್ಚಿಸುವುದು. | ಇತಿಹಾಸ ಸಂಬಂಧ ಸ್ಥಳಗಳ ಪರಿಚಯ, ಇತಿಹಾಸದ ಕಾಲಗಳು, ಇತಿಹಾಸ ಬೆಳೆದು ಬಂದ ಬಗ್ಗೆ ತಿಳುವಳಿಕೆಗೆ ಸಹಕಾರಿ. |
| **ಕಂಪ್ಯೂಟರ್ ಚಿತ್ರರಚನೆ:** | 03 | • ಕಂಪ್ಯೂಟರ್‌ನೊಂದಿಗೆ ಲಭ್ಯವಿರುವ ತಾಂತ್ರಿಕ ಸಹಯೋಗದೊಂದಿಗೆ ಚಿತ್ರಕೃತಿ ರಚನೆ, ಅಕ್ಷರ ಲೇಖನ ಬಣ್ಣಗಳ ಸಂಯೋಜನೆ ಇತ್ಯಾದಿಗಳನ್ನು ತಿಳಿಸುವುದು. ಕಂಪ್ಯೂಟರ್‌ನಲ್ಲಿ ಚೌಕ, ವೃತ್ತ, ಆಯತ, ತ್ರಿಭುಜ ಹೀಗೆ ರೇಖಾ ಗಣಿತದ ಆಕೃತಿಗಳನ್ನು ಬಳಸಿ ಸಂಯೋಜನೆ ಮಾಡಿ ಚಿತ್ರ ರಚನೆ ಮಾಡುವುದು. | |
| **ಅನುಕರಣಾ ರಚನೆ: (ಪಠ್ಯವಿಷಯ ಸಂಬಂಧಿತ ಉಪಯೋಗಿ ಚಿತ್ರರಚನೆ)** | 05 | • ಗಣಿತ ವಿಜ್ಞಾನ, ಸಮಾಜ ವಿಜ್ಞಾನ ಹಾಗೂ ಭಾಷೆಗಳಿಗೆ ಸಂಬಂಧಿಸಿದ ಪಠ್ಯ ವಿಷಯಕ್ಕೆ ಒಪ್ಪುವ ಹಾಗೂ ಅನುಕೂಲವಾಗುವ ಚಿತ್ರಗಳ ರಚನೆ. | ಎಲ್ಲಾ ಪಠ್ಯವಿಷಯಗಳಿಗೂ ಸಂಬಂಧಿಸಿದ್ದಾಗಿದೆ. |
| **ಕಾಗದಕಲೆ: (ಕರಕುಶಲಕಲೆ) ಮುದ್ರಣ ಕಲೆ:**<br><br>**ಛಾಯಾ ಚಿತ್ರಕಲೆ:** | 10 | • ಮಡಚುವುದು, ಕತ್ತರಿಸುವುದು, ಅಂಟಿಸುವುದು ಹೀಗೆ ಮುಂತಾದ ಕ್ರಿಯೆಗಳಿಂದ ಕಾಗದವನ್ನು ಉಪಯೋಗಿಸಿ ಕೌಶಲದಿಂದ ವಿವಿಧ ಆಕೃತಿಗಳ ಮಾದರಿಗಳನ್ನು ತಯಾರಿಸುವುದು. ವಸ್ತುಮಾದರಿ, ಪ್ರಾಣಿ–ಪಕ್ಷಿಗಳ ಮಾದರಿ, ಹೂ–ಹಾರ, ಆಭರಣಗಳ ಮಾದರಿ, ಇತ್ಯಾದಿಗಳನ್ನು ತಯಾರಿಸುವುದು.<br>• ಛಾಯಾ ಚಿತ್ರದ ಪರಿಕಲ್ಪನೆ. ಛಾಯಾಚಿತ್ರಕಲೆಯ ಇತಿಹಾಸ ತಿಳಿಸುವುದು. ವಿಷಯಕ್ಕೆ ಸಂಬಂಧಪಟ್ಟಂತೆ ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವುದು. | |

| 1 | 2 | 3 | 4 |
|---|---|---|---|
| ವಿ.ಸೂ: ಕಾಗದ ಕಲೆ: ವಿಷಯ ಆಯ್ಕೆಯಲ್ಲಿ ತರಗತಿವಾರು ಸ್ವಲ್ಪ ಕಠಿಣತೆಯತ್ತ ಸಾಗಬೇಕು ಮತ್ತು ವೈವಿಧ್ಯಮಯವಾಗಿರಬೇಕು. ತರಗತಿಯು 40 ನಿಮಿಷಕ್ಕೆ ಸೀಮಿತವಾಗಿರಬೇಕು. ಎಲ್ಲಾ ವಿದ್ಯಾರ್ಥಿಗಳು ಕಾರ್ಯದಲ್ಲಿ ತೊಡಗುವಂತಾಗಬೇಕು. ಆದಷ್ಟು ಖರ್ಚಿಲ್ಲದೆ ಚಟುವಟಿಕೆಗಳು ನಡೆಯುವಂತಿರಬೇಕು. | | | |
| **ಜೇಡಿಮಣ್ಣು:** | 05 | • ಸ್ಥಳೀಯವಾಗಿ ಸಿಗಬಹುದಾದ ಜೇಡಿ ಮಣ್ಣಿನಿಂದ ವಿವಿಧ ವಸ್ತು, ಪ್ರಾಕೃತಿಕ ವಸ್ತು, ಪ್ರಾಣಿ, ಪಕ್ಷಿ, ಮನುಷ್ಯ ಇತರೆ ಆಕಾರಗಳ ಮಾದರಿ ತಯಾರಿಸುವುದು. | ಗಣಿತ, ವಿಜ್ಞಾನ, ಸಮಾಜವಿಜ್ಞಾನ ಹಾಗೂ ಆರೋಗ್ಯ ಶಿಕ್ಷಣ ಅಲ್ಲದೆ ಎಲ್ಲಾ ಭಾಷೆಗಳ ಪಠ್ಯದಲ್ಲಿ ಬರುವ ವಿಷಯಗಳಿಗೆ ತಕ್ಕಂತೆ ಮಾದರಿ ಕೃತಿ ತಯಾರಿಸಲು ಸಹಕಾರಿಯಾಗಿದೆ. |
| **ಪ್ರದರ್ಶನ, ವಿಮರ್ಶೆ, ಸಂಗ್ರಹಣೆ:** | 04 | • ಚಿತ್ರಾಕೃತಿಗಳ ಪ್ರದರ್ಶನ (ಶಾಲಾ ಹಂತದಲ್ಲಿ) ಚಿತ್ರಗಳ ವಿಮರ್ಶೆ ಹಾಗೂ ಗುಣಗ್ರಹಣ ಮಾಡುವುದು ಕೃತಿಗಳನ್ನು ಸಂಗ್ರಹಿಸಿಡುವುದು ಮುಂದಿನ ವಿದ್ಯಾರ್ಥಿಗಳ ಮಾಹಿತಿಗಾಗಿ | |
| **ಒಟ್ಟು ಅವಧಿಗಳು** | 105 | | |

## ಲಿಥೋಗ್ರಫಿ:

## ಮುದ್ರಣಕಲೆ:

ಲಿಥೋಗ್ರಾಫಿಯನ್ನು ಕಂಡುಹಿಡಿದ ಅಲೊಯ್ಸ್ ಸೆನೆಫಿಲ್ಡರನು (Alois Senefilder) 1771ರಲ್ಲಿ ಬೊಹೆಮಿಯಾ (Bohemia)ದೇಶಕ್ಕೆ ರಾಜಧಾನಿಯಾದ ಪ್ರೆಗೊ (Pragure) ಎಂಬ ಪಟ್ಟಣದಲ್ಲಿ ಜನಿಸಿದನು, ಇವನ ತಂದೆ ಮ್ಯುನಿಚ್ ಪಟ್ಟಣದ ರಾಯಲ್ ಥಿಯೇಟರ್ ಎಂಬ ನಾಟಕ ಶಾಲೆಯಲ್ಲಿ ಒಬ್ಬ ನಟನಾಗಿದ್ದನು.

ಸೆನೆಫಿಲ್ಡರನಿಗೆ ಮೊದಲಿನಿಂದಲೂ ಸಂಗೀತ, ನಾಟಕ ಸಂಬಂಧವಾದ ಸಾಹಿತ್ಯಗಳನ್ನು ಜೀವನೋಪಾಯಕ್ಕಾಗಿ ಉಪಯೋಗಿಸಲು ಮುದ್ರಣಕ್ಕಾಗಿ ತಾಮ್ರದ ತಗಡಿನಲ್ಲಿ ಕೆತ್ತಿ ಮಾರಾಟ ಮಾಡುವುದಕ್ಕಾಗಿ ಪ್ರಯತ್ನಿಸಿದನು. ಇದು ಬಹಳ ದುಬಾರಿಯಾದ್ದರಿಂದ ಪ್ರಯೋಜನಕ್ಕೆ ಬರಲಿಲ್ಲ. ಇದೇ ಕಾಲದಲ್ಲಿ ಮುದ್ರಣಕ್ಕಾಗಿ ಬಳಸುತ್ತಿದ್ದ ಕರಿಮಸಿಯನ್ನು ಅರಿಯಲು ಉಪಯೋಗಿಸುತ್ತಿದ್ದ ಕೆಲ್‌ಹೇಮ್ (Kelhem) ಒಂದು ಹಲಗೆಯ ಉಪಯೋಗಿಸಿದನು, ಈ ಹಲಗೆ ಬಹುಬೇಗ ಕೆತ್ತನೆಯಾಗುತ್ತಿದ್ದವು. ಇಂತಹ ಪ್ರಯತ್ನದಿಂದ ಹಲವಾರು ಪ್ರಯೋಗಗಳನ್ನು ಮಾಡಿ, ಮುದ್ರಣ ಕಾರ್ಯದಲ್ಲಿ ಯಶಸ್ಸು ಕಂಡನು.

## ವಿಷಯಗಳು – 9ನೆಯ ತರಗತಿ

### 1. ಪ್ರಾಯೋಗಿಕ ವಿಭಾಗ

☆ ಸ್ಮರಣ ಚಿತ್ರ ರಚನೆ
☆ ವಸ್ತು ಚಿತ್ರ (ವೀಕ್ಷಣಾ ಚಿತ್ರ ರಚನೆ)
☆ ಅನುಕರಣ ಚಿತ್ರ
☆ ಪ್ರಕೃತಿ ಚಿತ್ರ ರಚನೆ (ವೀಕ್ಷಣಾ ಚಿತ್ರ)
☆ ನಕ್ಷಾ ಚಿತ್ರ ರಚನೆ (ಚಿಂತನಾ ಚಿತ್ರ)
☆ ಅಕ್ಷರ ಲೇಖನ (ಚಿಂತನಾ ಚಿತ್ರ)
☆ ಕಥಾ ಚಿತ್ರ ರಚನೆ (ಕಲ್ಪನಾ ಚಿತ್ರ)
☆ ರಂಗೋಲಿ – ಚಿತ್ರ
☆ ನೈಸರ್ಗಿಕ ಬಣ್ಣ ತಯಾರಿ ಹಾಗೂ ಬಳಕೆ.
☆ ಪಠ್ಯವಿಷಯಗಳಿಗೆ ಸಂಬಂಧಿಸಿದಂತೆ ಚಿತ್ರ ರಚನೆ (ತದ್ರೂಪ ಚಿತ್ರ ರಚನೆ)
☆ ಕೊಲ್ಯಾಜ್ ಮತ್ತು ಕಾಗದದ (ಮೊಸಾಯಿಕ್) ಕಲೆ.
☆ ವಿನೋದ ಚಿತ್ರ ರಚನೆ (ವ್ಯಂಗ ಚಿತ್ರ ರಚನೆ)
☆ ಮಣ್ಣಿನ ಮಾದರಿ ತಯಾರಿ
☆ ಕಂಪ್ಯೂಟರ್ ಚಿತ್ರ ರಚನೆ / ಛಾಯಾಚಿತ್ರಕಲೆ.
☆ ಕಾಗದ ಕಲೆ.
☆ ಮುದ್ರಣಕಲೆ
☆ ಚಿತ್ರಕಲಾ ಸ್ಪರ್ಧೆ ಪ್ರದರ್ಶನ, ವಿಮರ್ಶೆ ಹಾಗೂ ಸಂಗ್ರಹಣೆ.
☆ ಟೋಪೋಗ್ರಾಫಿ ಕಲೆ.

### 2. ತಾತ್ವಿಕ ವಿಷಯ:

(1) ಕಲಾ ಇತಿಹಾಸ (ಸಂಕ್ಷಿಪ್ತವಾಗಿ) ಕರ್ನಾಟಕದ / ಭಾರತೀಯ ಕಲೆ. (2) ಕಲಾವಿದರ ಪರಿಚಯ (3) ಕಲಾರಚನೆಯ ಪ್ರಕಾರ, ತಂತ್ರಗಳು (4) ಸ್ಥಳಿಯ ಸ್ಮಾರಕಗಳು/ವಾಸ್ತು ಶಿಲ್ಪ, ಶಿಲ್ಪಕಲೆಗಳು ಮುಂತಾದವುಗಳನ್ನು ತಿಳಿಸಿ ಹೇಳುವುದು. (5) ಕಲಾರಸಸ್ವಾದನ ಮತ್ತು ರಸಗ್ರಹಣದ ವಿವರಗಳನ್ನು ನೀಡುವುದು.

# ಪಠ್ಯವಸ್ತು – 9ನೆಯ ತರಗತಿ

## ವಾರಕ್ಕೆ 3 ಅವಧಿಗಳಂತೆ ವರ್ಷಕ್ಕೆ 105 ಅವಧಿಗಳು

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ |
|---|---|---|---|
| **ಸ್ಮರಣ ಚಿತ್ರರಚನೆ: (ಸ್ಮೃತಿ ಚಿತ್ರ)** | 10 | • ವಿವಿಧ ಬಗೆಯ ಪ್ರಾಣಿ, ಪಕ್ಷಿ ಹಾಗೂ ಮಾನವನ ವಿವಿಧ ಭಂಗಿಗಳ ಚಿತ್ರ ಚಿತ್ರಿಸುವುದು. ನಿತ್ಯ ಜೀವನದಲ್ಲಿನ ಸಾಂದರ್ಭಿಕ ಹಾಗೂ ವಿವಿಧ ಘಟನಾವಳಿಗಳ ಚಿತ್ರ ರಚಿಸುವುದು. ಧೈರ್ಯ, ಸಾಹಸ, ಪ್ರಾಮಾಣಿಕತೆ, ರಾಷ್ಟ್ರೀಯತೆ ಇತ್ಯಾದಿ ಬಿಂಬಿಸುವ ಚಿತ್ರಗಳ ರಚನೆ, ವಿವಿಧ ವೇಶ, ಭೂಷಿತ ವ್ಯಕ್ತಿ ಚಿತ್ರ ರಚಿಸುವುದು. | ಭಾಷಾ ವಿಷಯ ಪಠ್ಯದಲ್ಲಿ ಬರುವ ಕಥಾ ಸಂದರ್ಭಗಳ ಸ್ಮರಣೆಗೆ ಅನುಕೂಲವಾಗುವುದು ಜನಪದ ಕಲೆಯ ಬಗ್ಗೆಯೂ ಪರಿಚಯವಾಗುವುದು. |
| **ವಸ್ತು ಚಿತ್ರಣ: (ವೀಕ್ಷಣಾ ಚಿತ್ರ)** | 10 | • ನಿತ್ಯ ಉಪಯೋಗಿ ಹಾಗೂ ಪ್ರಾಕೃತಿಕ ವಸ್ತುಗಳ ಚಿತ್ರಣ ಘನಮೂಲ ವಸ್ತುಗಳು, ಬಹುಭುಜ–ಘನಾಕೃತಿಗಳು, ಸ್ಥಂಭಮೂಲ ವಸ್ತುಗಳು, ಶಂಖಾಕೃತಿ ವಸ್ತುಗಳನ್ನು ಚಿತ್ರಿಸುವುದು.<br>• ಲಂಬಪಾತಳಿ, ಚಿತ್ರ ಪಾತಳಿ ಸಮಪಾತಳಿ ಅಲ್ಲದೆ ವಸ್ತುಗಳನ್ನು ಬೇರೆ ಬೇರೆ ಆಯಾಮಗಳಲ್ಲಿ ಕಾಣುವಂತೆ ಚಿತ್ರಿಸುವುದು. ವಸ್ತುವಿನ ಒಂದು, ಎರಡು ಹಾಗೂ ಮೂರು ಬದಿ ಕಾಣುವಂತೆ ಚಿತ್ರಿಸುವುದು.<br>• ಪೆನ್ಸಿಲ್ಲಿನ ಛಾಯಾ, ವರ್ಣ ಹಾಗೂ ವರ್ಣಲೇಪನದಿಂದ ಚಿತ್ರಿಸಿರುವ ವಸ್ತು ಸಜೀವವಾಗಿ ಹಾಗೂ ಸುಂದರವಾಗಿ ಕಾಣುವಂತೆ ಮಾಡುವುದು. | ಗಣಿತ ವಿಷಯ ಸಂಬಂಧಿಸಿದ ಆಕೃತಿಗಳ ಪರಿಚಯವಾಗುವುದು. (ರೇಖಾಗಣಿತ) |
| **ಅನುಕರಣ ಚಿತ್ರ: (ತದ್ರೂಪಿ ಚಿತ್ರ)** | 10 | • ಯಾವುದೇ ಚಿತ್ರಗಳನ್ನು ನೋಡಿ ಮುಕ್ತ ಹಸ್ತದಿಂದ ಯಥಾವತ್ತಾಗಿ ಚಿತ್ರಿಸುವುದು. ಆಕಾರದ ಉದ್ದ–ಅಗಲಗಳ ಪ್ರಮಾಣವನ್ನು ಬದಲಾವಣೆ ಮಾಡಿ ಯಥಾ ಸ್ಥಿತಿಯಲ್ಲಿ ಚಿತ್ರಿಸುವುದು ಅವಶ್ಯ, ಚಿತ್ರವನ್ನು ಅಗತ್ಯವಾದ ದೊಡ್ಡ ಪ್ರಮಾಣದಲ್ಲಿ ಚಿತ್ರಿಸುವುದು. | ಎಲ್ಲಾ ವಿಷಯಗಳ ಪರಿಕ್ಷಾ ಉಪಯೋಗಿ ಚಿತ್ರಾಭ್ಯಾಸಕ್ಕೆ ಪ್ರಯತ್ನಿಸುವುದು. |

ಕೃತಿ ರಚನೆಯೆಂದರೆ ಒಂದು ಕಿರು ಪ್ರಪಂಚ ಸೃಷ್ಟಿ.

| 1 | 2 | 3 | 4 |
|---|---|---|---|
| **ಪ್ರಕೃತಿ ಚಿತ್ರ ರಚನೆ: (ವೀಕ್ಷಣಾ ಚಿತ್ರ)** | 05 | • ಪ್ರಕೃತಿಯ ವಿವಿಧ ನೈಜವಸ್ತುಗಳನ್ನು ವೀಕ್ಷಿಸಿ ತದ್ರೂಪ ಚಿತ್ರ ರಚಿಸುವುದು.<br>• ಸಜೀವ ವಸ್ತುಗಳಾದ ಹೂ, ಎಲೆ, ಟೊಂಗೆ, ಹಣ್ಣು, ಪ್ರಾಣಿ, ಪಕ್ಷಿ, ಕೀಟಗಳು ಅಲ್ಲದೆ ನಿರ್ಜೀವವಾದ ಬೆಟ್ಟಗುಡ್ಡ, ಕಲ್ಲು, ನೆಲ, ಜಲ, ಆಕಾಶ, ಇತ್ಯಾದಿಗಳ ಸಂಯೋಜನೆಯ ನೈಜ ಚಿತ್ರ ರಚಿಸುವುದು.<br>• ಪೆನ್ಸಿಲ್ಲಿನಿಂದ ಛಾಯಾವರ್ಣ ಹಾಗೂ ಸೂಕ್ತ ವರ್ಣಲೇಪನದಿಂದ ಚಿತ್ರವನ್ನು ಅಂದಗೊಳಿಸುವುದು. | ಜೀವ ವಿಜ್ಞಾನ ಹಾಗೂ ಸಸ್ಯ ವಿಜ್ಞಾನದ ಅಧ್ಯಯನಕ್ಕೆ ಸಹಕಾರಿಯಾಗುವುದು. |
| **ನಕ್ಷಾರಚನೆ:** | 05 | • ಪ್ರಾಕೃತಿಕ ನಕ್ಷಾ ಚಿತ್ರ ರಚನೆ, ಹೂದಾನಿ, ಟೇಬಲ್ ಕ್ಲಾಥ್, ನೆಲಗಟ್ಟು ಕಂಠೀಹಾರ, ಪುಸ್ತಕದ ಹೊದಿಕೆ ಮುಂತಾದವುಗಳು.<br>• ಹೂ, ಎಲೆ, ಹಣ್ಣು, ಕಾಯಿ, ಪ್ರಾಣಿ, ಪಕ್ಷಿ, ಇತ್ಯಾದಿ ಪ್ರಾಕೃತಿಕ ಆಕಾರಗಳನ್ನು ನಿರ್ಧಿಷ್ಟ ಸ್ಥಳದಲ್ಲಿ ಹೊಂದಿಸಿ ವಿನ್ಯಾಸಗೊಳಿಸುವುದು.<br>• ಅಲಂಕಾರಿಕ ನಕ್ಷೆಗಳ ಚಿತ್ರ ರಚನೆ (ಉಪಯೋಗಿ ವಸ್ತುಗಳ ಮೇಲೆ) ಸಜೀವ ಅಥವಾ ನಿರ್ಜೀವ ವಸ್ತುಗಳ ಆಕಾರವನ್ನು ಬದಲಿಸಿ ಕಲಾ – ಕೌಶಲ್ಯತೆಯಿಂದ ಸುಂದರವಾದ ಸುಳುವಿನ ಆಕೃತಿಗಳನ್ನು ಅಲಂಕಾರಿಕ ನಕ್ಷೆಯಲ್ಲಿ ಬಳಸುವುದು.<br>• ಆಯತ, ಚೌಕ, ವೃತ್ತ ಅರ್ಧವೃತ್ತ, ತ್ರಿಭುಜ ಇತ್ಯಾದಿ ಭೂಮಿತಿ ಆಕಾರಗಳನ್ನು ಹೊಂದಿಸಿ ಭೂಮಿತಿ ನಕ್ಷೆಯನ್ನು ರಚಿಸುವುದು. | ಅಲಂಕಾರಿಕ ಗುಣಗಳ ಕಲ್ಪನೆಗೆ ಸಹಕಾರಿ.<br>ವಿಜ್ಞಾನ ಪಾಠಗಳಿಗೆ ಪೂರಕ. |
| **ಅಕ್ಷರ ಲೇಖನ: (ಚಿಂತನ ಚಿತ್ರ)** | 10 | • ವಿವಿಧ ವಿನ್ಯಾಸಗಳಲ್ಲಿ ಅಳತೆಗನುಸಾರ ಅಕ್ಷರ ಚಿತ್ರಲೇಖನ ಮಾಡುವುದು ಮತ್ತು ನುಡಿಗಟ್ಟುಗಳನ್ನು ಬರೆಸುವುದು. ಬೇರೆ-ಬೇರೆ ಭಾಷೆಗಳಲ್ಲಿ ನುಡಿಗಟ್ಟುಗಳನ್ನು ಬರೆಸುವುದು. | ಅಳತೆ ಬಗ್ಗೆ ಅರಿವು, ರೇಖಾ ಗಣಿತಕ್ಕೆ ಪೂರಕವಾಗಿದೆ |
| **ಕಥಾಚಿತ್ರ ರಚನೆ:** | 05 | • ರಾಮಾಯಣ, ಮಹಾಭಾರತ, ಪುರಾಣ ಕಥೆಗಳು ಐತಿಹಾಸಿಕ ಸನ್ನಿವೇಶ ಚಿತ್ರಗಳನ್ನು, ಸಂದರ್ಭಗಳನ್ನು ಹಿನ್ನೆಲೆಯೊಂದಿಗೆ ಚಿತ್ರಿಸುವುದು. | ಇತಿಹಾಸ ಪಾಠ ಸಂಬಂಧದ ತಿಳುವಳಿಕೆ. ಭಾಷಾ ವಿಷಯಗಳಲ್ಲಿನ ಕಥಾವಸ್ತುವಿಗೆ ಸಹಕಾರಿ. |

| 1 | 2 | 3 | 4 |
|---|---|---|---|
| **ರಂಗೋಲಿ ಚಿತ್ರ:** | 05 | • ಚುಕ್ಕಿ ಹಾಗೂ ರೇಖೆಗಳ ಜೋಡಣಾ ಚಿತ್ರ. ಪ್ರಾಕೃತಿಕ ಆಕಾರಗಳನ್ನು ಭೂಮಿತಿ ಆಕೃತಿಗಳನ್ನು ಅಲಂಕಾರಿಕವಾಗಿ ಹೊಂದಿಸಿ ರಚಿಸುವುದು. | |
| **ನೈಸರ್ಗಿಕ ಬಣ್ಣ ತಯಾರಿ:** | 05 | • ಸಸ್ಯಗಳಿಂದ ನೈಸರ್ಗಿಕ ಬಣ್ಣ ತಯಾರಿ.<br>• ಉದಾ: **ಹಸಿರುಬಣ್ಣ:** ಹಸಿರು ಎಲೆಗಳನ್ನು ಕತ್ತರಿಸಿ ನೀರಿನಲ್ಲಿ ಕುದಿಸಿ ಸೋಸಿ ಉಪಯೋಗಿಸುವುದು.<br>• **ಹಳದಿಬಣ್ಣ:** ಮುತ್ತುಗದ ಹೂ ಅಥವಾ ಚಂಡು ಹೂವನ್ನು ನೀರಲ್ಲಿ ಕುದಿಸಿ ಉಪಯೋಗಿಸುವುದು.<br>• **ಕೇಸರಿಬಣ್ಣ:** ನೀಲಿಬಣ್ಣದ ಹೂ (ಮಾರ್ನಿಂಗ್ ಗ್ಲೋರಿ) ನೀರಿನಲ್ಲಿ ನೆನಸಿ ಉಜ್ಜಿದಾಗ ನೀಲಿಬಣ್ಣ ಕೊಡುತ್ತದೆ.<br>• **ನೇರಳೆ ಬಣ್ಣ:** ಈರುಳ್ಳಿ ಸಿಪ್ಪೆಯನ್ನು ನೀರಲ್ಲಿ ಕುದಿಸಿ ಸೋಸಿದರೆ ನೇರಳೆ ಬಣ್ಣ ದೊರೆಯುತ್ತದೆ.<br>• ಗುಲಾಬಿ ಬಣ್ಣ: ಬೀಟ್‌ರೂಟ್‌ನ್ನು ನೀರಿನಲ್ಲಿ ಕುದಿಸಿ ಸೋಸಿ ಪಡೆಯಬಹುದು.<br>ವಿವಿಧ ಬಣ್ಣದ ಮಣ್ಣುಗಳಿಂದಲೂ ಬಣ್ಣಗಳನ್ನು ತಯಾರಿಸಬಹುದು.<br>ಇಟ್ಟಿಗೆಯಿಂದ ಕೆಂಪು–ಕೇಸರಿ ಬಣ್ಣ ತಯಾರಿಸಬಹುದು. ಇದ್ದಿಲಿನಿಂದ ಕಪ್ಪು ಬಣ್ಣ ತಯಾರಿಸಬಹುದು. ಅಲ್ಲದೆ ಪರಿಸರದಲ್ಲಿನ ಎಲ್ಲಾ ಬಣ್ಣದ ಹೂ, ವಿವಿಧ ಬಣ್ಣದ ಎಲೆಗಳು, ತರಕಾರಿ, ಹಣ್ಣುಗಳು ಇತ್ಯಾದಿಗಳನ್ನು ಬಳಸಿ ವರ್ಣಗಳನ್ನು ತಯಾರಿಸಬಹುದು. ಹೀಗೆ ತಯಾರಿಸಿದ ವರ್ಣಗಳಿಗೆ ಮಂದವಾಗಿರಿಸುವುದಕ್ಕೆ – ಗೋಂದನ್ನು ಮಿಶ್ರ ಮಾಡುವುದು. | ಇತಿಹಾಸ, ವಿಜ್ಞಾನ ಪಾಠಗಳಿಗೆ ಪೂರಕವಾಗಿಚೆ. (ಭಿತ್ತಿ ಚಿತ್ರ ರಚನೆಯಲ್ಲಿ ಉಪಯೋಗ) |
| **ಅನುಕರಣಾ ರಚನೆ:** | 05 | • ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಅಲ್ಲದೆ ಎಲ್ಲಾ ಭಾಷಾ ವಿಷಯಗಳು ಮತ್ತು ಆರೋಗ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿವಿಧ ಚಿತ್ರಗಳ ಅಭ್ಯಾಸ. | ಎಲ್ಲಾ ಪಠ್ಯ ವಿಷಯಗಳಿಗೂ ಸಹಕಾರಿ ಯಾಗಿದೆ. |

| 1 | 2 | 3 | 4 |
|---|---|---|---|
| **ಕಲಾ ಇತಿಹಾಸ ಮತ್ತು ರಸಗ್ರಹಣ: (ತಾತ್ವಿಕ: ಕಲಾಇತಿಹಾಸ: ಕಲಾರಸಸ್ವಾಧನೆ ಮತ್ತು ರಸಗ್ರಹಣ:)** | 05 | • ಚಾಲುಕ್ಯರ ಕಾಲದಿಂದ 20 ನೇ ಶತಮಾನದವರೆಗಿನ ಕಾಲದಲ್ಲಿ ಕಲೆಯ ಬೆಳವಣಿಗೆ ಸಂಕ್ಷಿಪ್ತ ಪರಿಚಯ. (ವಾಸ್ತು ಶಿಲ್ಪ)<br>• ಚಾಲುಕ್ಯರ ಕಾಲದ ಕಲೆ: ಬಾದಾಮಿ, ಐಹೊಳೆ, ಪಟ್ಟದಕಲ್ಲು ಇತ್ಯಾದಿ ಸ್ಥಳಗಳಲ್ಲಿನ ಕಲೆ.<br>• ಹೊಯ್ಸಳ ಕಾಲದ ಕಲೆ: ಬೇಲೂರು, ಹಳೇಬೀಡು, ಸೋಮನಾಥಪುರ ಮುಂತಾದವುಗಳಲ್ಲಿ ಕಲೆ.<br>• ವಿಜಯನಗರ ಕಾಲದ ಕಲೆ: ಹಂಪಿ, ಲೇಪಾಕ್ಷಿ, ಇತ್ಯಾದಿಗಳಲ್ಲಿ ಕಲಾ ಇತಿಹಾಸ.<br>• ಕದಂಬರ ಕಾಲದ ಕಲೆ: ಬನವಾಸಿಯಲ್ಲಿನ ಕಲೆ.<br>• ತಲಕಾಡಿನ ಗಂಗರ ಕಾಲದ ಕಲೆ, ಮೈಸೂರಿನ ಒಡೆಯರ ಕಾಲದ ಕಲೆ ಹೀಗೆ ಸಂಕ್ಷಿಪ್ತವಾಗಿ ಕರ್ನಾಟಕ ಕಲಾ ಇತಿಹಾಸದ ಬಗ್ಗೆ ಮಾಹಿತಿ ನಿಡುವುದು. ಕರ್ನಾಟಕ ಕಲಾವಿದರ ಪರಿಚಯ, ಕಲಾಕೃತಿಗಳ ರಸಸ್ವಾದ ಹಾಗೂ ರಸಗ್ರಹಣದ ಹೆಚ್ಚಿನ ಮಾಹಿತಿ ನೀಡುವುದು. | ಕರ್ನಾಟಕದ ಕಲೆ. ಇತಿಹಾಸ ತಿಳಿಯಲು ಸಹಕಾರಿಯಾಗುವುದು. ಕಾಲ–ಕಾಲಕ್ಕೆ ಕಲೆಯ ಬದಲಾವಣೆ ಗುರುತಿಸಲು ಸಹಕಾರಿಯಾಗಿದೆ. ಸಮಾಜ ವಿಜ್ಞಾನ ಪಾಠಕ್ಕೆ ಪೂರಕ. |
| **ಕೊಲ್ಯಾಜ್ ಕಲೆ ಮತ್ತು ಕಾಗದದ ಮೊಸಾಯಿಕ್ ಕಲೆ:** | 05 | • ಹಳೆ ಕಾಗದ, ಬಟ್ಟೆ, ಹಳೆ ಪತ್ರಿಕೆಗಳ ವರ್ಣಚಿತ್ರಗಳು, ಮರದ–ಗಿಡದ ತೊಗಟೆಗಳು, ಗರಿಗಳು, ಬಣ್ಣದ ಬೀಜಗಳು, ಬಳೆಚೂರು, ಗಾಜಿನ ಚೂರು ಅಲ್ಲದೆ ಪ್ರಾಕೃತಿಕವಾಗಿ ದೊರೆಯುವ ವಸ್ತುಗಳನ್ನು ಉಪಯೋಗಿಸಿ ಜೋಡಿಸಿ ಅಂಟಿಸುವ ಕ್ರಿಯೆಯಿಂದ ಚಿತ್ರಾಕೃತಿಗಳನ್ನು ತಯಾರಿಸುವುದು.<br>• ಹಳೆ ಪತ್ರಿಕೆಗಳು, ಆಹ್ವಾನ ಪತ್ರಿಕೆಗಳು ಇತ್ಯಾದಿಗಳಲ್ಲಿನ ಚಿತ್ರದ ಭಾಗಗಳನ್ನು ಕತ್ತರಿಸಿ–ಕಲಾತ್ಮಕವಾಗಿ ಜೋಡಿಸಿ ಅಂಟಿಸುವಿಕೆಯಿಂದ ಕಲಾಕೃತಿಗಳನ್ನು ತಯಾರಿಸುವುದು. | ಕಸದಿಂದ ರಸ ಉತ್ಪತ್ತಿ ಪರಿಸರ ಜ್ಞಾನಕ್ಕೆ ಸಹಕಾರಿ. |
| **ವಿನೋದ ಚಿತ್ರಗಳು: (ವ್ಯಂಗ್ಯ ಚಿತ್ರಕಲೆ) ಮಣ್ಣಿನ ಮಾದರಿ ತಯಾರಿ** | 05 | • ವ್ಯಕ್ತಿಯ ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ಹಾಸ್ಯಪ್ರಧಾನವಾಗಿ ಚಿತ್ರಿಸುವುದು. ಹಾಸ್ಯ ಸಂದರ್ಭಗಳನ್ನು ವ್ಯಂಗ್ಯವಾಗಿ ಚಿತ್ರಿಸುವುದು. ಅಪೇಕ್ಷಿತ ವಸ್ತುಗಳ ಮಾದರಿಗಳನ್ನು ಆಯಾಮಗಳಲ್ಲಿ ರಚಿಸುವುದು. ಪ್ರಾಣಿ, ಪಕ್ಷಿ ಅಲ್ಲದೆ ಮಾನವನ ವಿವಿಧ ಬಗೆಯ ಮಾದರಿಗಳನ್ನು ತಯಾರಿಸುವುದು. | ವಿಜ್ಞಾನ, ಗಣಿತ ಮಾದರಿಗಳನ್ನು, ಸಮಾಜವಿಜ್ಞಾನ ಮಾದರಿಗಳನ್ನು ತಯಾರಿಸಬಹುದಾಗಿದೆ. |

| 1 | 2 | 3 | 4 |
|---|---|---|---|
| **ಕಂಪ್ಯೂಟರ್ ಚಿತ್ರ ರಚನೆ:** | 06 | • ಕಂಪ್ಯೂಟರ್‌ನಲ್ಲಿ ಗ್ರಾಫಿಕ್(ಮಾಡುವ) ಬಳಸುವ ವಿಧಾನಗಳ ಬಗ್ಗೆ ತಿಳಿಸುವುದು. ಚಿತ್ರಗಳ ರಚನೆ, ಅಕ್ಷರ ಲೇಖನ, ಬಣ್ಣಗಳ ಸಂಯೋಜನೆ ಮುಂತಾದವುಗಳ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿನೀಡುವುದು. (ಡಿಜಿಟಲ್ ಪೇಂಟಿಂಗ್, Tux Paint, Photo Shop, Kolour Paint, Lab Exercises)) | ಕಂಪ್ಯೂಟರ್ ಶಿಕ್ಷಣದಲ್ಲಿ ಗ್ರಾಫಿಕ್, ಡಿಜಿಟಲ್ (ಪೋಸ್ಟರ್, ಭಾವಚಿತ್ರ, ಸಂಯೋಜನೆ ಹಲವು ವಿನ್ಯಾಸಗಳು ಮಾಡಲು ಸಹಕಾರಿ) |
| **ಕಾಗದ ಕಲೆ:** | 05 | • ವಸ್ತುಗಳು ಹಾಗೂ ಪ್ರಾಣಿ ಪಕ್ಷಿ ಮಾದರಿಗಳನ್ನು ತಯಾರಿಸುವುದು.<br>• ಹೂ ಹಾಗೂ ಹೂ ಗುಚ್ಛ ಮಾದರಿಗಳನ್ನು ತಯಾರಿಸುವುದು. ಬಣ್ಣದ ಕಾಗದದಲ್ಲಿ ಆಕಾರಗಳನ್ನು ಕತ್ತರಿಸಿ ವಿನ್ಯಾಸ ಕೃತಿಗಳನ್ನು ರಚಿಸುವುದು. ದಪ್ಪ ಕಾಗದದ ಉಪಯೋಗದಿಂದ ವಿವಿಧ ಘನಾಕೃತಿಗಳನ್ನು ತಯಾರಿಸುವುದು. | ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮಾದರಿ ತಯಾರಿಸಬಹುದಾಗಿದೆ. |
| **ಮುದ್ರಣಕಲೆ :** | 05 | • ಮರದ ಹಲಗೆ, ರಬ್ಬರ್ ಹಾಳೆಗಳು ಅಥವಾ ಮೆದುವಾದ ಮೇಲ್ಮೈ ವಸ್ತುಗಳ ಮೇಲೆ ಅಪೇಕ್ಷಿತ ಚಿತ್ರ, ವಿನ್ಯಾಸ ಚಿತ್ರ ಮುಂತಾದವುಗಳನ್ನು ಚಿತ್ರಿಸಿ, ಕೆತ್ತನೆ ಮುಖಾಂತರ ಉಬ್ಬು-ತಗ್ಗುಗಳನ್ನು ನಿರ್ಮಿಸಿ ಬಣ್ಣ ಲೇಪನದಿಂದ ಅಚ್ಚೊತ್ತುವುದು (ಮಿಶ್ರ ಬಣ್ಣಗಳ ಉಪಯೋಗ) (ಲಿನೋ ಕಟ್) | |
| **ಚಿತ್ರಕಲಾ ಸ್ಪರ್ಧೆ, ಪ್ರದರ್ಶನ ವಿಮರ್ಶೆ, ಸಂಗ್ರಹಣೆ :** | 02 | • ತರಗತಿ ಹಾಗೂ ಶಾಲಾ ಹಂತಗಳಲ್ಲಿ ಚಿತ್ರಕಲಾ ಸ್ಪರ್ಧೆಗಳನ್ನು ನಡೆಸುವುದು. ಉತ್ತಮ ಚಿತ್ರಕೃತಿಗಳ ಪ್ರದರ್ಶನ ಏರ್ಪಡಿಸುವುದು. ಉತ್ತಮ ಕಲಾಕೃತಿಗಳನ್ನು ಸಂಗ್ರಹಿಸುವುದು ಹಾಗೂ ಕಲಾ ಹೊತ್ತಿಗೆ (ಪುಸ್ತಕ) ಬಿಡುಗಡೆಗೊಳಿಸುವುದು. ಕಲಾ ವಿಮರ್ಶೆ ಮಾಡುವ ಬಗ್ಗೆ, ಕಲಾಕೃತಿಗಳ ವೀಕ್ಷಣಾ ಕ್ರಮದ ಬಗ್ಗೆ ತಿಳಿಸಿ ಹೇಳುವುದು | |
| **ಛಾಯಾ ಚಿತ್ರಕಲೆ:** | 02 | • ಛಾಯಾಚಿತ್ರದ ಹಿನ್ನೆಲೆ ಹೇಳುವುದು.<br>• ಕೆಮರಾ ಬಳಸುವ ವಿಧಾನ.<br>• ಚಿತ್ರದಲ್ಲಿಯ ನೆರಳು ಬೆಳಕು ವಿನ್ಯಾಸಗಳು, ಛಾಯಾಚಿತ್ರಗಳ ತಿಳುವಳಿಕೆ ಮಾಡುವುದು. | ವಿಜ್ಞಾನ ಪಾಠ ಸಮನ್ವಯ ಮಾಡುವುದು. |
| **ಟೋಪೋಗ್ರಾಫಿ ಕಲೆ** | | • ಈ ತರಗತಿಯಲ್ಲಿ ಕಡ್ಡಾಯವಾಗಿ ಟೋಪೋಗ್ರಾಫಿ ಮಾಡಿಸುವುದು. (ಶಾಲಾ ಎಲ್ಲ ಶಿಕ್ಷಕ ಪಾತ್ರ ಅತಿ ಮುಖ್ಯವಾಗಿದೆ. ಹಾಗೂ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಬಳಕೆ ಅಥವಾ ಪೋಷಕರು ಕೂಡ ಮಕ್ಕಳ ಜೊತೆಗೆ ಮಾಡಿಸಬಹುದಾಗಿದೆ) | |

## ವಿಷಯಗಳು – 10ನೆಯ ತರಗತಿ

**1. ಪ್ರಾಯೋಗಿಕ ವಿಭಾಗ:**

- ☆ ಸ್ಮರಣ ಚಿತ್ರ ರಚನೆ
- ☆ ಭೂ ದೃಶ್ಯ, (ಜಲದೃಶ್ಯ, ಪ್ರಕೃತಿ ದೃಶ್ಯ,) ನಿಸರ್ಗಚಿತ್ರ ರಚನೆ (ವೀಕ್ಷಣಾ ಚಿತ್ರ) (Land Scape Drawing)
- ☆ ಭಿತ್ತಿ ಚಿತ್ರ ರಚನೆ (ಪ್ರಚಾರ ಚಿತ್ರ) (ವಾಣಿಜ್ಯಕಲೆ) (Commercial Art / Advertisement Art)
- ☆ ಅಕ್ಷರ ಲೇಖನ (ಚಿಂತನ ಚಿತ್ರ) (Caligraphy)
- ☆ ವಸ್ತು ಚಿತ್ರ ರಚನೆ (ವೀಕ್ಷಣಾ ಚಿತ್ರ) (Model Drawing)
- ☆ ಕಲ್ಪನಾ ಚಿತ್ರ ರಚನೆ
- ☆ ಪಠ್ಯ ಪುಸ್ತಕದಲ್ಲಿ ಬರುವ (ಗಣೀತ ವಿಜ್ಞಾನ ಸಮಾಜ) ಪಾಠದ ಚಿತ್ರಗಳನ್ನು ತದ್ರೂಪ ಚಿತ್ರ ರಚನೆ (Copy and Draw) ಮತ್ತು ಸರಳ ಗೈ ಚಿತ್ರ (Free Hand)
- ☆ ಕಂಪ್ಯೂಟರ್ ಮೂಲಕ ಚಿತ್ರ ರಚನೆ
- ☆ ಛಾಯಾಗ್ರಹಣ ಚಿತ್ರಕಲೆ (Photo Visual Art) (Photography)
- ☆ ನಕ್ಷಾಚಿತ್ರ ರಚನೆ (ಪ್ರಾಕೃತಿಕ, ಅಲಂಕಾರಿಕ ಹಾಗೂ ಭೂಮಿತಿ ನಕ್ಷೆ)
- ☆ ಮಾದರಿಗಳ ತಯಾರಿ (ಕರಕುಶಲ ಕಲೆ)
- ☆ ಕೊಲ್ಯಾಜ್ ಕಲೆ
- ☆ ಮುಖವಾಡಗಳ ತಯಾರಿ
- ☆ ಕಾಗದ ಕಲೆ
- ☆ ಕೆತ್ತನೆ ಹಾಗೂ ಮುದ್ರಣ ಕಲೆ (ಲಿನೋ ಕಟ್)
- ☆ ಸ್ಪರ್ಧೆ, ಪ್ರದರ್ಶನ ಹಾಗೂ ಸಂಗ್ರಹಣೆ.

**2. ತಾತ್ವಿಕ ವಿಭಾಗ:** ಪ್ರತಿ ಅವಧಿಯಲ್ಲಿ ಕಲಾ ಇತಿಹಾಸವನ್ನು ಸ್ವಲ್ಪ ಪರೋಕ್ಷವಾಗಿ ತಿಳಿಸಿ ಹೇಳಿ ಚಿತ್ರಪಾಠಕ್ಕೆ ಪ್ರೇರೇಪಿಸುವುದು, ಶಿಕ್ಷಕನ ಉತ್ತಮ ಪಾತ್ರ.

1) ಕಲಾ ಇತಿಹಾಸ ಭಾರತೀಯ ಕಲೆ ಪಾಶ್ಚಿಮಾತ್ಯ ಕಲೆ, (ಸಂಕ್ಷಿಪ್ತವಾಗಿ) 2) ಕಲಾವಿದರ ಪರಿಚಯ 3) ಕಲಾ ರಚನೆಯ ಪ್ರಕಾರ, ತಂತ್ರಗಳು. 4) ಸ್ಥಳೀಯ ದೇವಾಲಯ, ಶಿಲ್ಪಕಲೆಗಳು ಮುಂತಾದವುಗಳನ್ನು ತಿಳಿಸಿ ಹೇಳುವುದು. 5) ಕಲಾರಸಸ್ವಾದನೆ ಮತ್ತು ರಸಗ್ರಹಣ.

## ಪಠ್ಯವಸ್ತು – 10ನೆಯ ತರಗತಿ

### ದೊರಕುವ ಒಟ್ಟು ಅವಧಿಗಳು: ವಾರಕ್ಕೆ 3 ಅವಧಿಗಳಂತೆ ವರ್ಷಕ್ಕೆ 105 ಅವಧಿಗಳು

| ಬೋಧನಾಂಶಗಳು | ಅವಧಿ | ಚಟುವಟಿಕೆ | ಪಠ್ಯಚಟುವಟಿಕೆಗಳಿಗೆ ಹೇಗೆ ಪೂರಕವಾಗಿದೆ |
|---|---|---|---|
| **ಸ್ಮರಣ ಚಿತ್ರರಚನೆ: (ಚಿಂತನ ಚಿತ್ರ)** | 10 | • ನಿತ್ಯ ಜೀವನದಲ್ಲಿ ಒಳ ಮತ್ತು ಹೊರಗೆ ಕಾಣಬರುವ ಸಂದರ್ಭ ಸನ್ನಿವೇಶಗಳನ್ನು ಹಿನ್ನೆಲೆ ಪ್ರಧಾನವಾಗಿ ಚಿತ್ರಿಸುವುದು.<br>• ಪ್ರಾಣಿ, ಪಕ್ಷಿ ಹಾಗೂ ಮಾನವನ ದಿನನಿತ್ಯದ ಚಟುವಟಿಕೆಯುಳ್ಳ ಚಿತ್ರಗಳನ್ನು ಹಿನ್ನೆಲೆಯೊಂದಿಗೆ ಹಾಗೂ ಪೂರಕ ಸಹ ಆಕೃತಿ–ಸಮೂಹಗಳೊಂದಿಗೆ ಚಿತ್ರಿಸುವುದು.<br>• ರಾಷ್ಟ್ರೀಯ ಹಬ್ಬಗಳು, ಸಾಂಪ್ರದಾಯಿಕ ಹಬ್ಬಗಳು ಇತ್ಯಾದಿಗಳ ಚಿತ್ರವನ್ನು ಹಿನ್ನೆಲೆ ಜೋಡಣೆಯೊಂದಿಗೆ ಚಿತ್ರಿಸುವುದು.<br>• ಸೂಕ್ತ ಆಯಾಮಗಳು ಕಾಣಿಸುವಂತೆ ಚಿತ್ರಗಳಿಗೆ ಪೆನ್ಸಿಲ್ ಅಥವಾ ಬಣ್ಣಗಳಿಂದ ಪೂರ್ಣಗೊಳಿಸುವುದು. ವರ್ಣಲೇಪನದ ವಿವಿಧ ತಂತ್ರಗಳ ಬಗ್ಗೆ ತಿಳಿಸುವುದು. | ಭಾಷಾ ವಿಷಯಗಳಲ್ಲಿನ ಕಥಾ ವಸ್ತುವಿಗೆ ಸಹಕಾರಿಯಾಗಿದೆ.<br>ಸಮಾಜ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿ ದಂತೆ ಪೂರಕವಾಗಿದೆ.<br>ಜೀವಶಾಸ್ತ್ರ ಅಧ್ಯಯನಕ್ಕೆ ಸಹಕಾರ |
| **ಪ್ರಕೃತಿ ದೃಶ್ಯ ಚಿತ್ರಣ (ವೀಕ್ಷಣಾ ಚಿತ್ರ) (Land scape)** | 10 | • ಸುಂದರವಾಗಿ ಕಾಣುವ ಪ್ರಕೃತಿಯಲ್ಲಿ ದೃಷ್ಟಿಗೆ ನಿಲುಕುವ ವಸ್ತುಗಳನ್ನು ಚೌಕಟ್ಟಿನ ಆಯ್ಕೆಯೊಂದಿಗೆ ಸಂಯೋಜಿಸಿ ಯಥಾವತ್ತಾಗಿ ಚಿತ್ರಿಸುವುದು ಮತ್ತು ನೈಜ ರೀತಿಯಲ್ಲಿ ಬಣ್ಣದಿಂದ ಪೂರ್ಣಗೊಳಿಸುವುದು. ತಮ್ಮ ಪರಿಸರದಲ್ಲಿನ ಹೂದೋಟ, ಶಾಲಾ ಆವರಣ, ಆಟದ ಮೈದಾನ, ಕೋಟೆ, ಬೆಟ್ಟ, ಕೆರೆ, ನದಿ, ಹಳ್ಳ, ಜಲಪಾತ, ಸಮುದ್ರ ಇತ್ಯಾದಿ ಆಕರ್ಷಣೀಯ ಸ್ಥಳಗಳನ್ನು ಆಯ್ಕೆ ಮಾಡಿ ಸಂಯೋಜಿಸಿ ಚಿತ್ರಿಸುವುದು. ವಿವಿಧ ತಂತ್ರಗಾರಿಕೆಯ ಬಣ್ಣ ಲೇಪನ ವಿಧಾನ ತಿಳಿಸುವುದು (Flooting method, wash method) ಬಣ್ಣ ಹರಿಬಿಡುವುದು. ಬಣ್ಣ ನಿಯಮಿತವಾಗಿ ಬಳಸುವುದು. | ಪರಿಸರ ಪರಿಚಯಕ್ಕೆ ಸಹಕಾರಿಯಾಗಿದೆ |

| 1 | 2 | 3 | 4 |
|---|---|---|---|
| **ವ್ಯಂಗಚಿತ್ರ ರಚನೆ:<br>ವಾಣಿಜ್ಯ ಕಲೆ:<br>ಪ್ರಚಾರ ಕಲೆ:<br>(ಚಿಂತನಾ ಚಿತ್ರ)** | 04 | • ಉದ್ದೇಶಿತ ವಿಷಯ ಪ್ರಚಾರ ಪಡಿಸುವ ಚಿತ್ರಣ (ಬಿಂಬಿಸುವ) ಸಮಾಜದ ಅಂಕುಡೊಂಕುಗಳು, ರಾಜಕೀಯ, ಪ್ರಮುಖ ಹಿರಿಯರ, ಕಿರಿಯರ ಮುಖಗಳ ರಚನೆಯ ಅಭಿವ್ಯಕ್ತಿಗೆ ಅವಕಾಶ ರೇಖೆಗಳಿಂದ ಹೊರಹೊಮ್ಮಿ ಚಿತ್ರರಚನೆಯ ಆನಂದ ತಿಳಿಯಪಡಿಸುವ ವಿಸ್ತಾರವಾದ ವಿಷಯವನ್ನು ಸರಳ ಚಿತ್ರ ಹಾಗೂ ಸಂಕ್ಷಿಪ್ತ ಅಕ್ಷರ ಲೇಖನ ಮುಖಾಂತರ ಬಿಂಬಿಸುವ ಚಿತ್ರಣ. (ಸಂಕೇತ ಚಿತ್ರಗಳು – Monogram / Amblam)<br>• (ಸಾರ್ವಜನಿಕ ಸಂವಹನಕ್ಕಾಗಿ, ಮಾರಾಟದ, ಸೇವೆಗಳ, ಕಲ್ಪನೆಗಳ ಉತ್ತೇಜನಕ್ಕಾಗಿ ವಿನ್ಯಾಸ ರೂಪದ ಚಿತ್ರಣ) | ಪತ್ರಿಕೆಗಳನ್ನು ವ್ಯಂಗ್ಯಚಿತ್ರಗಳನ್ನು ವೀಕ್ಷಿಸುವುದಕ್ಕೆ ಸಹಕಾರಿ |
| **ಅಕ್ಷರ ಲೇಖನ<br>ಚಿತ್ರಣ:<br>(ಚಿಂತನ ಚಿತ್ರ)** | 08 | • ವಿವಿಧ ರೀತಿಯ ವಿನ್ಯಾಸಗಳ ಫಲಕ ರಚನೆ. ನಾಮಫಲಕಗಳನ್ನು ರಚಿಸುವುದು. ಜಾಹಿರಾತು ಫಲಕಗಳನ್ನು ರಚಿಸುವುದು. ನುಡಿಗಟ್ಟು, ಗಾದೆ ಮಾತುಗಳ ಬರವಣಿಗೆ ಚಾರ್ಟ್‌ಗಳನ್ನು ತಯಾರಿಸುವುದು. | ಭಾಷಾ ಪಾಠಕ್ಕೆ ಸಮನ್ವಯ ಗೊಳಿಸುವುದು. |
| **ವಸ್ತುಚಿತ್ರ ರಚನೆ<br>(Model Drawing)<br>(ವೀಕ್ಷಣ ಚಿತ್ರ):** | 10 | • ಸ್ವಾಭಾವಿಕ ವಸ್ತುಗಳನ್ನು ಅಥವಾ ಕೃತ್ರಿಮ ವಸ್ತುಗಳನ್ನು ವಿಶಿಷ್ಟ ರೀತಿಯಲ್ಲಿ ಜೋಡಿಸಿ ಮುಂದಿರಿಸಿಕೊಂಡು ಚಿತ್ರಿಸುವುದು.<br>• ವಿವಿಧ ಆಯಾಮಗಳ ಕಲ್ಪನೆ ಬರುವ ಹಾಗೆ ಚಿತ್ರಿಸಿ ನೈಜರೀತಿಯಲ್ಲಿ ವರ್ಣಲೇಪನ ಮಾಡುವುದು.<br>• ತಾಜಾ ಹಣ್ಣು ತರಕಾರಿಗಳು, ಬಣ್ಣದ ವಸ್ತುಗಳು ಮುಂತಾದವುಗಳ ಸಂಯೋಜನಾ ಚಿತ್ರಣ. | |
| **ಕಲ್ಪನಾ ಚಿತ್ರರಚನೆ:** | 05 | • ಸಮಕಾಲೀನ ವಿದ್ಯಮಾನಗಳು, ಪ್ರಕೃತಿ ವೈಚಿತ್ರ್ಯ, ಘಟನೆಗಳು, ಪ್ರಕೋಪ ಮುಂತಾದ ಅಪೇಕ್ಷಿತ ಚಿತ್ರಗಳನ್ನು ಅಲ್ಲದೆ ವಿವಿಧ ಭಾವನೆಗಳನ್ನು ಬಿಂಬಿಸುವ ಚಿತ್ರಗಳನ್ನು ರಚಿಸುವುದು.<br>• ಮೂರ್ತಶೈಲಿ ಹಾಗೂ ಅಮೂರ್ತಶೈಲಿ ರಚನೆಗೆ ಅವಕಾಶ. (Abstract Style) ಪೌರಾಣಿಕ, ಐತಿಹಾಸಿಕ ಹಿನ್ನೆಲೆ ಕಥಾ ಸಂದರ್ಭಗಳ ಚಿತ್ರಗಳನ್ನು ಸ್ವಂತಶೈಲಿಯಲ್ಲಿ ರಚನೆಗೆ ಅವಕಾಶ ಕಲ್ಪಿಸುವುದು. ಕ್ರಿಯಾತ್ಮಕವಾಗಿ ವಿವಿಧ ಮಾಧ್ಯಮಗಳಲ್ಲಿ ಚಿತ್ರಿಸುವುದು. | ಇತಿಹಾಸ ಪಾಠಕ್ಕೆ ಸಮನ್ವಯ ಗೊಳಿಸುವುದು. ಇತಿಹಾಸ ಗುರುತಿಸುವಿಕೆ ಸಹಕಾರಿಯಾಗಿದೆ. |

| 1 | 2 | 3 | 4 |
|---|---|---|---|
| **ತಾತ್ವಿಕ:**<br>**ಕಲಾ ಇತಿಹಾಸ ಕಲಾರಸಸ್ವಾದನೆ ಮತ್ತು ರಸಗ್ರಹಣ:** | 05 | • 8ನೇ 9ನೇ ತರಗತಿಯಲ್ಲಿ ಆಯ್ದುವಿಷಯಕ್ಕಿಂತಲೂ ಸ್ವಲ್ಪ ಹೆಚ್ಚು ವಿಷಯ ಆಯ್ಕೆಮಾಡಿ ಪರಣಾಮಕಾರಿಯಾಗಿ, ಮನದಟ್ಟಾಗುವಂತೆ ವಿವರಿಸುವುದು. ಇದರಿಂದ ವಿದ್ಯಾರ್ಥಿಗಳನ್ನು ಕಲಾಸಂಪನ್ನರನ್ನಾಗಿ ಮಾಡುವುದು | |
| **ತದ್ರೂಪ ಚಿತ್ರರಚನೆ: (Copy and Draw) (ಅನುಕರಣ ಚಿತ್ರ)** | 05 | • ಪಠ್ಯಪುಸ್ತಕದಲ್ಲಿರುವ ಚಿತ್ರಗಳನ್ನು ಪ್ರಮಾಣಬದ್ಧವಾಗಿ ಚಿತ್ರಿಸುವುದು.<br>• ಪರೀಕ್ಷಾ ಉಪಯೋಗಿ ಚಿತ್ರಾಭ್ಯಾಸಕ್ಕೆ ಹೆಚ್ಚಿನ ಗಮನ ನೀಡುವುದು.<br>• ಬೇರೆ–ಬೇರೆ ಮ್ಯಾಗಝೀನ್‌ಗಳಲ್ಲಿ ಪಠ್ಯಪುಸ್ತಕಗಳಲ್ಲಿಯ ಅಥವಾ ಕ್ಯಾಲೆಂಡರ್‌ಗಳಲ್ಲಿ ಚಿತ್ರಗಳನ್ನು ನೋಡಿ ಚಿತ್ರಿಸುವುದು. | ಎಲ್ಲ ವಿಷಯದ ಪಾಠಕ್ಕೆ ಸಮನ್ವಯಗೊಳಿಸುವುದು. |
| **ಕಂಪ್ಯೂಟರ್ ಮೂಲಕ ಚಿತ್ರರಚನೆ:** | 05 | • ಹೊಸ ತಂತ್ರಗಾರಿಕೆಯಿಂದ ಸಂಯೋಜನೆಯ ಚಿತ್ರಾಕೃತಿ ರಚನೆ.<br>• ಪಾಠ ಯೋಜನೆ (Project work) (PPT)<br>• ಗ್ರಾಫಿಕ್ ಡಿಸೈನ್, ಡಿಜಿಟಲ್ ಪೇಂಟಿಂಗ್ ವಿನ್ಯಾಸ ತಯಾರಿ.<br>• ವಾಣಿಜ್ಯ ಕಲೆಯ ರಚನೆ, ವರ್ಣ ಸಂಯೋಜನೆಯೊಂದಿಗೆ ಬಗೆ ಬಗೆಯ ಚಿತ್ರಾಕೃತಿಗಳನ್ನು ರಚಿಸುವುದು. | ಕಂಪ್ಯೂಟರ್ ಶಿಕ್ಷಣ ಕಲಿಕೆಗೆ ಸಹಕಾರಿ ಯಾಗಿದೆ. ಎಲ್ಲ ವಿಷಯಗಳಲ್ಲಿ ಬರುವ ಚಿತ್ರಕಥೆ, ವಿಷಯವಾಗಿ (Project Work) ಯೋಜನೆಗೆ ಸಹಕಾರಿ |
| **ಛಾಯಾಗ್ರಹಣ ಕಲೆ:** | 03 | • ಛಾಯಾಗ್ರಹಣದ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡುವುದು. ವಿವಿಧ ಬಗೆ ಕ್ಯಾಮೆರಾ ಅವುಗಳ ಯಾಂತ್ರಿಕತೆಯ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿಕೊಡುವುದು. ಸಂಯೋಜನೆ, ನೆರಳು–ಬೆಳಕಿನ ಅರಿವಿನ ಬಗ್ಗೆ ತಿಳಿಸಿಹೇಳುವುದು. | ವಿಜ್ಞಾನಪಾಠಕ್ಕೆ ಸಮನ್ವಯಗೊಳಿಸುವುದು. ಭೌತವಿಜ್ಞಾನದ ಮಸೂರಗಳ ಬಗ್ಗೆ ಪರಿಚಯವಾಗುವುದು. |
| **ನಕ್ಷಾ ಚಿತ್ರರಚನೆ:** | 10 | • ಪ್ರಾಕೃತಿಕ ನಮೂನೆಗಳನ್ನು ಅಳವಡಿಸಿ ನಕ್ಷಾ ಚಿತ್ರ ರಚಿಸುವುದು. ಅಲಂಕಾರಿಕ ನಕ್ಷಾ ಚಿತ್ರ ರಚಿಸುವುದು. ಸೂಕ್ತ ವರ್ಣಸಂಯೋಜನೆಯೊಂದಿಗೆ ನಕ್ಷಾಚಿತ್ರಗಳಿಗೆ ಹೆಚ್ಚಿನ ಮೆರುಗು ನೀಡುವುದು.<br>• ವಿವಿಧ ವಸ್ತುಗಳ ಮೇಲೆ ನಕ್ಷಾಪ್ರಕಾರಗಳನ್ನು ಅಳವಡಿಸಿ ಅಲಂಕಾರಿಕವಾಗಿ ಅಂದ ಕಾಣಿಸುವುದು. ಸೌಂದರ್ಯಪ್ರಜ್ಞೆ, ಜೋಡಣೆಯ ಜಾಣ್ಮೆ ಮುಂತಾದ ಗುಣಗಳನ್ನು ಬೆಳೆಸುವುದು. | |

| 1 | 2 | 3 | 4 |
|---|---|---|---|
| ಮಾದರಿಗಳ ತಯಾರಿ: | 05 | • ಕಾಗದ, ದಪ್ಪಕಾಗದ, ರಟ್ಟು ಮುಂತಾದ ವಸ್ತುಗಳಿಂದ ಹಲವು ಮಾದರಿಗಳನ್ನು ಕತ್ತರಿಸುವ ಮೂಲಕ ಆಕೃತಿಗಳನ್ನು ತಯಾರಿಸುವುದು.<br>• ವಿಜ್ಞಾನ ಮಾದರಿಗಳು, ಗಣಿತ ಮಾದರಿಗಳು ಇತ್ಯಾದಿ ತಯಾರಿಸುವುದು.<br>• ಪ್ರಾಕೃತಿಕ ವಸ್ತುಗಳು ಅಲ್ಲದೆ ಇತರೆ ಉಪಯೋಗಿ ವಸ್ತುಗಳ ಮಾದರಿ ತಯಾರಿಸುವುದು.<br>• ಮನೆ, ಕಟ್ಟಡಗಳ ಮಾದರಿ ತಯಾರಿಸುವುದು. | ಎಲ್ಲಾ ಪಠ್ಯ ವಿಷಯಗಳಲ್ಲಿ ಬರಬಹು ದಾದ ಮಾದರಿಗಳ ತಯಾರಿಕೆಗೆ ಅನುಕೂಲವಾಗಿದೆ. |
| ಕೊಲ್ಯಾಜ್ ಚಿತ್ರರಚನೆ: | 05 | • ಸ್ವಾಭಾವಿಕ ವಸ್ತುಗಳು, ಸಿದ್ಧವಸ್ತುಗಳು ಹಾಗೂ ಅನುಪಯುಕ್ತ ವಸ್ತುಗಳನ್ನು ಬಳಸಿ ನಿರ್ಧಿಷ್ಟ ಚೌಕಟ್ಟಿನಲ್ಲಿ ಕಲಾತ್ಮಕವಾಗಿ ಜೋಡಿಸಿ, ಅಂಟಿಸುವಿಕೆಯಿಂದ ಅಂದವಾದ ಕಲಾಕೃತಿಗಳನ್ನು ರಚಿಸುವುದು. | |
| ಮುಖವಾಡಗಳ ತಯಾರಿ | 05 | • ಪ್ರಾಣಿ, ಪಕ್ಷಿ, ಮನುಷ್ಯ, ಇತ್ಯಾದಿಗಳ ಮುಖವಾಡಗಳನ್ನು ತಯಾರಿಸುವುದು. | |
| ಕಾಗದಕಲೆ: | 05 | • ಬಣ್ಣದ ಕಾಗದ ಉಪಯೋಗದಿಂದ ವಿವಿಧ ಹೂ, ಹೂ–ಗೊಂಚಲು, ಹಾರ, ವಿಧದ ವಸ್ತುಮಾದರಿಗಳು, ಪ್ರಾಣಿ, ಪಕ್ಷಿ ಮಾದರಿಗಳನ್ನು ತಯಾರಿಸುವುದು. ಶುಭಾಶಯ ಪತ್ರ ರಚಿಸುವುದು. ವಿಜ್ಞಾನ ಗಣಿತ, ಸಮಾಜ ಪಾಠಗಳ ಮಾದರಿಗಳನ್ನು ತಯಾರಿಸುವುದು. | ವಿಜ್ಞಾನ, ಗಣಿತ, ಸಮಾಜಪಾಠಗಳಿಗೆ ಸಮನ್ವಯ ಮಾಡುವುದು. |
| ಲಿನೋ ಕೆತ್ತನೆ ಹಾಗೂ ಮುದ್ರಣ ಕಲೆ: | 05 | • ಮೃದು ಮರದ ಹಲಗೆ ಮೇಲೆ, ಮಣ್ಣಿನ ಹಲಗೆ ಮೇಲೆ, ದಪ್ಪ ರಟ್ಟಿನ ಮೇಲೆ, ರಬ್ಬರ್ ಹಾಳೆ ಮೇಲೆ ಚಿತ್ರ ರಚಿಸಿ ಉಬ್ಬು–ತಗ್ಗುಗಳ ಕೆತ್ತನೆ ಮಾಡಿ ಕೃತಿ ತಯಾರಿಸುವುದು.<br>ಹೀಗೆ ತಯಾರಿಸಿದ ಕೃತಿ ಮೇಲೆ ಸೂಕ್ತ ವರ್ಣ ಲೇಪಿಸಿ ಹಾಳೆ ಅಥವಾ ಬಟ್ಟೆ ಮೇಲೆ ಮುದ್ರಿಸುವುದು. | |

| 1 | 2 | 3 | 4 |
|---|---|---|---|
| **ಚಿತ್ರಕಲಾ ಇತಿಹಾಸ (ತಾತ್ವಿಕ) ಸ್ಪರ್ಧೆ, ಪ್ರದರ್ಶನ, ಸಂಗ್ರಹಣೆ:** | 05 | • ತರಗತಿವಾರು ಹಾಗೂ ಶಾಲಾವಾರು ಚಿತ್ರಕಲಾ ಸ್ಪರ್ಧೆ ನಡೆಸುವುದು. ಪ್ರದರ್ಶನ ಏರ್ಪಡಿಸುವುದು, ಅಂತರ್ ಶಾಲಾ ಚಿತ್ರಸ್ಪರ್ಧೆಗಳು, ಚಿತ್ರ ಪ್ರದರ್ಶನಗಳ್ನು ಏರ್ಪಡಿಸುವುದು, ವಿದ್ಯಾರ್ಥಿಗಳ ಚಿತ್ರ ರಚನೆಯ ವಿಶೇಷತೆಯನ್ನು ಮೆಚ್ಚುವುದು, ಪ್ರೋತ್ಸಾಹಿಸುವುದು. ಚಿತ್ರ ಕೃತಿಗಳನ್ನು ಸಂಗ್ರಹಿಸಿ ಕಲಾಪುಸ್ತಕ ಬಿಡುಗಡೆಗೊಳಿಸುವುದು. | |
| **ಒಟ್ಟು ಅವಧಿಗಳು** | 105 | | |

## ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷಣ ಪ್ರೋತ್ಸಾಹ

"ಚಿತ್ರಕಲೆ ಪ್ರಪಂಚದ ಎಲ್ಲ ಜನಾಂಗಗಳಿಗೆ ಅರಿವಾಗುವ ಲಿಪಿ" ಅಲ್ಲದೆ ಎಲ್ಲ ಕುಶಲ ಕಲೆಗಳಿಗೆ ಮಾತೃ ಸ್ಥಾನದಲ್ಲಿದೆ.

ಪ್ರತೀ ಪಾಠ ಮುಗಿದ ನಂತರ ಮಕ್ಕಳಿಂದ ರಚಿಸಲ್ಪಟ್ಟ ಚಿತ್ರಗಳನ್ನು ನಿಗದಿ ಪಡಿಸಿದ ಪ್ರದರ್ಶನ ಮಾಡಿ ಚಿತ್ರಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಪ್ರೋತ್ಸಾಹಿಸುವುದು. ಬೇರೆ ಶಾಲೆ, ಸಂಘ ಸಂಸ್ಥೆಗಳು ನಡೆಸುವ ಕಲಾ ಪ್ರದರ್ಶನಗಳಿಗೆ ಕಲಾ ಕೃತಿಗಳನ್ನು ಕಳಿಸುವುದು ಮತ್ತು ಸಕ್ರಿಯವಾಗಿ ಭಾಗವಹಿಸುವುದು ಉತ್ತಮ ಹವ್ಯಾಸ

ಶೈಕ್ಷಣಿಕ ವರ್ಷದ ಕೆಲವು ವಿಶೇಷ ಸಂದರ್ಭಗಳಲ್ಲಿ ಮಕ್ಕಳಿಗೆ ತರಗತಿವಾರು ಚಿತ್ರಕಲಾ ಸ್ಪರ್ಧೆಗಳನ್ನು ಏರ್ಪಡಿಸುವುದು. ..ಸ್ವಾತಂತ್ರ್ಯ ದಿನಾಚರಣೆ, ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ, ಗಣರಾಜ್ಯೋತ್ಸವ, ಶಾಲಾ ವಾರ್ಷಿಕೋತ್ಸವ ಅಲ್ಲದೆ ಇತರ ಸಂದರ್ಭಗಳು.

ಸ್ಪರ್ಧೆಗಳಿಂದ ಮಕ್ಕಳಲ್ಲಿ ಕೌಶಲ್ಯ, ಆಸಕ್ತಿ, ಕುತೂಹಲ, ತುಲನಾತ್ಮಕತೆ, ಇತ್ಯಾದಿ ಅಂಶಗಳು ಬೆಳೆಯುವುವು.

ಶಿಕ್ಷಣ ಇಲಾಖಾ ವತಿಯಿಂದ, ಇತರೆ ಇಲಾಖಾ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಂದ ಏರ್ಪಡಿಸುವ ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಮಕ್ಕಳಿಗೆ ತರಬೇತಿ ಮಾರ್ಗದರ್ಶನ ನೀಡುವುದು.

ವಿಜ್ಞಾನ ಚಟುವಟಿಕೆ ಮಾದರಿ ರಚನೆ, ಭೂಪಟ ರಚನೆ, ಶಾಲಾ ಹಬ್ಬಗಳಲ್ಲಿ, ವಿದ್ಯಾರ್ಥಿಗಳಿಂದ ಸಹಕಾರದಿಂದ ಮಾದರಿಗಳನ್ನು ತಯಾರಿಸುವುದು ಹಾಗೂ ಪ್ರದರ್ಶಿಸುವುದು, ಉತ್ತೇಜನ ನೀಡುವುದು.

ವಾರ್ಷಿಕೋತ್ಸವ ಸಂದರ್ಭದಲ್ಲಿ ಮಕ್ಕಳಿಂದ ಚಿತ್ರಕಲಾ ಅಲ್ಲದೆ, ಇತರೆ ಕಲಾ ಚಟುವಟಿಕೆಗಳ ಸಾರ್ವಜನಿಕ ಪ್ರದರ್ಶನ ವ್ಯವಸ್ಥೆ ಮಾಡುವುದು. (ಇತರೆ ಸಂದರ್ಭಗಳಲ್ಲಿಯೂ ಪ್ರದರ್ಶನ ವ್ಯವಸ್ಥೆ ಮಾಡಬಹುದಾಗಿದೆ)

ವರ್ಷದ ಕೊನೆಯ ಚಟುವಟಿಕೆಯಾಗಿ "ಚಿತ್ರಕಲಾ ಕಿರು ಹೊತ್ತಿಗೆ" ಪುಸ್ತಕ (ಮ್ಯಾಗಝಿನ್) ತಯಾರಿಸುವುದು. ಮಕ್ಕಳಿಂದಲೇ, ರಚಿತವಾದ ಚಿತ್ರಕೃತಿಗಳನ್ನು ಆಯ್ದುಕೊಂಡು ಇತರೆ ಕಲಾತ್ಮಕ ಚಟುವಟಿಕೆ ಬರಹಗಳೊಂದಿಗೆ ಕೂಡಿದ ಪುಸ್ತಕ ರಚಿಸಿ ಹೊರತರುವುದು.

ಹಸ್ತ ಕಿರು ಹೊತ್ತಿಗೆಗಳ ಪ್ರದರ್ಶನ ಹಾಗೂ ಸ್ಪರ್ಧೆಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಶ್ಲಾಘಿಸುವುದು.